ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 14 | ಸಂಚಿಕೆ 16 | ಏಪ್ರಿಲ್ 13-19, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com



ಬಂಡವಾಳವಾದವೆಂಬ ಕೊರೋನಾ ಜಾಡ್ಯ

ಬಂಡವಾಳಶಾಹಿ, ಸಮಾಜವಾದ ಮತ್ತು ಮಹಾಮಾರಿ



ಕೋವಿಡ್-19 ಕ್ರಮ ವಹಿಸದಿದ್ದರೆ ಆಹಾರ ಬಿಕ್ಕಟ್ಟು





ಕೋವಿಡ್ ಪರಿಹಾರದಲ್ಲಿ ಜಿಪುಣತನ ಬೇಡ

ಸಾಂಕೇತಿಕ ಆಚರಣೆಗಳು ಸಾಕು ತುರ್ತು ಕ್ರಮಗಳು ಬೇಕು



ಜನಗಳ ಆತಂಕಗಗಳಿಗೆ ಸಮರೋಪಾದಿಯಲ್ಲಿ ಗಮನಕೊಡಿ–ಎಡಪಕ್ಷಗಳ ಆಗ್ರಹ

ದೇಶ ಕೊವಿಡ್–19 ಮಹಾಮಾರಿ ಸಮುದಾಯದಲ್ಲಿ ಹರಡದಂತೆ ತಡೆಯುವ 21 ದಿನಗಳ ಲಾಕ್‌ಡೌನಿನ ಎರಡನೇ ವಾರವನ್ನು ಪ್ರವೇಶಿಸಿದೆ. ಈ ಮೊದಲ ವಾರದಲ್ಲಿ ಹಲವು ಸಮಸ್ಯೆಗಳು ತೀಕ್ಷ್ಣವಾಗಿ ಎದ್ದು ಬಂದಿವೆ. ಅವನ್ನು ತುರ್ತಾಗಿ ಪರಿಹರಿಸಬೇಕಾಗಿದೆ.

ಇವನ್ನು ಗುರುತಿಸಿ ಈ ಬಗ್ಗೆ ಸರಕಾರ ಕೈಗೊಳ್ಳಬೇಕೆಂದಿರುವ ಕ್ರಮಗಳನ್ನು ನಿರೀಕ್ಷಿಸಿದ್ದವರಿಗೆ ಪ್ರಧಾನ ಮಂತ್ರಿಗಳ ಇತ್ತೀಚಿನ ಎರಡು ಭಾಷಣಗಳು ತೀವ್ರ ನಿರಾಸೆಯನ್ನೇ ತಂದಿವೆ. ಅವರು ಈ ಯಾವ ವಿಷಯಗಳ ಬಗ್ಗೆಯೂ ಪ್ರಸ್ತಾಪಿಸದೆ, ಕೇವಲ ಇನ್ನೊಂದು ಸಾಂಕೇತಿಕ ಆಚರಣೆಯ ಕರೆ ಕೊಟ್ಟಿದ್ದಾರೆ.

ತದ್ವಿರುದ್ಧವಾಗಿ ಐದು ಎಡಪಕ್ಷಗಳು ಈ ಲಾಕ್‌ಡೌನಿನ ಎರಡನೇ ವಾರದಲ್ಲಿ ಕೈಗೊಳ್ಳಲೇ ಬೇಕಾದ ಕ್ರಮಗಳ ಬಗ್ಗೆ ಒಂದು ಜಂಟಿ ಹೇಳಿಕೆ ನೀಡಿ ಜನಗಳ ಆತಂಕಗಳಿಗೆ ಸಮರೋಪಾದಿಯಲ್ಲಿ ಗಮನ ಕೊಡಿ ಎಂದು ಸರಕಾರವನ್ನು ಆಗ್ರಹಿಸಿದ್ದಾರೆ. ಕೊವಿಡ್–19ರ ವಿರುದ್ಧ ಹೋರಾಟ ನಾವೆಲ್ಲರೂ ಒಗ್ಗಟ್ಟಿನಿಂದ, ಅದನ್ನು ಸೋಲಿಸುವ ದೃಢನಿರ್ಧಾರದಿಂದ ನಡೆಸುವ ಹೋರಾಟ ಎಂದು ಮನಗಾಣಿಸಲು ಕೇಂದ್ರ ಸರಕಾರ ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ಹೇಳಿರುವ ಎಡಪಕ್ಷಗಳ ಈ ಜಂಟಿ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ದೇಶ ಕೊವಿಡ್–19 ಮಹಾಮಾರಿ ಸಮುದಾಯದಲ್ಲಿ ಹರಡದಂತೆ ತಡೆಯುವ 21 ದಿನಗಳ ಲಾಕ್‌ಡೌನಿನ ಎರಡನೇ ವಾರವನ್ನು ಪ್ರವೇಶಿಸಿದೆ.

ಈ ಮೊದಲ ವಾರದಲ್ಲಿ ಹಲವು ಸಮಸ್ಯೆಗಳು ತೀಕ್ಷ್ಣವಾಗಿ ಎದ್ದು ಬಂದಿವೆ. ಅವನ್ನು ತುರ್ತಾಗಿ ಪರಿಹರಿಸಬೇಕಾಗಿದೆ. ಇವುಗಳಲ್ಲಿ ಹಲವು ನಿರೀಕ್ಷಿತ ಸಮಸ್ಯೆಗಳೇ. ಆದರೆ ದುರದೃಷ್ಟವಶಾತ್ ಲಾಕ್‌ಡೌನ್ ಪ್ರಕಟಿಸುವ ಮೊದಲು ಅವುಗಳನ್ನು ಸರಿಪಡಿಸುವ ಕ್ರಮವನ್ನು ಕೈಗೊಳ್ಳಲಿಲ್ಲ.

1. ಕೋಟ್ಯಂತರ ಮಂದಿ ತಮ್ಮ ಜೀವನೋಪಾಯದ ಮೂಲಗಳನ್ನು ಕಳಕೊಂಡಿದ್ದಾರೆ. ನಗರ ಕೇಂದ್ರಗಳಿಂದ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಹೊರ ಹೋಗುತ್ತಿರುವುದು, ಈ ಲಾಕ್‌ಡೌನನ್ನು ಇದ್ದಕ್ಕಿದ್ದಂತೆ ಪ್ರಕಟಿಸಿದ್ದರಿಂದ ಜನಗಳ ಜೀವನೋಪಾಯಗಳನ್ನು ಎಷ್ಟರ ಮಟ್ಟಿಗೆ ಅಲ್ಲೋಲ–ಕಲ್ಲೋಲಗೊಂಡಿದೆ ಎಂಬುದನ್ನು ತೋರಿಸಿದೆ. ಹಸಿವು ಮತ್ತು ಅಪೌಷ್ಟಿಕತೆ ವ್ಯಾಪಕವಾಗಿ ಬೆಳೆಯುವುದನ್ನು ನಿಲ್ಲಿಸಲು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಏಕೆಂದರೆ ಇಂತಹ ಪರಿಸ್ಥಿತಿಗಳು ಕೊವಿಡ್–19ನ್ನು ಪೋಷಿಸುತ್ತವೆ. ಎಲ್ಲ ಜನಧನ ಬಿಪಿಎಲ್ ಕುಟುಂಬಗಳಿಗೆ ಮತ್ತು ಅಸಂಘಟಿತ ಕಾರ್ಮಿಕರಿಗೆ ಆಶ್ವಾಸನೆ ನೀಡಿದ 5000 ರೂ.ಗಳನ್ನು ತಕ್ಷಣವೇ ವರ್ಗಾಯಿಸಬೇಕು. ಕೇಂದ್ರ ಸರಕಾರ ದೇಶಾದ್ಯಂತ ಪ್ರತಿ ವಲಸೆ ಕಾರ್ಮಿಕ ಕುಟುಂಬಕ್ಕೆ, ಅವರ ಬಳಿ ರೇಷನ್ ಕಾರ್ಡ್ ಇರಲಿ, ಇಲ್ಲದಿರಲಿ 35 ಕೆ.ಜಿ. ಆಹಾರಧಾನ್ಯಗಳನ್ನು, ತನ್ನ ಬಳಿ ಇರುವ 7.5ಕೋಟಿ ಟನ್ ದಾಸ್ತಾನಿನಿಂದ ಒದಗಿಸಬೇಕು. ವಿವಿಧ ಭಾಗಳಿಂದ ತಮ್ಮ ಊರುಗಳತ್ತ ಹೊರಟ ವಲಸೆ ಕಾರ್ಮಿಕರಿಗೆ ಸರಿಯಾದ ಆರೋಗ್ಯಪಾಲನೆ ಸೌಕರ್ಯಗಳನ್ನು ಕಲ್ಪಿಸಬೇಕು. ದೇಶದ ಎಲ್ಲ ಭಾಗಗಳಲ್ಲಿ ಪರಿಣಾಮಕಾರಿ ಮತ್ತು ಶುಚಿತ್ವಪೂರ್ಣ ಕ್ವಾರಂಟೈನ್ ಸೌಲಭ್ಯಗಳನ್ನು ಸ್ಥಾಪಿಸಬೇಕು. ವಲಸೆ ಕಾರ್ಮಿಕರ ಮೇಲೆ ಅಮಾನುಷ ಪೋಲೀಸ್ ಕ್ರಮಗಳನ್ನು ಕೊನೆಗೊಳಿಸಬೇಕು ಮತ್ತು ಇಂತಹ ಆದೇಶಗಳನ್ನು ಕೊಟ್ಟವರ ಮೇಲೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು.

ಎಲ್ಲ ನಗರ ಕೇಂದ್ರಗಳಲ್ಲಿ, ವಿಶೇಷವಾಗಿ ಕೊಳೆಗೇರಿಗಳು ದೊಡ್ಡ ಪ್ರಮಾಣದಲ್ಲಿ ಇರುವಲ್ಲಿ, ಹಸಿವು, ಆಹಾರವಿಲ್ಲದೆ ಉಪವಾಸ ಮತ್ತು ಕೊವಿಡ್–19 ಸಮುದಾಯದಲ್ಲಿ ಹರಡುವುದನ್ನು ತಡೆಯಲು ತುರ್ತಾಗಿ ಆಹಾರ ಧಾನ್ಯಗಳನ್ನು ಮತ್ತು ಆವಶ್ಯಕ ಸಾಮಗ್ರಿಗಳನ್ನು ಒದಗಿಸಬೇಕಾಗಿದೆ.

ಇದು ಕಟಾವಿನ ಸಮಯ. ನಮ್ಮ ಆಹಾರಭದ್ರತೆಗೆ ಅತ್ಯಗತ್ಯವಾದ ಆಹಾರ ಬೆಳೆ ವ್ಯರ್ಥವಾಗದಂತೆ ಖಾತ್ರಿಪಡಿಸಲು ರೈತರಿಗೆ ಬೆಂಬಲದ ಅಗತ್ಯವಿದೆ. ಅವರು ಹತಾಶೆಯಿಂದ ಸಿಕ್ಕ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಉಂಟಾಗದಿರಲು ಭಾರತ ಆಹಾರ ನಿಗಮ(ಎಫ್‌ಸಿಐ) ಅವರ ಬೆಳೆಗಳನ್ನು ಕನಿಷ್ಟ

ಪುಟ 14 ನೋಡಿ

ಲಾಕ್‌ಡೌನ್ ಉಲ್ಲಂಘಿಸುವ ಕರೆಯನ್ನು ಪ್ರಧಾನಿಗಳು ಹಿಂತೆಗೆದುಕೊಳ್ಳಬೇಕು

ಪ್ರಧಾನ ಮಂತ್ರಿಗಳು ಬಿಜೆಪಿ ಪಕ್ಷದ ಕಚೇರಿಯಿಂದ ಅದರ 40ನೇ ಸ್ಥಾಪನಾ ದಿನದ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿದ ಮಾಡಿದ ಭಾಷಣದಲ್ಲಿ ಅವರಿಗೆ ಲಾಕ್‌ಡೌನನ್ನು ಉಲ್ಲಂಘಿಸಲು ಒಂದು ಬಹಿರಂಗ ಕರೆ ನೀಡಿದರು.

ಮೊದಲನೆಯದಾಗಿ, ಅವರು ತಾನು ಸೃಷ್ಟಿಸಿದ ನಿಧಿಗೆ ಉದಾರವಾಗಿ ದೇಣಿಗೆ ನೀಡಬೇಕು ಮತ್ತು 40 ಇತರರಿಂದ ದೇಣಿಗೆಗಳನ್ನು ಸಂಗ್ರಹಿಸಬೇಕು ಎಂದರು.

ಎರಡನೆಯದಾಗಿ, ಪ್ರತಿ ಮತಗಟ್ಟೆ ಮಟ್ಟದಲ್ಲಿ ಬಿಜೆಪಿ ಕಾರ್ಯಕರ್ತರು ಅಗತ್ಯ ಸೇವೆಗಳು ಮತ್ತು ಆರೋಗ್ಯ ಪಾಲನೆಯಲ್ಲಿ ತೊಡಗಿರುವ ಕನಿಷ್ಟ 40 ಜನಗಳನ್ನು ಅವರಿಗೆ ವೈಯಕ್ತಿಕವಾಗಿ ಕೃತಜ್ಞತೆ ಹೇಳಲು ಭೇಟಿಯಾಗಬೇಕು.

ಮೂರನೆಯದಾಗಿ, ಆಹಾರ, ಆಶ್ರಯ ಮತ್ತು ಕೂಲಿಗಳನ್ನು ಒದಗಿಸಬೇಕಾದ ತನ್ನ ಹೊಣೆಗಾರಿಕೆಯನ್ನು ನಿಭಾಯಿಸದ ಸರಕಾರದ ಪ್ರಧಾನ ಮಂತ್ರಿಗಳು, ಈಗ ತಮ್ಮ ಕಾರ್ಯಕರ್ತರು ಲಾಕ್‌ಡೌನನ್ನು ಉಲ್ಲಂಘಿಸಿ ಪರಿಹಾರವನ್ನು ಒದಗಿಸಬೇಕು ಎಂದು ಕರೆ ನೀಡಿದ್ದಾರೆ.

ಇದು ಪ್ರಧಾನ ಮಂತ್ರಿಗಳು ತಾನೇ ಪ್ರಕಟಿಸಿದ 21 ದಿನಗಳ ಲಾಕ್‌ಡೌನನ್ನು ತಾನೇ ಬಹಿರಂಗವಾಗಿ ಉಲ್ಲಂಘಿಸುತ್ತಿರುವುದಲ್ಲದೆ, ಮತ್ತು ಆಳುವ ಪಕ್ಷಕ್ಕೆ ಬಹಿರಂಗ ಪ್ರೋತ್ಸಾಹ ನೀಡುವುದಲ್ಲದೆ ಬೇರೇನೂ ಅಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇದು ಆಕ್ಷೇಪಾರ್ಹ ಮಾತ್ರವೇ ಅಲ್ಲ, ಕೊವಿಡ್–19 ಮಹಾಮಾರಿಯ ವಿರುದ್ಧ ದೇಶದ ಮತ್ತು ಜನತೆಯ ಹೋರಾಟ ಯಶಸ್ವಿಯಾಗಬೇಕಾದರೆ ಅದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಅದು ಹೇಳಿದೆ.

ಪ್ರಧಾನ ಮಂತ್ರಿಗಳು ತಕ್ಷಣವೇ ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ರಾಷ್ಟ್ರವ್ಯಾಪಿ ಬ್ಲ್ಯಾಕ್–ಔಟ್‌ನ ಅಪಾಯ

ಕೊವಿಡ್–19 ರ ಎದುರು ಹೋರಾಟಕ್ಕೆ ಎಂದು ಪ್ರಧಾನ ಮಂತ್ರಿಗಳು ಭಾನುವಾರ 9 ನಿಮಿಷಗಳ ಕಾಲ ದೀಪಗಳನ್ನು ಸ್ವಿಚ್ ಆಫ್ ಮಾಡಲು ಕರೆ ನೀಡಿರುವುದು ದೇಶದ ವಿದ್ಯುತ್ ವ್ಯವಸ್ಥೆಗೆ, ರಾಷ್ಟ್ರೀಯ ಗ್ರಿಡ್‌ಗೆ ಒಂದು ನಿಜವಾದ ಬೆದರಿಕೆಯನ್ನು ಒಡ್ಡಿದೆ. ಎಲ್ಲ ಮನೆಗಳಲ್ಲಿ ವಿದ್ಯುತ್ ದೀಪಗಳನ್ನು, ಗ್ರಿಡ್‌ನ ಸುಮಾರು 15ಶೇ. ದಿಂದ 20ಶೇ. ವನ್ನು ಏಕಕಾಲದಲ್ಲಿ ಸ್ವಿಚ್ ಆಫ್ ಮತ್ತು ಆನ್ ಮಾಡುವುದರಿಂದ, ರಾಷ್ಟ್ರೀಯ ವಿದ್ಯುತ್ ಜಾಲಕ್ಕೆ ಏನಾಗಬಹುದು? ಅದು ಅಸ್ಥಿರಗೊಳ್ಳಬಹುದು ಮತ್ತು ಕುಸಿಯಬಹುದು.

ಇದರಿಂದ, ಜುಲೈ 2012ರಲ್ಲಿ ಭಾರತದ ಹೆಚ್ಚಿನ ಕಡೆಯಲ್ಲಿ ಆದಂತೆ, ಧಾರೆ–ಧಾರೆಯಾಗಿ ಕತ್ತಲು ಆವರಿಸಬಹುದು. ನಂತರ ವಿದ್ಯುತ್ ವ್ಯವಸ್ಥೆಯನ್ನು ಮೊದಲಿನ ಸ್ಥಿತಿಗೆ ತರಲು 2–3 ದಿನಗಳು ಬೇಕಾಗಬಹುದು. ಇದರಿಂದ ಕೊವಿಡ್–19 ರ ವಿರುದ್ಧ ನಮ್ಮ ನಿರ್ಣಾಯಕ ಸಮರದಲ್ಲಿ ನಮ್ಮ ಆಸ್ಪತ್ರೆಗಳು, ಡಾಕ್ಟರುಗಳು, ಆರೋಗ್ಯ ಕಾರ್ಯಕರ್ತರು ಮತ್ತು ರೋಗಿಗಳ ಮೇಲಾಗುವ ಪರಿಣಾಮಗಳನ್ನು ಊಹಿಸಿಕೊಳ್ಳಬೇಕಷ್ಟೇ. ನಮ್ಮ ಮನೆಗಳಲ್ಲಿ ದಿಗ್ಬಂಧನಕ್ಕೊಳಗಾಗಿರುವ ನಮ್ಮ ಪರಿಸ್ಥಿತಿಗಳೂ ಏನಾಗಬಹುದು ಊಹಿಸಿಕೊಳ್ಳಬೇಕು.

ವಿದ್ಯುತ್ ಗ್ರಿಡ್‌ಗೆ ಇರುವ ಈ ಅಪಾಯದ ಬಗ್ಗೆ ರಾಷ್ಟ್ರೀಯ ಮತ್ತು ರಾಜ್ಯ ಅಧಿಕಾರಿಗಳು ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಎಚ್ಚರಿಕೆ ನೀಡಿದ್ದಾರೆ. ಪ್ರಧಾನ ಮಂತ್ರಿಗಳು ತಕ್ಷಣವೇ ದೇಶದ ಮೇಲಿನ ಈ ಸ್ವಯಂ–ಹೇರಿಕೆಯ ಬ್ಲ್ಯಾಕ್–ಔಟ್‌ನ ಕರೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ವಿದ್ಯುತ್ ಹರಿವು ಟ್ರಿಪ್ ಆದರೆ ದೇಶ ಅದು ಮತ್ತೆ ಸರಿಯಾಗುವ ವರೆಗೆ ವಿದ್ಯುತ್ ಇಲ್ಲದ, ಮಹಾಮಾರಿಯನ್ನು ಎದುರಿಸಲು ಸಾಧ್ಯವಾಗದ ಪರಿಸ್ಥಿತಿಯ ಪರಿಣಾಮಗಳನ್ನು ಎದುರಿಸಬೇಕಾದೀತು. ಇಂತಹ ಅಪಾಯಕ್ಕೆ ಈಗಾಗಲೇ ಲಾಕ್‌ಡೌನ್‌ನ ಮತ್ತು ಕೊವಿಡ್–19 ಮಹಾಮಾರಿಯಿಂದ ನರಳುತ್ತಿರುವ ದೇಶ ಕೈಹಾಕಲು ಸಾಧ್ಯವಿಲ್ಲ, ಕೈಹಾಕಬಾರದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

“ಭಂಡ ಟ್ರಂಪ್ ಬೆದರಿಕೆಗೆ ತಲೆಬಾಗಿದ ಮೋದಿ ಸರಕಾರ”

ಮೋದಿ ಸರಕಾರ ಮಲೇರಿಯಾದ ಜೆನೆರಿಕ್(ಸಾರ್ವತ್ರಿಕ) ಔಷಧಿ ಹೈಡ್ರೋಕ್ಸೈಕ್ಲೋರೋಕ್ವಿನ್(ಹೆಚ್‌ಸಿಕ್ಯು) ರಫ್ತಿನ ಮೇಲೆ ಹಾಕಿದ್ದ ನಿಷೇಧವನ್ನು ತೆಗೆದಿರುವುದಾಗಿ ಎಪ್ರಿಲ್ 7 ರಂದು ಪ್ರಕಟಿಸಿದೆ. ಎಪ್ರಿಲ್ 4 ರಂದು ಸರಕಾರ ಇದರ ರಫ್ತನ್ನು ಪೂರ್ಣವಾಗಿ ನಿಷೇಧಿಸಿತ್ತು. ಈ ಬಗ್ಗೆ ಟಿಪ್ಪಣಿ ಮಾಡುತ್ತ, ಸಿಪಿಐ(ಎಂ) ಪೊಲಿಟ್‌ಬ್ಯುರೊ, ಹೆಚ್‌ಸಿಕ್ಯು ಸೇರಿದಂತೆ ಮಹತ್ವದ ಜೆನೆರಿಕ್ ಔಷಧಿಗಳ ರಫ್ತಿನ ಮೇಲಿನ ನಿರ್ಬಂಧಗಳನ್ನು ಸಡಿಲಿಸಬೇಕೆಂಬ ಟ್ರಂಪ್ ಬೆದರಿಕೆ ಕೈ ತಿರುಚುವ ಒಂದು ನೇರ ಪ್ರಯತ್ನ ಎಂದು ಹೇಳಿದೆ. ಮೋದಿ ಸರಕಾರ ಈ ಭಂಡ ಬ್ಲಾಕ್‌ಮೇಲ್ ಎದುರು ಮಂಡಿಯೂರಿದೆ, ಇದು ಈ ವೈರಸ್ ಮಹಾಮಾರಿಯ ವಿರುದ್ಧ ನಮ್ಮ ಸಮರದ ಮಹತ್ವದ ಕಾಳಜಿಗಳನ್ನು ಶಿಥಿಲಗೊಳಿಸುತ್ತದೆ, ಅಮೆರಿಕಾದ ಹಿತಾಸಕ್ತಿಗಳಿಗೆ ಮೋದಿ ಸರಕಾರ ಶರಣಾಗಿದೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆ ಎಂದು ಅದು ಟೀಕಿಸಿದೆ.

ತೀರಾ ಇತ್ತಿಚಿನ ವರೆಗೂ ನಮ್ಮ ಸರಕಾರ ಶಸ್ತ್ರಚಿಕಿತ್ಸೆಯ ಮುಖಗವಸು, ಕೈಗವಸು ಮುಂತಾದ ಎಲ್ಲ ರೀತಿಯ ವೈಯಕ್ತಿಕ ಸುರಕ್ಷಾ ಪರಿಕರಗಳ ರಫ್ತಿನಲ್ಲಿ ಯಾವುದೇ ಯೋಜನೆಯಿಲ್ಲದೆ ಬೇಕಾಬಿಟ್ಟಿ ರಫ್ತುಗಳಿಗೆ ಅವಕಾಶ ಕೊಟ್ಟಿತ್ತು. ಅದು ಈಗ ರೋಗಿಗಳ ಶುಶ್ರೂಷೆಯಲ್ಲಿ ತೊಡಗಿರುವ ನಮ್ಮ ಆರೋಗ್ಯ ಕಾರ್ಯಕರ್ತರ ಸುರಕ್ಷೆಯ ಮೇಲೆ ವಿನಾಶಕಾರಿ ಪರಿಣಾಮ ಬೀರಿದೆ.

ಹೆಚ್‌ಸಿಕ್ಯು ರಫ್ತಿನ ಮೇಲೆ ನಿಷೇಧದ ಮೊದಲು ಬೇರೆ ಹಲವು ದೇಶಗಳಿಂದಲೂ ಅದಕ್ಕೆ ಬೇಡಿಕೆಯಿತ್ತು. ಈಗ ಈ ಔಷಧಿಯನ್ನು ಮತ್ತು ಇತರ ಮಹಾಮಾರಿಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಭಾರತ ಆ ದೇಶಗಳಿಗೆ ಕಳಿಸದೆ ಕೇವಲ ಅಮೆರಿಕಾಕ್ಕೆ ಮಾತ್ರ ಕಳಿಸುವಂತೆ ಬೆದರಿಸುವ ಹೊಲಸು ಪ್ರಯತ್ನ ಅಮೆರಿಕಾದ ಅಧ್ಯಕ್ಷ ಟ್ರಂಪ್‌ರದ್ದು.

ಮಹಾಮಾರಿಯಿಂದ ಒಂದು ದೊಡ್ಡ ಬೆದರಿಕೆಯನ್ನು ಎದುರಿಸುತ್ತಿರುವ ನಮ್ಮ ಜನಗಳ ಆರೋಗ್ಯದ ಪರಮ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್‌ಸಿಕ್ಯು ಔಷಧಿಯ ರಫ್ತಿನ ಮೇಲೆ ನಿಷೇದ ತೆಗೆಯುವ ನಿರ್ಧಾರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಲಿಂಗ ಆಯ್ಕೆಯ ನಿಯಮಗಳ ಅಮಾನತು ಅಧಿಸೂಚನೆ

–ಕೇಂದ್ರ ಆರೋಗ್ಯ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಪ್ರಿಲ್ 4ರಂದು ಒಂದು ಗಜೆಟ್ ಅಧಿಸೂಚನೆಯ ಮೂಲಕ ಪಿಸಿ&ಪಿಎನ್‌ಡಿಟಿ (ಗರ್ಭಧಾರಣಾ–ಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳ) ಕಾಯ್ದೆಯ ಕೆಲವು ನಿಯಮಗಳನ್ನು, ಅಂದರೆ ಲಿಂಗ ಪತ್ತೆ ನಿಷೇಧ ಕುರಿತ ಕೆಲವು ನಿಯಮಗಳನ್ನು ಜೂನ್ 30ರ ವರೆಗೆ ಅಮಾನತುಗೊಳಿಸಿರುವುದಾಗಿ ತಿಳಿಸಿದೆ. ಇದನ್ನು ಕೊವಿಡ್–19 ಉಂಟು ಮಾಡಿರುವ ಅಭೂತಪೂರ್ವ ಸನ್ನಿವೇಶದ ಹೆಸರಿನಲ್ಲಿ ಮಾಡಲಾಗಿದೆ.

ವಾಸ್ತವವಾಗಿ ವೈದ್ಯಕೀಯ ಸೌಲಭ್ಯಗಳು ಸರಕಾರ ಪ್ರಕಟಿಸಿರುವ ‘ಆವಶ್ಯಕ ಸೇವೆ”ಗಳ ಪಟ್ಟಿಯಲ್ಲಿವೆ. ಆದ್ದರಿಂದ ಕೊವಿಡ್–19 ರ ಹೆಸರಿನಲ್ಲಿ ಈ ಕ್ರಮದ ಅಗತ್ಯವಿರಲಿಲ್ಲ. ಈ ಅಧಿಸೂಚನೆ ದುಷ್ಪರಿಣಾಮಗಳನ್ನು ಉಂಟು ಮಾಡಬಹುದು ಎಂದು ಈ ಕುರಿತು ಕೇಂದ್ರ ಆರೋಗ್ಯ ಮಂತ್ರಿಗಳಿಗೆ ಸಿಪಿಐ(ಎಂ)ನ ಹಿರಿಯ ಮುಖಂಡರೂ, ಮಾಜಿ ರಾಜ್ಯಸಭಾ ಸದಸ್ಯರೂ ಆಗಿರುವ ಬೃಂದಾ ಕಾರಟ್ ಪತ್ರ ಬರೆದು ಇದನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ಮುಖ್ಯವಾಗಿ ಈ ನಿಯಮಗಳಲ್ಲಿ ಪರಿಚ್ಛೇದ 9(8) ರ ಅಮಾನತು ಬಹಳ ಕಳವಳಕಾರಿ. ಲಿಂಗ ಪತ್ತೆ ಕೇಂದ್ರಗಳು ಪ್ರತಿ ತಿಂಗಳ 5ನೇ ತಾರೀಕಿನೊಳಗೆ ಹಿಂದಿನ ತಿಂಗಳು ಮಾಡಿದ ಎಲ್ಲ ತಪಾಸಣೆಗಳು, ಪರೀಕ್ಷಣೆಗಳು, ವಿಧಾನಗಳು ಮತ್ತು ತಂತ್ರವಿಧಾನಗಳ ಬಳಕೆಯ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗೆ ಸಲ್ಲಿಸಬೇಕು ಎಂದು ಈ ನಿಯಮ ಹೇಳುತ್ತದೆ. ಇದರ ಅಮಾನತಿನ ಅರ್ಥ ಜೂನ್ 30ರ ವರೆಗೆ ಇಂತಹ ಯಾವುದೇ ವರದಿಗಳನ್ನು ಸಲ್ಲಿಸಬೇಕಾಗಿಲ್ಲ. ಆವಶ್ಯಕ ಸೇವೆಯೆಂದು ಲಿಂಗ ಪತ್ತೆ ಕೇಂದ್ರಗಳು ತೆರೆದಿರುತ್ತವೆ, ಆದರೆ ಅವು ವರದಿ ಸಲ್ಲಿಸಬೇಕಾಗಿಲ್ಲ ಎಂದರೆ ಈ ಅವಧಿಯಲ್ಲಿ ಲಿಂಗ ಪತ್ತೆ ಪರೀಕ್ಷೆಗಳನ್ನು ಯಾವುದೇ ಅಡೆ–ತಡೆಯಿಲ್ಲದೆ ನಡೆಸಲು ಇದನ್ನು ದುರುಪಯೋಗ ಪಡಿಸಿಕೊಳ್ಳಬಹುದು.

ಅಲ್ಲದೆ ಲಾಕ್‌ಡೌನ್ ಇರುವುದು ಎಪ್ರಿಲ್ 14 ರ ವರೆಗೆ, ಆದರೂ ಈ ಅಮಾನತು ಅವಧಿಯನ್ನು ಜೂನ್ 30 ರ ವರೆಗೂ ಇಟ್ಟಿರುವುದು ಕೂಡ ಕಳವಳಕಾರಿ.

ನಿಯಮ 8 ಮತ್ತು 18ಎ ಪತ್ತೆ ಕೇಂದ್ರಗಳ ದಾಖಲಾತಿ ಮತ್ತು ಸಲಹಾ ಮಂಡಳಿ ಮತಿತ್ತರ ಪ್ರಾಧಿಕಾರಗಳ ಸಬೆಗಳನ್ನು ಕುರಿತಾಗಿದ್ದು, ಇವನ್ನೂ ಅಮಾನತಿನಲ್ಲಿಡಲಾಗಿದೆ. ಬೇರೆಲ್ಲ ವೃತ್ತಿಪರ ಸಂಸ್ಥೆಗಳ ಸಭೆಗಳನ್ನು ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಮಾಡುತ್ತಿರುವಾಗ ಈ ಕಾಯ್ದೆಗೆ ಮಾತ್ರ ವಿಶೇಷ ‘ವಿನಾಯ್ತಿ’ ಏಕೆ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಕೇಳಿದ್ದಾರೆ.

ಈ ನಿಯಮಗಳನ್ನು ಅಮಾನತುಗೊಳಿಸಲು ತುರ್ತು ಕಾರಣಗಳೇನೂ ಇಲ್ಲ. ಬೇರೆ ಯಾವ ಕಾಯ್ದೆಯ ವಿಷಯದಲ್ಲಿ ಹೀಗೆ ಮಾಡಿಲ್ಲ. ಅಲ್ಲದೆ ಸಂಸತ್ತಿನ ಮುಂದೆ ಇಟ್ಟಿರುವ ನಿಯಮಗಳನ್ನು ಹೀಗೆ ಅಮಾನತಿನಲ್ಲಿಡಲು ಆರೋಗ್ಯ ಮಂತ್ರಾಲಯಕ್ಕೆ ಅಧಿಕಾರ ಇದೆಯೇ ಎಂಬ ಪ್ರಶ್ನೆಯೂ ಏಳುತ್ತದೆ.

ದೇಶದಲ್ಲಿ ಲಿಂಗಾನುಪಾತದ ಪ್ರಶ್ನೆ ಬಹಳ ಗಂಭೀರವಾಗಿರುವಾಗ ಈ ಕಾಯ್ದೆಯ ಅನುಷ್ಠಾನವನ್ನು ದುರ್ಬಲಗೊಳಿಸುವುದು ಸರಿಯಲ್ಲ. ಇದಕ್ಕೆ ಕೊವಿಡ್–19 ಬಿಕ್ಕಟ್ಟು ಒಂದು ಪರದೆಯಾಗದಿರಲಿ ಎಂದು ಹೇಳಿರುವ ಬೃಂದಾ ಕಾರಟ್ ಈ ಅಮಾನತು ಕ್ರಮವನ್ನು ಹಿಂತೆಗೆದುಕೊಳ್ಳುವಂತೆ ಆರೋಗ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದಾರೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಕೂಡ ಈ ಅಧಿಸೂಚನೆ ಈ ಕಾಯ್ದೆಯ ಪ್ರಮುಖ ಉದ್ದೇಶಕ್ಕೇ ವಿರುದ್ಧವಾಗಿದ್ದು ಅದನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಸಂಪಾದಕೀಯ

ಹೇಳಿದ್ದನ್ನು ಕೇಳಿ ಮಾಡಿದ ತಪ್ಪನ್ನು ಮತ್ತೆ ಮಾಡದಿರೋಣ

ರಾಜ್ಯದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿವೆ. ಸೋಂಕಿತರ ಸಂಖ್ಯೆ 207ಕ್ಕೆ ಏರಿಕೆಯಾಗಿದ್ದು ಸಾವಿನ ಸಂಖ್ಯೆ 6 ಕ್ಕೆ ಏರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಏಪ್ರಿಲ್ 14 ಕ್ಕೆ ಮುಕ್ತಾಯವಾಗಬೇಕಾಗಿದ್ದ ಲಾಕ್‌ಡೌನ್ ಅವಧಿಯನ್ನು ಏಪ್ರಿಲ್ 30 ರ ವರೆಗೆ ಮತ್ತೆ ಹದಿನೈದು ದಿನಗಳ ಕಾಲ ವಿಸ್ತರಣೆ ಮಾಡಲು ಸಚಿವ ಸಂಪುಟ ಸಭೆಯಲ್ಲಿ ಅಭಿಪ್ರಾಯ ಪಡಲಾಗಿದೆ ಎಂದು ತಿಳಿದು ಬಂದಿದೆ. ಪ್ರಧಾನಿ ಮೋದಿಜಿ ರವರ ಜತೆ ಚರ್ಚಿಸಿ ಅಂತಿಮ ತೀರ್ಮಾನ ಕೈಕೊಳ್ಳಲಾಗುವುದು ಎಂದು ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಇಂದು ಭಾರತದಲ್ಲಿ ಅಂತಹ ಪರಿಸ್ಥಿತಿ ಬಂದಾಗಿದೆ. ಏನೂ ಆಗಬೇಕಾದರೂ ಒಬ್ಬರ ಅನುಮತಿ ಬೇಕು ಹೀಗೆ ಅತ್ಯಂತಕಾರಿಯಾಗಿ ಹುಟ್ಟಿಕೊಂಡಿರುವ ಪ್ರವೃತ್ತಿ ದೇಶವನ್ನು ಎತ್ತ ಕೊಂಡೊಯ್ಯಬಹುದು ಎಂದು ತಿಳಿಯುತ್ತಿಲ್ಲ.

ಇತ್ತೀಚೆಗೆ, ಖ್ಯಾತ ನಟ ಅನಂತನಾಗ್ ಪ್ರಧಾನಿ ಮೋದಿಯವರ ಬಗ್ಗೆ ಈ ಕೆಲವು ಮಾತುಗಳನ್ನು ಹೇಳಿದ್ದಾರೆ. ನರೇಂದ್ರ ಮೋದಿಯವರು ಲಾಕ್ ಡೌನ್ ಮಾಡಿ ಯಶಸ್ವಿಯಾಗಿ ಸಾವುಗಳ ಸಂಖ್ಯೆ ಕಡಿಮೆಯಾಗುವಂತೆ ನೋಡಿಕೊಂಡರು. ಆದರೆ ಕೆಲವು ಜನರಿಗೆ ಅದು ಅರ್ಥವಾಗುತ್ತಿಲ್ಲ. ಇದು ಅನಂತನಾಗ್‌ರವರ ವ್ಯಕ್ತಿಗತ ಅಭಿಪ್ರಾಯ. ಇನ್ನೊಬ್ಬ ನಟ, ಚಿಂತಕ ಹೀಗೆ ಹೇಳಿದ್ದಾರೆ. ಅವರು ಬೇರೆ ಯಾರು ಅಲ್ಲ. ಅವರು ಕಮಲ್ ಹಸನ್. ಅವರು ಹೇಳಿದ್ದು '21 ದಿನಗಳ ಈ ಲಾಕ್ ಡೌನ್ ಸರಿಯಾದ ಪೂರ್ವಯೋಜನೆ ಇಲ್ಲದ್ದು. ಬಡವರನ್ನು ಮತ್ತು ಅವಕಾಶವಂಚಿತರನ್ನು ಗೋಡೆಗೆ ದೂಡಿದ್ದು ಕೆಳಗೆ ಬಿದ್ದವವರನ್ನು ಮೇಲಕ್ಕೇತ್ತುವ ಬದಲು ಇವರು ತಮ್ಮ ಸುತ್ತ ಕಟ್ಟಿಕೊಂಡ ಕೋಟೆಯನ್ನು ಗಟ್ಟಿಗೊಳಿಸಲು ಗಮನ ಕೊಡುತ್ತಾರೆ.' ಇದೊಂದು ಭಿನ್ನವಾದ ಅಭಿಪ್ರಾಯ.

ಮೊನ್ನೆ ಮುಖ್ಯಮಂತ್ರಿ ಯಡಿಯೂರಪ್ಪನವರು ಒಂದು ಮಾತು ಹೇಳಿದ್ದರು. 'ಪ್ರಧಾನಿ ನರೇಂದ್ರ ಮೋದಿ ಹೇಳಿದ್ದನ್ನು ಜನ ಕೇಳುತ್ತೇರೆ. ಕೇಳಿದನ್ನು ತಪ್ಪದೆ ಮಾಡುತ್ತಾರೆ. ಹೀಗಾಗಿಯೇ, ಅವರು ಹೇಳಿದಂತೆ ಎಪ್ರಿಲ್ 5 ರ ರಾತ್ರಿ 9 ನಿಮಿಷಗಳ ಕಾಲ ಮನೆಯಲ್ಲಿನ ದೀಪಗಳನ್ನು ಆರಿಸಿ ಮನೆ ಅಂಗಳದಲ್ಲಿ ಅಥವ ಮನೆ ಬಾಲ್ಕನಿಯ ಮೇಲೆ ದೀಪಗಳನ್ನು ಹಚ್ಚುವ ಕಾರ್ಯಕ್ರಮ ನೂರಕ್ಕೆ ನೂರು ಯಶಸ್ವಿಯಾಗಿದೆ ಎಂದು ಯಡಿಯೂರಪ್ಪನವರು ಹೇಳಿದ್ದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಯಡಿಯೂರಪ್ಪನವರ ಮಾತುಗಳನ್ನು ಒಪ್ಪುವವರು, ಒಪ್ಪುವವರು ಸಾಕಷ್ಟು ಕನ್ನಡಿಗರು ಇರಬಹುದು. ಆದರೆ ಅವರು ಹೇಳಿದಂತೆಲ್ಲಾ ನಮ್ಮ ದೇಶವಾಸಿಗಳು ಮಾಡುತ್ತಾ ಹೋದರೆ ಚುನಾವಣೆ ಬಂದಾಗ ಏನಾದೀತು? ಅವರು ಯಾರನ್ನು ಗೆಲ್ಲಿಸಬೇಕು ಅನ್ನುತ್ತಾರೋ ಅವರನ್ನೇ ಗೆಲ್ಲಿಸದೆ ಇರುತ್ತಾರೊ? ಇದನ್ನೇ ಮೋಡಿ ಮಾಡುವುದು ಎನ್ನುವುದು. ಮೋದಿಯವರು ಕೊರೊನಾ ಸಾಂಕ್ರಾಮಿಕ ರೋಗವನ್ನು ತಮ್ಮ ರಾಜಕೀಯ ಯಶಸ್ಸಿಗೆ ಬಳಸಿಕೊಳ್ಳುತ್ತಿರುವಂತೆ ಕಾಣುತ್ತದೆ. ಎಂಥಾ ಸ್ವಾರ್ಥ!

ದೀಪ ಹಚ್ಚುವುದು ಒಂದು ವೈಜ್ಞಾನಿಕವಾದ ಆರೋಗ್ಯ ಚಿಕಿತ್ಸಾ ವಿಧಾನವಲ್ಲ. ನಮ್ಮ ದೇಶಬಾಂಧವರಲ್ಲಿ ಅನೇಕ ಸಮುದಾಯಗಳು ದೀಪವನ್ನು ಧಾರ್ಮಿಕ ಕಾರ್ಯಗಳಿಗೂ ಬಳಸುವುದಿಲ್ಲ ಎಂದೂ ಮೂರ್ತಿ ಪೂಜೆ ಮಾಡದವರು ಮನೆಯಲ್ಲಾಗಲಿ ಮನೆಯ ಅಂಗಳದಲ್ಲಾಗಲಿ ದೀಪವನ್ನು ಹಚ್ಚುವುದಾಗಲಿ, ಪ್ರಾರ್ಥನೆ ಮಾಡುವುದಕ್ಕಾಗಲಿ ಅವರು ಒಪ್ಪುವುದಿಲ್ಲ. ಆದರೆ ನಮ್ಮ ಪ್ರಧಾನಿ ಧಾರ್ಮಿಕ ಅಂತರಗಳನ್ನು ಬೆಳೆಸುತ್ತಿದ್ದಾರೆ. ಈಗಾಗಲೇ ಕೊರೊನಾ ವಿಷಯದಲ್ಲಿ ಹಿಂದುಗಳ ಮತ್ತು ಮುಸಲ್ಮಾನರ ನಡುವೆ ಧಾರ್ಮಿಕ ದ್ವೇಷವನ್ನು ವ್ಯವಸ್ಥಿತವಾಗಿ ಬೆಳೆಸಲಾಗುತ್ತಿದೆ. ನಿಜಾಮುದ್ದೀನ್ ಪ್ರದೇಶಕ್ಕೆ ಹೋಗಿ ಬಂದವರಿಂದ ಕೊರೊನಾ ವೈರಾಣು ಹರಡಿಸಲಾಗುತ್ತದೆ ಎಂಬ ಅಪಪ್ರಚಾರ ಕೊರೊನಾ ವೈರಸ್‌ಗಿಂತಲೂ ಹೆಚ್ಚು ವೇಗವಾಗಿ ಹರಡಿಸಲಾಗುತ್ತದೆ. ವಿದೇಶಗಳಿಂದ ಹಿಂತುರಿಗಿದ ಮುಸಲ್ಮಾನರಿಂದ ರೋಗದ ವೈರಾಣು ಹಬ್ಬುತ್ತಿದೆ ಎಂದು ಪ್ರಚಾರ ಮಾಡಲಾಗುತ್ತಿದೆ. ವಿದೇಶಗಳಿಂದ ಬಂದವರು ಕೇವಲ ಮುಸಲ್ಮಾನರಲ್ಲ, ಹಿಂದುಗಳೂ ಬಂದಿದ್ದಾರೆ. ಕ್ರಿಶ್ಚಿಯನ್ನರೂ ಬಂದಿದ್ದಾರೆ. ಅವರಿಂದ ವೈರಸ್ ಹರಡಿರಬಹುದಲ್ಲವೆ?

ಮುಸಲ್ಮಾನರಾಗಲಿ, ಬೇರೆಯಾಗಲಿ ಈ ಮಾರಣಾಂತಿಕ ರೋಗದ ವೈರಸನ್ನು ಉದ್ದೇಶಪೂರ್ವಕವಾಗಿ ಅವರ ಕುಟುಂಬದ ಸದಸ್ಯರಿಗೂ ಹಬ್ಬಬಹುದಲ್ಲವೇ? ಮುಸಲ್ಮಾನರು ದ್ವೇಷ ಸಾಧಿಸಲು ತಾವು ಬಂಡಿಂಗಳ ಮೇಲೆ ಸಾಗಿಸಿ ಮನೆ ಮನೆ ಬಾಗಿಲಿಗೆ ತೆರಳಿ ಮಾರಾಟ ಮಾಡುವ ಹಣ್ಣು ತರಕಾರಿಗಳ ಮೇಲೆ ಉಗುಳುತ್ತಾರೆ; ಮೂತ್ರ ಮಾಡುತ್ತಾರೆ ಎಂಬ ಅಪ್ಪಟ ಸುಳ್ಳುಗಳನ್ನು ಹರಡುತ್ತಾ ಮುಸಲ್ಮಾನ ವ್ಯಾಪಾರಿಗಳು ಗ್ರಾಮಗಳಿಗೆ ಬರುವುದನ್ನು ತಡೆಯುತ್ತಿದ್ದಾರೆ. ಇದೆಂತಹ ಹಿಂದೂ ಧರ್ಮ? ದ್ವೇಷ ಹರಡುವ ಧರ್ಮ!

ಪ್ರಧಾನಿ ಮೋದಿಯವರು ಈ ವಿಷಯದಲ್ಲಿ ಯಾಕೆ ಮೌನ ವಹಿಸಿದ್ದಾರೆ? ಹಿಂದೂ ಮಠಾಧಿಪತಿಗಳು ಏಕೆ ಇದೇ ಸಮಯದಲ್ಲಿ ಮೌನ ವೃತಸ್ಥರಾಗಿದ್ದಾರೆ? ಮೋದಿಯವರ ಈ ವರ್ತನೆಯನ್ನು ಕೆಲವರಾದರೂ ಟೀಕಿಸುವ ಧೈರ್ಯ ಮಾಡಿದ್ದಾರೆ. ಕೊರೊನಾ ಎದುರಿಸುವ ವಿಷಯದಲ್ಲಿ ಮೋದಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಲಕ್ಷಾಂತರ ಜನಗಳಿಗೆ ಕೆಲಸವಿಲ್ಲ. ಅವರಿಗೆ ಊಟಕ್ಕಿಲ್ಲ. ಮಾನವೀಯತೆಯೊಂದಿಗೆ ಸೇವೆ ಮಾಡುವ ವ್ಯವಸ್ಥೆ ಇಲ್ಲ. ತಮ್ಮ ಸ್ವಂತ ಗ್ರಾಮಗಳಿಗೆ ತೆರಳಲು ವ್ಯವಸ್ಥೆ ಇಲ್ಲದೆ ನೂರಾರು ಕಿ.ಮೀ. ನಡೆದು ಸುಸ್ತಾಗಿ ಸಾವನ್ನಪ್ಪಿದ ಉದಾಹರಣೆಗಳಿವೆ. ಮುಗ್ಧ ಜನರಲ್ಲಿ ತಿಳುವಳಿಕೆ ಮೂಢಿಸುವ ಪ್ರಯತ್ನವಿಲ್ಲ. ವಿಭಿನ್ನ ಧರ್ಮದವರ ನಡುವೆ ಸೌಹಾರ್ಧತೆ ಬಿತ್ತುವ ಕಾಳಜಿ ಇಲ್ಲ. ಸೋಂಕಿತರಿಗೆ ತಾಳ್ಮೆಯ ಆರೈಕೆ, ಅವರು ತಮ್ಮ ತಮ್ಮ ಮನೆಯೊಳಗೆ ಇದ್ದು ಸಾಮಾಜಿಕ ಅಂತರ ಕಾಪಾಡುವಂತೆ ಕಾಳಜಿ ತೋರುವುದು ಸರ್ಕಾರದ ಕಾಳಜಿಯಾಗಿಲ್ಲ. ಆದ್ದರಿಂದಲೇ ಕೇಂದ್ರ ಸರ್ಕಾರ ಸಂಪೂರ್ಣ ಸೋತಿದೆ. ವೈದ್ಯರ, ಆರೋಗ್ಯ ಕಾರ್ಯಕರ್ತರ ನಿಸ್ವಾರ್ಥ ಸೇವೆಯೊಂದೇ ರೋಗಿಗಳಿಗೆ ಸಿಗುತ್ತಿರುವ ಉಪಚಾರ. ಅವರಿಗೆ ದೇಶದ ಜನತೆ ಋಣಿಯಾಗಿದೆ.

ಕೋವಿಡ್ 19 ನ್ನು ಎದುರಿಸಲು ಜನತೆಗೆ ನೆರವು ಅಗತ್ಯ – ಮುಖ್ಯಮಂತ್ರಿಗಳಿಗೆ ಪತ್ರ

1) ಇದೀಗ ರಾಜ್ಯ ಸರಕಾರ ಪಡಿತರ ವಿತರಣೆಗೆ ಕ್ರಮ ವಹಿಸಿರುವುದು ಸರಿಯಷ್ಟೇ, ಅದರಲ್ಲಿ ಕೆಲವು ದೋಷಗಳು ಮತ್ತು ಕೊರತೆಗಳಿವೆ. ಕರ್ನಾಟಕ ಸರಕಾರ ಕೋವಿಡ್–19 ರ ಸಂಕಷ್ಠದ ಹಾಗೂ ಆದಾಯವಿರದ ಮತ್ತು ಲಾಕ್ ಡೌನ್ ಸಂದರ್ಭವನ್ನು ವಿಶೇಷವಾಗಿ ಪರಿಗಣಿಸಿ ಕೇರಳ ಸರಕಾರದ ಮಾದರಿಯಲ್ಲಿ ಎಲ್ಲಾ ಅಗತ್ಯ 16 ಸಾಮಾನುಗಳನ್ನು ಬಿಪಿಎಲ್ ಹಾಗೂ ಎಪಿಎಲ್, ಮತ್ತಿತರೇ ಪಡಿತರ ಅವಶ್ಯಕತೆ ಇರುವವರಿಗೆ ಅಗತ್ಯನುಸಾರ ಒದಗಿಸುವುದು ಅದರ ಕರ್ತವ್ಯವಾಗಿತ್ತು. ಮಾತ್ರವಲ್ಲಾ, ಮನೆಯಲ್ಲಿದ್ದು ಕೋವಿಡ್–19 ನ್ನು ಎದುರಿಸಲು ಅಗತ್ಯ ಆರೋಗ್ಯ ಪರಿಕರಗಳನ್ನು ಇದೇ ಸಂದರ್ಭದಲ್ಲಿ ಒದಗಿಸಬೇಕಿತ್ತು. ಆದರೇ ರಾಜ್ಯ ಸರಕಾರ ಅಂತಹ ಕ್ರಮಕ್ಕೆ ಮುಂದಾಗದೇ ಇರುವುದು ತೀವ್ರ ಖಂಡನೀಯ ವಿಚಾರವಾಗಿದೆ. ಇದು ಜನತೆ ಐಕ್ಯತೆಯಿಂದ ಮತ್ತು ಧೃಢತೆಯಿಂದ ಕೋವಿಡ್ –19 ನ್ನು ಎದುರಿಸಲು ತೊಡಕಾಗಿದೆ.

ಇದೀಗ ರಾಜ್ಯ ಸರಕಾರ ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡ್ ದಾರರಿಗೆ ಪಡಿತರ ವಿತರಣೆಯಲ್ಲಿ ತೊಡಗಿದೆ. ಅದು ಕೇವಲ ಬಿಪಿಎಲ್ ಕಾರ್ಡ ದಾರರಿಗೆ ತಲಾ ವ್ಯಕ್ತಿಗೆ 5 ಕೆ.ಜಿ. ಅಕ್ಕಿಯನ್ನು ವಿತರಿಸುತ್ತಿದೆ. ಇದರೊಂದಿಗೆ 2 ಕೆ.ಜಿ. ಗೋದಿ ವಿತರಿಸುತ್ತಿದೆ. ಪ್ರತಿ ದಿನ ತಲಾ ವ್ಯಕ್ತಿಗೆ ಸರಾಸರಿ 400 ಗ್ರಾಂ ಅಕ್ಕಿ ಎಂದರೂ ತಿಂಗಳಿಗೆ ಕನಿಷ್ಟ ತಲಾ ವ್ಯಕ್ತಿಗೆ 12 ಕೆ.ಜಿ. ಅಕ್ಕಿ ವಿತರಿಸಬೇಕು. ಹೋಗಲಿ ಈ ಹಿಂದೆ ರಾಜ್ಯದಲ್ಲಿ ಬಜೆಟ್ ಪೂರ್ವದಂತೆ ತಲಾ ವ್ಯಕ್ತಿಗೆ 7 ಕೆ.ಜಿ. ಅಕ್ಕಿ ವಿತರಣೆ ಮಾಡುತ್ತಿಲ್ಲಾ ಅದೇ ರೀತಿ, ಕೇಂದ್ರ ಸರಕಾರ ಘೋಷಿಸಿದ ಒಂದು ಕೆ.ಜಿ. ಬೇಳೆ ಮತ್ತು ಕೆ.ಜಿ. ಅಡುಗೆ ಎಣ್ಣೆಯನ್ನು ವಿತರಿಸುತ್ತಿಲ್ಲ. ಕೇಂದ್ರ ಸರಕಾರದ ಈ ಘೋಷಣೆಯು ಸಮರ್ಪಕವಾಗಿಲ್ಲ ಕನಿಷ್ಠ ಐದು ಲೀಟರ್ ಅಡುಗೆ ಎಣ್ಣೆ ಮತ್ತು ಐದು ಕೆ.ಜಿ. ಬೇಳೆಯಾದರೂ ಘೋಷಿಸಬೇಕಿತ್ತು.

ಆದ್ದರಿಂದ, ರಾಜ್ಯ ಸರಕಾರ ಕೇರಳದ ಮಾದರಿಯಲ್ಲಿ ಎಲ್ಲಾ ಕನಿಷ್ಟ 16 ಅಗತ್ಯ ಆಹಾರ ಸಾಮಗ್ರಿಗಳು ಮತ್ತು ಆರೋಗ್ಯ ಸುರಕ್ಷತಾ ಪರಿಕರಗಳು ಮಹಿಳೆಯರಿಗೆ ಋತುಮಾನದ ಪ್ಯಾಡ್ ಗಳನ್ನು ಒದಗಿಸಲು ಮತ್ತು ಈ ಲಾಕ್ ಡೌನ್ ಅವಧಿಗೆ ಈ ಎಲ್ಲಾ ವಯಸ್ಕರಿಗೆ ಪ್ರತಿ ದಿನಕ್ಕೆ ತಲಾ 500 ರೂ. ಗಳಂತೆ ನಿರುದ್ಯೋಗ ಭತ್ಯೆಯನ್ನು ಒದಗಿಸುವಂತೆ ಸಿಪಿಐಎಂ ಒತ್ತಾಯಿಸುತ್ತದೆ.

2) ಗ್ರಾಮ ಹಾಗೂ ನಗರಗಳ ಸ್ಲಂಗಳಲ್ಲಿರುವ ಅನಾಥರು, ಕೈಲಾಗದವರು, ಮಕ್ಕಳಿರದ ವಯೋವೃದ್ದರು ಹಾಗೂ ಅನಾರೋಗ್ಯಪೀಡಿತ ಕುಟುಂಬಗಳನ್ನು ಗುರುತಿಸಿ ಅವರುಗಳಿಗೆ ಮನೆಮನೆಗೆ ಆಹಾರ ಸರಬರಾಜು ಮಾಡುವ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಪ್ರಾಥಮಿಕ ಶಾಲೆಗಳ ಅಕ್ಷರ ದಾಸೋಹ ಸಿಬ್ಬಂಧಿಯನ್ನು ಬಳಸಬೇಕು. ಹಾಸ್ಟೆಲ್ ಇರುವೆಡೆ ಅವುಗಳನ್ನು ಮತ್ತು ಅವುಗಳ ಸಿಬ್ಬಂಧಿಗಳನ್ನು ಬಳಸಿಕೊಳ್ಳಬೇಕು.

3) ಆಶಾ ಕಾರ್ಯಕರ್ತರು, ಅಂಗನವಾಡಿ ನೌಕರರು, ಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಆರೋಗ್ಯ ಇಲಾಖೆಯ ಸಿಬ್ಬಂಧಿಗಳು, ಶುಚಿತ್ವದ ಕಾರ್ಯದಲ್ಲಿ ತೊಡಗಿರುವ ಮುನ್ಸಿಪಲ್ ಕಾರ್ಮಿಕರು ಅದೇ ರೀತಿ, ಹಾಸ್ಟೆಲ್ ಮತ್ತು ಅಕ್ಷರ ದಾಸೋಹ ಕೆಲಸಗಾರರು (ಬಳಸಿಕೊಂಡಲ್ಲಿ) ಈ ಎಲ್ಲರಿಗೂ ಆರೋಗ್ಯ ಸುರಕ್ಷ ಪರಿಕರಗಳು ಮತ್ತು ವಿಮಾ ಸೌಲಭ್ಯವನ್ನು ಕೂಡಲೇ ಒದಗಿಸಬೇಕು.

ಈ ಎಲ್ಲದಕ್ಕೂ ಅಗತ್ಯ ನೆರವನ್ನು ಕೇಂದ್ರ ಸರಕಾರದಿಂದ ಪಡೆಯಲು ಒತ್ತಾಯಿಸಬೇಕು.

ಈ ಕುರಿತು ಸೂಕ್ತ ಕ್ರಮವಹಿಸಲು ಮರಳಿ ವಿನಂತಿ.

ಯು. ಬಸವರಾಜ
ಕಾರ್ಯದರ್ಶಿ (06–04–2020)

ಮುಸ್ಲಿಂ ಅಲ್ಪ ಸಂಖ್ಯಾತರ ವಿರುದ್ದ ಮಾಧ್ಯಮಗಳ ಮೂಲಕ ದ್ವೇಷ ಭಾವನೆ ಹರಡುವವರ ಮೇಲೆ ಕಾನೂನಿನ ಕ್ರಮ ವಹಿಸಲು ಒತ್ತಾಯ– ಮುಖ್ಯಮಂತ್ರಿಗಳಿಗೆ ಪತ್ರ

ದೇಶ ಮತ್ತು ಕರ್ನಾಟಕದ ಜನತೆ, ದೇಶ ಮತ್ತು ರಾಜ್ಯದಾದ್ಯಂತ ತಮ್ಮ ಎಲ್ಲಾ ಜಾತಿ, ಮತ, ಲಿಂಗ, ಭಾಷೆ, ಗಡಿ, ರಾಜಕೀಯ ಭೇದ ಮರೆತು ಕೋವಿಡ್–19 ರ ವಿರುದ್ದ ಗಟ್ಟಿಯಾದ ಐಕ್ಯ ಹೋರಾಟದಲ್ಲಿ ತೊಡಗಿರುವುದು ತಮಗೆ ತಿಳಿದ ವಿಚಾರವೇ ಆಗಿದೆ.

ಅದರೇ, ಈಚೆಗೆ ಕೆಲವು ಮತಾಂಧ ಕಿಡಿಗೇಡಿಗಳು ನಿಜಾಮುದ್ದೀನ್ ತಬ್ಲೀಗ್ ಸಮಾವೇಶವನ್ನು ನೆಪವಾಗಿಟ್ಟುಕೊಂಡು ದೇಶ ಹಾಗೂ ರಾಜ್ಯದಾದ್ಯಂತ ಎಲ್ಲ ಮುಸ್ಲಿಂ ಅಲ್ಪ ಸಂಖ್ಯಾತರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸುತ್ತಾ, ಮುಸ್ಲಿಂ ಅಲ್ಪ ಸಂಖ್ಯಾತರ ವಿರುದ್ದ ದ್ವೇಷದ ಮನೋಭಾವನೆಯನ್ನು ಬಿತ್ತುತ್ತಿದ್ದಾರೆ ಮತ್ತು ಹರಡುತ್ತಿದ್ದಾರೆ. ಇದು ದೇಶದ ಹಾಗೂ ರಾಜ್ಯದ ಸೌಹಾರ್ಧತೆಯನ್ನು ಕದಡುವ ಮತ್ತು ಕೋವಿಡ್– 19 ರ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುವ ವಿಚಾರವಾಗಿದೆ.

ಇಂತಹ ದ್ವೇಷದ ಪರಿಣಾಮವಾಗಿ ರಾಜ್ಯದಲ್ಲಿ ಮುಸ್ಲಿಂ ಅಲ್ಪ ಸಂಖ್ಯಾತ ಸಹೋದರ, ಸಹೋದರಿಯರನ್ನು ಅನುಮಾನದಿಂದ ನೋಡುವಂತಹ ಪರಿಸ್ಥಿತಿ ಉಂಟಾಗಿದೆ. ಮಾತ್ರವಲ್ಲಾ, ಅದಾಗಲೇ ಮಾದ್ಯಮಗಳಲ್ಲಿ ಬಿತ್ತರಗೊಂಡಂತೆ ಕೆಲ ಗ್ರಾಮಗಳಲ್ಲಿ ಮುಸ್ಲಿಂ ಅಲ್ಪ ಸಂಖ್ಯಾತ ಸೋದರರ ಪ್ರವೇಶ ನಿರಾಕರಿಸಿ ಬೆದರಿಸಿರುವುದು, ತಡೆದಿರುವುದು ಕಂಡುಬಂದಿದೆ. ಇವುಗಳೆಲ್ಲವೂ ಗಂಭೀರ ವಿಚಾರಗಳಾಗಿವೆ.

ಇಂತಹ ಪರಿಸ್ಥಿತಿಗೆ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳ ಮತೀಯ ದ್ವೇಷದ ಪ್ರಚಾರವೇ ಕಾರಣವಾಗಿದೆ. ಪರಿಸ್ಥಿತಿ ಹೀಗಿದ್ದರೂ ರಾಜ್ಯ ಸರಕಾರ ಇಂತಹ ಕಿಡಿಗೇಡಿತನದ ವಿರುದ್ದ ಕಾನೂನು ಕ್ರಮ ಕೈಗೊಳ್ಳದಿರುವುದು ತೀವ್ರ ಖಂಡನೀಯವಾಗಿದೆ.

ಈಚೆಗೆ ಮುಖ್ಯಮಂತ್ರಿಗಳು ಈ ಕುರಿತು ಮಾತನಾಡಿರುವುದು ಸ್ವಾಗತಾರ್ಹ ವಿಚಾರವಾಗಿದೆ. ಆದರೇ ಅದು ಸಾಲದಾಗಿದೆ. ಈಗಲೂ ಇಂತಹ ಕಿಡಿಗೇಡಿ ಪ್ರಚಾರವೂ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮುಂದುವರೆದಿರುವುದು ವಿಷಾಧನೀಯವಾಗಿದೆ.

ಆದ್ದರಿಂದ, ತಕ್ಷಣವೇ ಮುಖ್ಯಮಂತ್ರಿಗಳು ಮದ್ಯ ಪ್ರವೇಶಿಸಿ ಸಂಬಂಧಿಸಿದ ಕಿಡಿಗೇಡಿತನದ ವಿರುದ್ದ ಕಾನೂನಿನ ಕ್ರಮವಹಿಸಲು ಮತ್ತು ಕೋವಿಡ್– 19 ರ ಭೀತಿಯಿಂದ ಹಾಗೂ ಕೋಮು ವಿಷ ಪ್ರಚಾರದಿಂದ ತಪ್ಪಾಗಿ ಭಾವಿಸಿದ ಜನತೆಯಿಂದ ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಅಗತ್ಯ ಕ್ರಮವಹಿಸಬೇಕು.

ಅದೇ ರೀತಿ, ಸಾಮಾಜಿಕ ಜಾಲತಾಣದಲ್ಲಿ ನಡೆಯುವ ಫೇಕ್ ನ್ಯೂಸ್‌ಗಳ ಪ್ರಚಾರ ತಡೆಯಲು ವಾಸ್ತವವೆನೆಂಬುದನ್ನು ಜನತೆಗೆ ಅರುಹಲು ಮತ್ತು ಕೋಮು ವಿಷ ಪ್ರಚಾರದ ವಿರುದ್ದ ನಿಗಾ ವಹಿಸಿ ಅಗತ್ಯ ಕಾನೂನಿನ ಕ್ರಮದ ಮೂಲಕ ಅವುಗಳ ಮೇಲೆ ನಿರಂತರ ಕ್ರಮವಹಿಸಲು ಅಗತ್ಯ ಕ್ರಮವಹಿಸಲು ವಿನಂತಿಸುವೆವು.

ಯು. ಬಸವರಾಜ, ಕಾರ್ಯದರ್ಶಿ (11–04–2020)

ಸಂಕಷ್ಟದಲ್ಲಿರುವ ಬೀಡಿ ಕಾರ್ಮಿಕರ ನೆರವಿಗೆ ಒತ್ತಾಯ

ಅಸಂಘಟಿತ ಕಾರ್ಮಿಕರ ಅಡಿಯಲ್ಲಿ ಬರುವ ಬೀಡಿ ಕೈಗಾರಿಕೆಯಲ್ಲಿ 8–9 ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ರಾಜ್ಯದ 23 ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಈ ಉದ್ಯಮದಲ್ಲಿ ಒಂಟಿ ಮಹಿಳೆಯರು, ವಿಧವೆಯರು, ಸಂಸಾರದ ನಿರ್ವಹಣೆಯ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತ ಲಕ್ಷಗಟ್ಟಲೆ ಮಹಿಳೆಯರು ಇದ್ದಾರೆ. ಇವರೆಲ್ಲರೂ ಬೀಡಿ ಗುತ್ತಿಗೆದಾರರು/ಏಜೆಂಟರಿಂದ ಬೀಡಿಎಲೆ ಮತ್ತು ತಂಬಾಕು ಪಡೆದು ತಮ್ಮತಮ್ಮ ಮನೆಗಳಲ್ಲಿ ಬೀಡಿಯನ್ನು ಸುತ್ತಿ ಮತ್ತೆ ಗುತ್ತಿಗೆದಾರ/ಏಜೆಂಟರಿಗೆ ನೀಡಿ ಕೂಲಿ ಪಡೆಯುವ ವ್ಯವಸ್ಥೆ ಜಾರಿಯಲ್ಲಿದೆ. ಆದರೆ ಲಾಕ್‌ಡೌನ್‌ನಿಂದಾಗಿ ಕಳೆದ ಎರಡು ವಾರಗಳಿಂದ ಕೂಲಿಯೂ ಸಿಗದೆ, ಕಟ್ಟಿದ ಬೀಡಿಯನ್ನು ಪಡೆಯದ ಏಜೆಂಟರು ಕೂಲಿಯನ್ನು ನೀಡದೆ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ತ್ವರಿತಗತಿಯಲ್ಲಿ ಈ ಕೆಳಕಂಡ ಹಕ್ಕೊತ್ತಾಯಗಳನ್ನು ಪರಿಗಣಿಸಬೇಕಾಗಿ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ [ಸಿಐಟಿಯು] ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಆಗ್ರಹಪೂರಕವಾಗಿ ವಿನಂತಿಸುತ್ತದೆ. ಈ ಸಂಬಂದ ರಾಜ್ಯ ಕಾರ್ಮಿಕ ಸಚಿವರಿಗೆ ಮನವಿ, ಮುಖ್ಯ ಮಂತ್ರಿಗಳಿಗೆ, ಹಾಗು ರಾಜ್ಯ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಮನವಿ ಮೇಲ್ ಮೂಲಕ ಸಲ್ಲಿಸಿರುವುದಲ್ಲದೆ, ರಾಜ್ಯ ಕಾರ್ಮಿಕ ಸಚಿವರಿಗೆ ದೂರವಾಣಿ ಮೂಲಕ ಬೀಡಿ ಕಾರ್ಮಿಕರ ಸಂಕಷ್ಟಗಳನ್ನು ಮನವರಿಕೆ ಮಾಡಲಾಗಿದೆ.



ಹಕ್ಕೊತ್ತಾಯಗಳು

1. ಬೀಡಿ ಕಾರ್ಮಿಕರ ಕುಟುಂಬ ನಿರ್ವಹಣೆಗೆ ಬೇಕಾಗಿ ಮಾಲಿಕರು ಮತ್ತು ಸರ್ಕಾರ ಜಂಟಿಯಾಗಿ ದಿನವೊಂದಕ್ಕೆ 200 ರೂಪಾಯಿಯಂತೆ ಒಂದು ತಿಂಗಳ ಭತ್ಯೆ 6 ಸಾವಿರ ರೂಪಾಯಿಗಳನ್ನು ಎಲ್ಲಾ ಬೀಡಿ ಕಾರ್ಮಿಕರಿಗೆ ನೀಡಬೇಕು.
2. ಇತರೆ ಕಾರ್ಮಿಕರಂತೆ ಬೀಡಿ ಕಾರ್ಮಿಕರಿಗೂ ಲಾಕ್‌ಡೌನ್ ಅವಧಿಯ ವೇತನವನ್ನು ಬೀಡಿ ಮಾಲಿಕರು ನೀಡುವಂತೆ ಆದೇಶಿಸಬೇಕು. ಬೀಡಿ ಕಾರ್ಮಿಕರಿಗೆ ಬಾಕಿ ಇರುವ ತುಟ್ಟಿಭತ್ಯೆಯನ್ನು ನೀಡಬೇಕು.
3. ಈಗಾಗಲೇ ಕಟ್ಟಿರುವ ಬೀಡಿಗಳನ್ನು ಸಂಗ್ರಹ ಮಾಡದೇ ಹಾಳಾಗಿರುವ ಕಾರಣ ಕಾರ್ಮಿಕರಿಂದ ಅದರ ನಷ್ಟವನ್ನು ವಸೂಲಿ ಮಾಡಬಾರದು.
4. ಬೀಡಿ ಕಾರ್ಮಿಕರು ಕೊರೊನ ಸಂಕಷ್ಟದಿಂದ ಹಸಿವಿನಿಂದ ಬಳಲಿ ಸಾಯಲಾರದಂತೆ ಕ್ರಮ ವಹಿಸಲು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಬೀಡಿ ಕಾರ್ಮಿಕ ಸಂಘಟನೆಗಳ ಮುಖಂಡರನ್ನು ಒಳಗೊಂಡಂತೆ ಅಧಿಕಾರಿಗಳ ಮೇಲುಸ್ತುವಾರಿ ಸಮಿತಿಯನ್ನು ರಚಿಸಬೇಕು.
5. ಪಡಿತರ ಚೀಟಿ ಇಲ್ಲದೆ ಇರುವ ಬೀಡಿಕಾರ್ಮಿಕರಿಗೂ ಪಡಿತರ ಪದಾರ್ಥಗಳನ್ನು ಕೇರಳ ಮಾದರಿಯಲ್ಲಿ ನೀಡಬೇಕು.

ಜೆ. ಬಾಲಕೃಷ್ಣಶೆಟ್ಟಿ, ಅಧ್ಯಕ್ಷರು

ಹಂಚು ಕಾರ್ಮಿಕರಿಗೆ ವೇತನ ಸಹಿತ ರಜೆಗೆ ಸ್ಪಂದಿಸದ ಮಾಲಕರು: ಸರಕಾರಕ್ಕೆ ಮನವಿ

ಕುಂದಾಪುರ: ಕರೋನ ವೈರಸ್‌ನ ಮುಂಜಾಗ್ರತ ಕ್ರಮವಾಗಿ ಸರಕಾರವು ದೇಶದಾದ್ಯಂತ ಲಾಕ್ ಡೌನ್ ಮಾಡಿ ಎಲ್ಲಾ ಕಾರ್ಮಿಕರಿಗೂ ವೇತನ ಸಹಿತ ರಜೆ ನೀಡಲು ದಿನಾಂಕ 24 ಮಾರ್ಚ್ 2020 ರಂದು ಆದೇಶ ಹೊರಡಿಸಿದೆ. ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಬೈಂದೂರು ತಾಲೂಕುಗಳ ಹಂಚು ಕಾರ್ಖಾನೆಯ ಮಾಲಕರು ಹಂಚುಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಇದುವರೆಗೂ ವೇತನ ನೀಡದೆ ಆದೇಶ ಉಲ್ಲಂಘಿಸಿದೆ ಎಂದು ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘವು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ನೀಡಿತು.

ಹಂಚು ಕಾರ್ಮಿಕರು ಅತೀ ಕಡಿಮೆ ವೇತನದಲ್ಲಿ ದುಡಿಯುವ ಕಾರ್ಮಿಕರಾಗಿದ್ದು ಬೇರೆ ಯಾವುದೇ ಆದಾಯಗಳಿಲ್ಲದೇ ತಮ್ಮ ಕುಟುಂಬ ಸಲುಹುತ್ತಿದ್ದಾರೆ. ಕೋವಿಡ್ 19 ಹಾವಳಿಯಿಂದಾಗಿ ಕೆಲಸ ನಿರಾಕರಣೆಯಾಗಿದ್ದು ಹಂಚು ಕಾರ್ಮಿಕ ಸಾವಿರಾರು ಕುಟುಂಬಗಳು ಅಗತ್ಯ ಆಹಾರ ಕೊಳ್ಳಲು ಸಂಕಷ್ಟ ಪಡುವಂತಾಗಿದೆ. ಇಂತಹ ಸಂಧರ್ಭದಲ್ಲಿ ಮಾಲಿಕರಲ್ಲಿ ಸಂಘವು ವೇತನ ನೀಡಲು ಒತ್ತಾಯಿಸಿದರೂ ಸ್ಪಂದಿಸಿಲ್ಲ. ಸರಕಾರ ಇಂತಹ ಕಠಿಣ ಪರಿಸ್ಥಿತಿಯಲ್ಲಿ ಮದ್ಯೆ ಪ್ರವೇಶಿಸಿ ವೇತನ ನೀಡುವಂತೆ ಕ್ರಮವಹಿಸಿ ಬಡ ಹಂಚುಕಾರ್ಮಿಕರಿಗೆ ನ್ಯಾಯ ಒದಗಿಸಬೇಕೆಂದು ಸಂಘವು ಆಗ್ರಹಿಸಿದೆ.

ವಿ. ನರಸಿಂಹ, ಅಧ್ಯಕ್ಷರು – ಎಚ್. ನರಸಿಂಹ ಪ್ರಧಾನಕಾರ್ಯದರ್ಶಿ

ಬೀದಿ ಬದಿ ಮಾರಾಟಗಾರರ ಹಕ್ಕೋತ್ತಾಯಗಳು

ಕೊರೊನ ಲಾಕ್‌ಡೌನ್‌ನಿಂದಾಗಿ ಬೀದಿಬದಿ ಮಾರಾಟಗಾರರ ಜೀವನ ದುಸ್ಥರವಾಗಿದ್ದು ಅವರ ಕುಟುಂಬದ ಜೀವನ ನಿರ್ವಹಣೆಗೆ ದಿನ ಒಂದಕ್ಕೆ 200 ರೂ. ನಂತೆ ತಿಂಗಳ ಭತ್ಯೆ 6 ಸಾವಿರ ರೂಪಾಯಿಗಳನ್ನು ನೀಡಬೇಕು ಎಂದು ಕರ್ನಾಟಕ ರಾಜ್ಯ ಬೀದಿಬದಿ ಮಾರಾಟಗಾರರ ಫೆಡರೇಷನ್ ಒತ್ತಾಯಿಸಿದೆ.

ನಗರ/ಪಟ್ಟಣಗಳಲ್ಲಿ ಬೀದಿ ಬದಿಯಲ್ಲಿ ಆಹಾರ ಸಾಮಗ್ರಿ, ಬಟ್ಟೆಬರೆ, ಹೂವು ಮೊದಲಾದ ಸಾಮಗ್ರಿಗಳನ್ನು ಮಾರುವ ಬೀದಿಬದಿ ಮಾರಾಟಗಾರರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಮಾರಾಟಗಾರರು ಸಾಂಸ್ಥಿಕವಲ್ಲದೆ ಲೇವಾದೇವಿದಾರರಿಂದ ಹಣ ಪಡೆದು ವಿಪರೀತ ಬಡ್ಡಿ ಕಟ್ಟುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಎರಡು–ಮೂರು ವಾರಗಳಿಂದ ದುಡಿಮೆ ಇಲ್ಲದ ಕಾರಣ ಸಂಕಟಗಳು ಹೆಚ್ಚಿವೆ. ಬೀದಿಬದಿ ಮಾರಾಟಗಾರರ ಕುಟುಂಬಗಳ ರಕ್ಷಣೆ ಸರ್ಕಾರದ ಹೊಣೆಯಾಗಿರುತ್ತದೆ. ನಗರದ ಬಡವರ ಪಟ್ಟಿಯಲ್ಲಿ ಬರುವ ಈ ಬೀದಿಬದಿ ಮಾರಾಟಗಾರರಿಗೆ ಸೂಕ್ತ ನೆರವು ನೀಡಬೇಕು ಎಂದು ಆಗ್ರಹಿಸುತ್ತೇವೆ.

ಈಗಾಗಲೇ ಆಯ್ಕೆಯಾಗಿರುವ ವೆಂಡಿಂಗ್ ಕಮಿಟಿ ಸದಸ್ಯರ ಸಭೆಯನ್ನು ತಕ್ಷಣವೇ ನಡೆಸಿ ಎಲ್ಲಾ ಬೀದಿಬದಿ ಮಾರಾಟಗಾರರಿಗೆ ಮಾಸ್ಕ್ ಹಾಗೂ ಸ್ಯಾನಿಟೈಜರ್‌ಗಳನ್ನು ಉಚಿತವಾಗಿ ನೀಡಬೇಕು.

ಬೀದಿಬದಿ ಮಾರಾಟಗಾರರ ಪಡಿತರ ಚೀಟಿ ಇಲ್ಲದ ಕುಟುಂಬಗಳಿಗೂ ಕೇರಳ ಮಾದರಿಯಂತೆ ಅಗತ್ಯ ಆಹಾರ ಸಾಮಗ್ರಿಗಳನ್ನು ತಕ್ಷಣದಲ್ಲಿ ನೀಡಬೇಕು.

ಬೀದಿಬದಿ ಮಾರಾಟಗಾರರಿಗೆ ಕೇಂದ್ರ ಸರ್ಕಾರದ ಆದೇಶದನ್ವಯ ಅಗತ್ಯ ಸಾಮಗ್ರಿಗಳ ಪೂರೈಕೆ ಹಾಗೂ ಎಲ್ಲಾ ಬೀದಿಬದಿ ಮಾರಾಟಗಾರಗಿಗೆ ಗುರುತಿನ ಚೀಟಿಯನ್ನು ನೀಡಬೇಕು ಎಂದು ಕರ್ನಾಟಕ ರಾಜ್ಯ ಬೀದಿಬದಿ ಮಾರಾಟಗಾರರ ಫೆಡರೇಷನ್ ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್, ಖಜಾಂಚಿ ಬಸಮ್ಮ, ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಒತ್ತಾಯಿಸಿದ್ದಾರೆ. ಈ ಸಂಬಂದ ರಾಜ್ಯ ಸರ್ಕಾರದ ನಗರಾಬಿವೃದ್ದಿ ಇಲಾಖೆಯ ಸಚಿವರಾದ ಶ್ರೀ ಬೈರತಿ ಬಸವರಾಜು, ಪೌರಾಡಳಿತ ಸಚಿವರಾದ ನಾರಾಯಣ ಗೌಡ, ನಗರಾಬಿವೃದ್ದಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಮಣರೆಡ್ಡಿ, ಪೌರಾಡಳಿತ ನಿರ್ದೇಶಕಿ ಶ್ರೀಮತಿ ಕಾವೇರಿ, ಮುಖ್ಯ ಮಂತ್ರಿಗಳ ಅಪ್ತ ಕಾರ್ಯದರ್ಶಿಗಳಾದ ರವಿಕುಮಾರ್ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಅಗ್ನಿಗೆ ತಂಪುಂಟೆ? ವಿಷಕ್ಕೆ ರುಚಿಯುಂಟೆ ಹೇಳಾ ಕಂಗಳಿಗೆ ಮರೆಯುಂಟೆ ಹೇಳಾ ಅಂಗವೆ? ಧಾಳಿಕಾರಂಗೆ ಧರ್ಮವುಂಟೆ? ಕನ್ನಗಳ್ಳಂಗೆ ಕರುಳುಂಟೆ? ಗುಹೇಶ್ವರಾ ನಿಮ್ಮ ಶರಣರು ಮೂರು ಲೋಕವರಿಯೆ ನಿಶ್ಚಟರಯ್ಯಾ

ಎನ್ನುತ್ತಾನೆ ಅಲ್ಲಮ ಪ್ರಭು. ಹೌದು ನೀಚತನವಾಗಲಿ, ಮೂರ್ಖತನವಾಗಲಿ ಯಾವುದೆ ಜಾತಿ, ಧರ್ಮಗಳ ಗುತ್ತಿಗೆಯಲ್ಲ. ಎಲ್ಲ ಮತ ಪಂಥ, ಧರ್ಮಗಳಲ್ಲಿ ಒಳ್ಳೆಯವರು ಇರುವಂತೆ ಕೆಲವು ಮೂರ್ಖರು ಇರುತ್ತಾರೆ. ವ್ಯಕ್ತಿಗಳನ್ನು ಅವರವರ ಸ್ವಭಾವದಿಂದ ಪರಿಗಣಿಸಬೇಕಲ್ಲದೆ ಅವರು ಹುಟ್ಟಿದಜಾತಿ ಮತ್ತು ಧರ್ಮದಿಂದ ಅಲ್ಲ. ದೇಶವು ಕೊರೊನಾದಂಥ ಜೀವಘಾತುಕ ಮಹಾಮಾರಿಯ ಕಪಿಮುಷ್ಟಿಯಲ್ಲಿ ಸಿಕ್ಕು ನಲಗುತ್ತಿರುವ ಈ ಹೊತ್ತಲ್ಲಿ ಜಗತ್ತೆಂಬ ಜಗತ್ತು ಒಗ್ಗಟ್ಟಾಗಿ ನಿಂತು ವೈಜ್ಞಾನಿಕವಾಗಿ ಮತ್ತು ಶುದ್ಧ ಮಾನವೀಯ ನೆಲೆಯಲ್ಲಿ ಇದನ್ನು ಎದುರಿಸಿ ಹಿಮ್ಮೆಟ್ಟಿಸಬೇಕಿದೆ. ಇಂಥ ಸೂಕ್ಷ್ಮ ಹೊತ್ತಲ್ಲಿಯೂ ಕ್ಷುಲ್ಲಕ ರಾಜಕಾರಣ ಮಾಡುತ್ತ ಕೋಮುದ್ವೇಷವನ್ನು ಹರಡುವುದು ಅಕ್ಷಮ್ಯ ಅಪರಾಧವಾಗುತ್ತದೆ. ತಬ್ಲಿಗ್ ಮರ್ಕಜ್ ನಲ್ಲಿ ಸಂಭವಿಸಿದ ಅವಘಡವನ್ನು ಯಾರೂ ಸಮರ್ಥಿಸಬೇಕಿಲ್ಲ. ಮಹಾ ದೊಡ್ಡ ತಪ್ಪು ಅಲ್ಲಿರುವವರಿಂದ ಘಟಿಸಿ ಹೋಗಿದೆ. ಅದರ ಪರಿಣಾಮವನ್ನು ದೇಶ ಎದುರಿಸುತ್ತಿದೆ. ಅದರಿಂದ ಹೊರಬರುವ ದಾರಿಗಾಗಿ ಎಲ್ಲರೂ ಜವಾಬ್ದಾರಿಯಿಂದ ವರ್ತಿಸಬೇಕಿದೆ. ದುರಂತವೆಂದರೆ ಕೋಮುವಾದಿಗಳು ಈ ಘಟನೆಯನ್ನು ಮುಸ್ಲಿಂ ವಿರೋಧಿ ಅಲೆಯಾಗಿ ಹಬ್ಬಿಸುತ್ತಿರುವುದು. ತಬ್ಲಿಗ್ ಮುಸ್ಲಿಂರು ಇಡಿ ದೇಶದ ಮುಸ್ಲಿಂರ ಪ್ರತಿನಿಧಿಗಳೇನಲ್ಲ. ತಪ್ಪಿತಸ್ಥರನ್ನು ತಪ್ಪಿತಸ್ಥರೆಂದು ಕರೆದು ಅಂಥ ಅಪರಾಧಿಗಳನ್ನು ಕೂಡಲೆ ಪತ್ತೆ ಹಚ್ಚಿ ಈ ನೆಲದ ಕಾನೂನಿಗೆ ಒಳಪಡಿಸಬೇಕು. ಶಿಕ್ಷಿಸಬೇಕು. ಆದರೆ ಮುಸ್ಲಿಂ ಸಮುದಾಯವನ್ನೆ ಭಯೋತ್ಪಾದಕರಂತೆ ಬಿಂಬಿಸುವುದು. ಅವರ ಬಗೆಗೆ ದ್ವೇಷ ಮಡುಗಟ್ಟುವಂತೆ ಮಾಡುವುದು ಸಲ್ಲದು. ಈಗಾಗಲೇ ವಾಟ್ಸಪ್ ಯುನಿವರ್ಸಿಟಿಯಲ್ಲಿ ಮುಸ್ಲಿಂರನ್ನು ಕುರಿತು ನೂರಾರು ಫೇಕ್ ವಿಡಿಯೋಗಳನ್ನು ಹರಿಬಿಡಲಾಗುತ್ತಿದೆ. ಮಿಡಿಯಾಗಳಂತೂ ಉತ್ಪ್ರೇಕ್ಷಿತ ಹೇಳಿಕೆಗಳನ್ನು ಪುಂಖಾನು ಪುಂಖವಾಗಿ ಪ್ರಸಾರ ಮಾಡುತ್ತಿವೆ. ಈ ಜನಾಂಗೀಯ ದ್ವೇಷವು ಕೊರೊನಾಕ್ಕಿಂತ ಮಹಾಮಾರಿಯಾಗಿ ಪರಿಣಮಿಸುತ್ತಿದೆ. ದೈಹಿಕ ರೋಗದಿಂದ ಇಂದಲ್ಲ ನಾಳೆ ಗುಣಮುಖರಾಗುತ್ತೇವೆ. ಆದರೆ ಧರ್ಮ ದ್ವೇಷದ ಮಾನಸಿಕ ರೋಗದಿಂದ ಮುಕ್ತರಾಗುವುದು ಅಷ್ಟು ಸುಲಭವಲ್ಲ.

ಈಗಾಗಲೆ ಮುಸ್ಲಿಂರಿಂದ ಯಾರೂ ಏನೂ ಖರೀದಿಸಬಾರದು. ಅವರನ್ನು ಮನೆಯ ಬಳಿ ಸುಳಿಯಗೊಡಬಾರದು. ಎಲ್ಲ ಕೆಲಸಗಳಿಂದ ದೂರವಿಡಬೇಕು. ಯಾವುದೇ ರೀತಿಯ ಸಂಪರ್ಕ ಇಟ್ಟುಕೊಳ್ಳಬಾರದು ಎಂಬಂತಹ ಹೇಳಿಕೆಗಳು ಫೇಸ್ ಬುಕ್ ವಾಡ್ಸಪ್ ಗಳಲ್ಲಿ ಎಗ್ಗಿಲ್ಲದೆ ಹರಿದಾಡುತ್ತಿವೆ. ಕೆಲವರಂತೂ ಅವರನ್ನು ಗುಂಡಿಟ್ಟು ಕೊಲ್ಲಬೇಕು ಎಂಬಷ್ಟರ ಮಟ್ಟಿನ ಉಗ್ರ ಹೇಳಿಕೆಗಳನ್ನು ಹರಿ ಬಿಡುತ್ತಿದ್ದಾರೆ. ಭಾರತದಂತಹ ಬಹುಜನಾಂಗೀಯ ದೇಶಕ್ಕೆ ಈ ಮನೋಭಾವ ತುಂಬಾ ಅಪಾಯಕಾರಿ. ಈ ಕುಚೇಷ್ಟೆಗಳು ತಕ್ಷಣ ನಿಲ್ಲಬೇಕು. ಸರಕಾರ ಈ ದಿಸೆಯಲ್ಲಿ ತನ್ನ ರಾಜಧರ್ಮ ಮರೆದು ಈ ರೀತಿ ದ್ವೇಷ ಬಿತ್ತುತ್ತಿರುವವರನ್ನು ನಿಯಂತ್ರಿಸಬೇಕು. ಇಂಥವರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸಬೇಕು. ದ್ವೇಷ ಬಿತ್ತುತ್ತಿರುವ ಗ್ರೂಪ್ ಅಡ್ಮಿನ್‌ಗಳನ್ನು ಬಂಧಿಸಬೇಕು. ಈಗಾಗಲೇ ಮುಖ್ಯಮಂತ್ರಿ ಯಡಿಯೂರಪ್ಪನವರು ಮುಸ್ಲಿಂ ಸಮುದಾಯವನ್ನು ಗುರಿ ಮಾಡಿ ಕೋಮುದ್ವೇಷ ಹಬ್ಬಿಸುವವರ ವಿರುದ್ಧ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದನ್ನು ಸ್ವಾಗತಿಸುತ್ತೇವೆ. ಆದರೆ ಈ ಹೇಳಿಕೆಯನ್ನು ಆಡಳಿತ ಯಂತ್ರ ನಿಜವಾಗಿ ಅನುಷ್ಠಾನಕ್ಕೆ ತರಬೇಕೆಂದು ಆಗ್ರಹಿಸುತ್ತೇವೆ. ಕೋಮುಭಾವ ಬಿತ್ತುತ್ತಿರುವ ಸಮೂಹ ಮಾಧ್ಯಮಗಳ ಮೇಲೂ ತೀವ್ರ ನಿಗಾ ಇಡಬೇಕು ಎಂದು ವಿನಂತಿಸುತ್ತೇವೆ. ದ್ವೇಷ ಯಾರನ್ನು ಉಳಿಗೊಡಲಾರದು. ಕೂಡಿ ಬಾಳುವ ನಮ್ಮ ಸೌಹಾರ್ದ ಸಾಂಸ್ಕೃತಿಕ ಪರಂಪರೆ ಹಾಳಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕವಿ ಕುವೆಂಪು ವಾಣಿ "ಕಚ್ಚಾಡುವವರನ್ನು ಕೂಡಿಸಿ ಒಲಿಸು; ಒಟ್ಟಿಗೆ ಬಾಳುವ ತೆರದಲಿ ಹರಸು." ನಮ್ಮ ಈ ಹೊತ್ತಿನ ಬೆಳಕಾಗಬೇಕಿದೆ.

ಆದ್ದರಿಂದ ಮಹಾ ಜನತೆಯು ಈ ಸಂದರ್ಭದಲ್ಲಿ ಉನ್ಮಾದಿತ ಹೇಳಿಕೆಗಳಿಗೆ ಬಲಿ ಬೀಳದೆ ಪ್ರಜ್ಞಾವಂತಿಕೆ ಮೆರೆಯಬೇಕೆಂದು ನಮ್ರ ವಿನಂತಿ.

ಕೆ. ನೀಲಾ, ಆರ್.ಕೆ. ಹುಡಗಿ, ಡಾ. ಕಾಶಿನಾಥ ಅಂಬಲಗಿ, ಡಾ। ಪ್ರಭುಖಾನಾಪುರೆ, ದತ್ತಾತ್ರೇಯ ಇಕ್ಕಳಕಿ, ಮಾರುತಿ ಗೋಖಲೆ, ಮೆಹರಾಜ್ ಪಟೇಲ್

ನಾನು ಚೈನಾ ಪರವಲ್ಲ, ಪ್ರಗತಿ ಪರ

ನಾವೆಲ್ಲರೂ ಈ ಜಗತ್ತಿಗೇ ಸಂಬಂದ ಪಟ್ಟವರು ಯಾರಾದರೂ ಜನಪರ ಒಳ್ಳೆಯ ಕೆಲಸ ಮಾಡಿದಾಗ ಪೂರ್ವಾಗ್ರಹ ಪೀಡಿತರಾಗಿ ನೀವು ಚೈನಾದವರಾ ಅಥವಾ ಇಂಡಿಯಾದವರೊ ಅಂಥ ಎಣಿಸದೆ ಮುಕ್ತ ಮನಸ್ಸಿನಿಂದ ತೆರೆದ ಹೃದಯದಿಂದ ಸ್ವಾಗತಿಸುವುದು ಮನುಜ ಸಹಜ ಗುಣವಾಗಿರಬೇಕು. ನಮ್ಮ ದೇಶದಲ್ಲಿರುವ ಬಡವರಲ್ಲಿ ಬಡವರಾದ ಸುಮಾರು 45 ಕೋಟಿ ಕೂಲಿ ಕಾರ್ಮಿಕರ ಜೀವನ ಪರಿಸ್ಥಿತಿ ಆಯೋಮಯವಾಗಿದ್ದು, ಸಂಸಾರ ಬೀದಿಪಾಲಾಗಿದೆ ಎಂಬುದನ್ನು ಮೊದಲು ತಿಳಿದು ಕೊಳ್ಳಬೇಕು. ಈ ನಿಟ್ಟಿನಲ್ಲಿ ಸರಕಾರ, ಆರೋಗ್ಯದ ಕುರಿತು ಅಭಿವೃದ್ಧಿ, ಪರಿಹಾರ ಕಾರ್ಯಕ್ರಮ ಸಮರೋಪಾದಿಯಲ್ಲಿ ನಡೆಸಬೇಕಿತ್ತು. ಆದರೆ ಕೇಂದ್ರ ಸರಕಾರ ಕೊರೊನ ಸೋಂಕು ಪರಹಾರಕ್ಕೆ ದೇಶದ ಒಟ್ಟು ಅಂತರಿಕ ಉತ್ಪನ್ನದ(ಜಿಡಿಪಿ) ಶೇಕಡಾ 2 ನ್ನು ಕಾದಿರಿಸಿ ಘೋಷಣೆ ಮಾಡಿ, ತೀರಾ ಅನ್ಯಾಯ ಮಾಡಿದೆ. ಇತರ ದೇಶಗಳಿಗೆ ಹೋಲಿಸಿದರೆ ತೀರಾ ನಿಕೃಷ್ಟವಾಗಿದೆ. ವಲಸೆ ಕಾರ್ಮಿಕರ ಲಕ್ಷಾಂತರ ಕುಟುಂಬ ಉಪವಾಸ ಬಿದ್ದು ಬೀದಿ ಪಾಲಾಗಿದ್ದಾರೆ. ನಮ್ಮ ಜನ ಸಾಮಾಜಿಕ ಅಂತರ ಕಾಪಾಡಿ ಎಂದು ಹೇಳಿದರೂ, ಮನೆಯಲ್ಲೇ ಇದ್ದು ವೈರಸ್ಸ್ ಸೋಂಕು ತಡೆಯಿರಿ ಎಂದರೂ ತಟ್ಟೆ, ಜಾಗಟೆ ಹೊಡೆಯುತ್ತಾ ಗುಂಪಾಗಿ ರಸ್ತೆಯಲ್ಲಿ ಸಾಮೂಹಿಕ ಭಜನೆ ಮಾಡುತ್ತಾ ಮೆರವಣಿಗೆ ದೃಶ್ಯವನ್ನು ನೋಡಿದ್ದೇವೆ. ಎಲ್ಲಿಯವರೆಗೆ ಮೂಡ ನಂಬಿಕೆಯಲ್ಲಿದ್ದಾರೆ ಎಂದರೆ ಭಜನೆ, ಗಾಯತ್ರಿ ಹೋಮ, ಗೋಮೂತ್ರಪಾನ, ಸೆಗಣಿಯಿಂದ ಕೊರೊನ ಓಡಿಸಬಹುದು ಎಂದು ನಂಬಿದ್ದಾರೆ. ನಾವೆಲ್ಲರೂ ದುಡಿಯುವ ಜನ ಶ್ರಮ ಜೀವಿಗಳು ನಾವೆಲ್ಲರೂ ಪ್ರಪಂಚದ ಸಮಾಜ ಜೀವಿಗಳು ಜಗತ್ತಿನಲ್ಲಿ ಎಲ್ಲೇ ಮಾನವ ಜೀವಿಗಳಿಗೆ ಹಾನಿಯಾದರೆ ಮಾನವೀಯ ದೃಷ್ಟಿಯಿಂದಲೇ ಕಾಣಬೇಕೆ ಹೊರತು ಯಾರು ಯಾರ ಯಾವ ದೇಶದ ಪರ ಎಂಬುದನ್ನು ಹೇಳುವುದಲ್ಲ. ಹಾಗೆ ಬೇದ ಎಣಿಸದೇ ಸಮಾಜದ ಜೀವಪರ ಕಾಳಜಿಯಿಂದ ವಿಶಾಲ ಮನೋಬಾವದಿಂದ ಇದ್ದರೆ ತಾನೆ ಸಮಾಜ ಸುಖ ಸಂತೋಷದಲ್ಲಿರಲು ಸಾಧ್ಯ. ಒಂದು ನಮಗೆ ಸ್ಪಷ್ಟವಾಗಿ ಗೊತ್ತಿರಲೇಬೇಕಾದ ಸತ್ಯ ಸಂಗತಿ ಏನೆಂದರೆ. ಈಗ ನಮ್ಮ ದೇಶ ಆಡಳಿತ ನಡೆಸುತ್ತಿರುವುದು ಮೋದಿ, ಯಡ್ಯೂರಪ್ಪ ಅಲ್ಲ, ಈ ದೇಶದ ಪ್ರಭುತ್ವದ ಚುಕ್ಕಾಣಿ ಅದಾನಿ, ಅಂಬಾನಿ, ಮಿಥ್‌ಲ್ ಮುಂತಾದ ಕೆಲವೇ ದೇಶದ ಜನಸಂಖ್ಯೆಯ ಶೇಕಡಾ 1 ಜನ ಬಂಡವಾಳಶಾಹಿ ಭೂಮಾಲಕ ಶಕ್ತಿ ಕೇಂದ್ರವಾದ ಅದಾನಿ, ಅಂಬಾನಿ ಮುಂತಾದವರ ಪರವಾದ ನೀತಿಯಿಂದಾಗಿ ದೇಶದಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ದಾರಿದ್ರ್ಯ ತಾಂಡವವಾಡುತ್ತಿದೆ ಎಂಬ ಅರಿವು ಬೇಕು. ಸಮ ಸಮಾಜಕ್ಕಾಗಿ ಸಮಾಜವಾದೀ ಸಮಾಜಕ್ಕಾಗಿ ನಮ್ಮ ಹೋರಾಟ ನಡೆಸಬೇಕು. ಆದ್ದರಿಂದ ಇದು ಚೀನಾ, ಭಾರತದ ಪರ, ವಿರೋಧದ ಪ್ರಶ್ನೆ ➚

ಲಾಕ್ಡೌನ್ ಕಾರ್ಮಿಕರಿಗೆ ಪರಿಹಾರ ಕಾರ್ಯಕ್ಕೆ ಸರ್ಕಾರದ ಬದಲಾಗುತ್ತಿರುವ ಕ್ರಮಗಳೆ ಅಡ್ಡಿ: ಸಿಪಿಐ(ಎಂ)

ರಾಜ್ಯ ಸರ್ಕಾರವು ನಿರಂತರವಾಗಿ ಬದಲಾಯಿಸುತ್ತಿರುವ ಕ್ರಮಗಳೆ ಕೋವಿಡ್ ಲಾಕ್ಡೌನ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಕಾರ್ಮಿಕರಿಗೆ ಪರಿಹಾರವನ್ನು ನೀಡಲು ಅಡ್ಡಿಯಾಗುತ್ತಿವೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಖಂಡಿಸಿದೆ.

ಲಾಕ್ಡೌನ್ ಆರಂಭವಾದಾಗ ಊರಿಗೆ ಹೋಗಲು ಬಯಸಿದವರನ್ನು ಊರಿಗೆ ಹೋಗಲು ಬಿಡಲಿಲ್ಲ. ಆನಂತರ ಹೋಗುವವರು ಹೋಗಬಹುದು ಎಂದು ಮೊದಲ ಗೊಂದಲ ಸೃಷ್ಟಿ ಮಾಡಿತು.

ಆನಂತರ ಇಂದಿರಾ ಕ್ಯಾಂಟೀನ್ ಗಳಲ್ಲಿ ದಿನದ ಮೂರು ಹೊತ್ತು ಉಚಿತ ಆಹಾರ ನೀಡುವುದಾಗಿ ಹೇಳಿ ಒಂದೇ ದಿನದಲ್ಲಿ ಅದನ್ನು ಕುಂಟು ನೆಪ ನೀಡಿ ನಿಲ್ಲಿಸಿತು. ಮತ್ತೆ ಇಂದಿರಾ ಕ್ಯಾಂಟೀನಲ್ಲಿ ಪ್ಯಾಕ್ಡ ಫುಡ್ ನೀಡಲು ಪ್ರಾರಂಭಿಸಿ ಇತ್ತೀಚೆಗೆ ಅದನ್ನು ನಿಲ್ಲಿಸಿ ಬಿಟ್ಟಿತ್ತು.

ಈ ನಡುವೆ ಕಾರ್ಮಿಕ ಇಲಾಖೆಯು ಕಟ್ಟಡ ಕಾರ್ಮಿಕರಿಗೆ ಮತ್ತು ಇತರೆ ಅಸಂಘಟಿತರಿಗೆ ಉಚಿತ ಆಹಾರ ಮತ್ತು ಫುಡ್ ಹ್ಯಾಂಪರ್ಸ ನೀಡಲು ಕಳೆದ ಒಂದು ವಾರದಿಂದ ಅಗತ್ಯ ಮೂಲ ಸೌಕರ್ಯಗಳನ್ನು ಸನ್ನದ್ದುಗೊಳಿಸಿ ಕೊಂಡಿತ್ತು. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಹಣವನ್ನು ಅದಕ್ಕೆ ವಿನಿಯೋಗಿಸಿತ್ತು. ಸುಸಜ್ಜಿತ ಸಹಾಯವಾಣಿ ಕೇಂದ್ರ ಮತ್ತು ಆಹಾರ ತಯಾರಿಕೆಗೆ ಕ್ರಮ ಮತ್ತು ಒಂದು ಲಕ್ಷ ಫುಡ್ ಹ್ಯಾಂಪರ್ಸಗಳನ್ನು ಸಿದ್ಧ ಪಡಿಸಿಕೊಂಡಿತ್ತು. ದಾಸೋಹ 2020 ಉಚಿತ ಆಹಾರ ವಿತರಣೆಗೆ ಕ್ರಮ ವಹಿಸಿ ಅದರ ಉಧ್ಘಾಟನೆಯನ್ನು ಕಾರ್ಮಿಕ ಸಚಿವರು ನೆರೆವೇರಿಸಿದ್ದರು. ಉಚಿತ ಸಿದ್ದ ಆಹಾರ ಮತ್ತು ಫುಡ್ ಹ್ಯಾಂಪರ್ಸ ವಿತರಣೆಯನ್ನು ಸಹಾ ಆರಂಭಿಸಲಾಗಿತ್ತು. ಅದ್ದಕ್ಕಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳ ಸ್ವಯಂ ಸೇವಕರು, ಕಾರ್ಮಿಕ ಅಧಿಕಾರಿಗಳು ಮತ್ತು ನಾಗರೀಕ ಪ್ರತಿನಿಧಿಗಳನ್ನು ಒಳಗೊಂಡು 198 ವಾರ್ಡ್ ಸಮಿತಿಗಳನ್ನು ರಚಿಸಲಾಗಿತ್ತು.

ಕೆಲಸ ಆರಂಭವಾದೊಡನೆ, ಫುಡ್ ಹ್ಯಾಂಪರ್ಸಗಳ ವಿತರಣೆ ಆರಂಭವಾದ ಒಂದೆ ದಿನದಲ್ಲಿ ವಿತರಣೆ ಕಾರ್ಯವನ್ನು ಬಿಬಿಎಂಪಿಗೆ ವಹಿಸಲು ರಾಜ್ಯ ಸರ್ಕಾರವು ದಿಡೀರನೆ ತೀರ್ಮಾನ ಮಾಡಿರುವುದು ರಾಜಕೀಯ ಪ್ರೇರಿತ ಕ್ರಮವಾಗಿದೆ. ತನ್ನ ರಾಜಕೀಯ ಹಿತಾಸಕ್ತಿಗಾಗಿ ಪರಿಹಾರ ಕಾರ್ಯವನ್ನೆ ಬಲಿ ಕೊಡಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ತೀರ್ವವಾಗಿ ಖಂಡಿಸಿದೆ.

ರಾಜ್ಯ ಬಿಜೆಪಿ ಸರ್ಕಾರಕ್ಕೆ ಸಂಕಷ್ಟಕ್ಕೆ ಸಿಲುಕಿರುವ ಅಸಂಘಟಿತ ಕಾರ್ಮಿಕರಿಗೆ ಸಮರ್ಪಕ ಹಾಗು ಸಮರ್ಥ ಪರಿಹಾರ ನೀಡುವುದಕ್ಕಿಂತ ತನ್ನ ರಾಜಕೀಯ ಹಿತಾಸಕ್ತಿಯೆ ಪ್ರಧಾನವಾಗಿದೆ ಎಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಖಂಡಿಸಿದೆ.

ಕಾರ್ಮಿಕ ಇಲಾಖೆಯ ಅದರಲ್ಲೂ ಕಲ್ಯಾಣ ಮಂಡಳಿ ಹಣದಲ್ಲಿ ನೀಡಲಾಗುವ ಪರಿಹಾರ ಕಾರ್ಯವು ಕಾರ್ಮಿಕ ಇಲಾಖೆ ಮತ್ತು ಕಾರ್ಮಿಕ ಸಂಘಟನೆಗಳ ಸಹಭಾಗಿತ್ವದಲ್ಲೆ ಸರ್ಮಪಕವಾಗಿ ನಡೆಸಲು ರಾಜ್ಯ ಸರ್ಕಾರವು ಅನುವುಗೊಳಿಸಿದ ಬೇಕು. ಅದಕ್ಕಾಗಿ ಬಿಬಿಎಂಪಿ ಮೂಲಕವೇ ವಿತರಿಸ ಬೇಕೆಂಬ ತೀರ್ಮಾನವನ್ನು ಕೊಡಲೆ ಹಿಂಪಡೆಯಬೇಕೆಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಕೆ.ಎನ್. ಉಮೇಶ್, ಜಿಲ್ಲಾ ಕಾರ್ಯದರ್ಶಿ (09–04–2020)

ಕೋವಿಡ್–19 ಕೊರೊನಾ ಲಾಕ್ ಡೌನ್ – ದುಡಿಯುವ ಮಹಿಳೆಯರ ಅನಿವಾರ್ಯ ಅಗತ್ಯಗಳಿಗೆ ಸರ್ಕಾರ ಸ್ಪಂದಿಸಲು ಕೋರಿ ಜನವಾದಿ ಮಹಿಳಾ ಸಂಘಟನೆಯ ಮನವಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಕಳೆದ ನಲವತ್ತು ವರ್ಷಗಳಿಂದ ದೇಶದ ಎಲ್ಲ ವಿಭಾಗದ ಮಹಿಳೆಯರ ಮಧ್ಯೆ ಕೆಲಸ ಮಾಡುತ್ತಿರುವ ಅತಿ ದೊಡ್ಡ ಸಂಘಟನೆಯಾಗಿದೆ. ಆ ಸಂಘಟನೆಯ ಪರವಾಗಿ ನಮ್ಮ ಈ ಮನವಿಯನ್ನುತಮಗೆ ಸಲ್ಲಿಸುತ್ತಿದ್ದೇವೆ.

ಕೊರೋನಾ–ಕೊವಿಡ್–19 ಹೆಸರಿನ ಹೊಸ ವೈರಾಣುವೊಂದು ಕಾಣಿಸಿಕೊಂಡಿದೆ. ರೋಗ ಸುಲಭವಾಗಿ ಹರಡದಂತೆ ಜಾಗೃತೆ ವಹಿಸುವುದು ಅನಿವಾರ್ಯ ಅಗತ್ಯವಾಗಿದೆ. ಹಾಗೆಂದೇ ಇಡೀ ದೇಶದಲ್ಲಿ ಲಾಕ್ ಡೌನ್ ಜಾರಿಯಾಗಿದೆ. ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ತುರ್ತನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ. ನಾವದನ್ನು ಬೆಂಬಲಿಸುತ್ತೇವೆ. ಆದರೆ ಹಾಗೆ ಸಾಮಾಜಿಕ ದೂರ ಕಾಪಾಡಿಕೊಳ್ಳುವ ಹಾಗೂ ಲಾಕ್ ಡೌನ್ ಆದೇಶದನ್ವಯ ಮನೆಯಿಂದ ಹೊರ ಬಾರದೇ ಉಳಿಯುವಾಗ ಎಲ್ಲ ಜನರೂ ಅದರಲ್ಲಿಯೂ ಬಡ ಮಹಿಳೆಯರು, ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ಎದುರಿಸುವ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಹಾಗೂ ತುರ್ತಾಗಿ ಪರಿಹಾರ ಸಾಮಗ್ರಿಗಳನ್ನು ವಿತರಿಸಲು ತಮ್ಮ ಇಲಾಖೆಯ ಮತ್ತು ಸರ್ಕಾರದ ಮೂಲಕ ಮುಂದಾಗಬೇಕೆಂದು ವಿನಂತಿಸುತ್ತೇವೆ.

ಸಮಸ್ಯೆಗಳು:

ರಾಜ್ಯದಲ್ಲಿ ಅಸಂಖ್ಯಾತ ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿದ್ದಾರೆ. ಈ ಲಾಕ್ ಡೌನ್ ಅವರಿಗೆ ಅತ್ಯಂತ ಸಂಕಷ್ಟಮಯ ಸನ್ನಿವೇಶವನ್ನು ತಂದೊಡ್ಡಿದೆ.

ಮನೆಗೆಲಸದ ಮಹಿಳೆಯರು ಕೆಲಸಗಳಿಗೆ ಹೋಗಲು ಸಾಧ್ಯವಿಲ್ಲದ ಕಾರಣದಿಂದ ಈ ಅವಧಿಯಲ್ಲಿ ಸಂಬಳ ಸಿಗಲಾರದ ಸ್ಥಿತಿ ಇದೆ.

ಕಟ್ಟಡ ಕಾರ್ಮಿಕರಾಗಿರುವ ಮಹಿಳೆಯರು, ಕಟ್ಟಡ ಕಾರ್ಮಿಕರ ಕುಟುಂಬದ ಮಹಿಳೆಯರು ಕೂಡ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ದುಡಿಮೆಯ ಅವಕಾಶವಿಲ್ಲದ್ದರಿಂದ ಮನೆಯಲ್ಲಿರುವ ಮಕ್ಕಳಿಗೆ ಅಗತ್ಯವಾದ ಹಾಲು ಸಿಗುತ್ತಿಲ್ಲ.

ಕೂಲಿಯಿಲ್ಲದ ಕಾರಣದಿಂದ ಹೆಣ್ಣುಮಕ್ಕಳಿಗೆ ಮುಟ್ಟಿನ ದಿನಗಳ ತೀರಾ ಅಗತ್ಯವಾದ ಸ್ಯಾನಿಟರಿ ನ್ಯಾಪಕಿನ್ಸ್ ಗಳನ್ನೂ ಕೊಳ್ಳಲು ಸಾಧ್ಯವಾಗದೇ ಬಾಧೆಪಡುತ್ತಿದ್ದಾರೆ.

ಇಲಾಖೆಯಿಂದ ಸಿದ್ಧಪಡಿಸಿದ ಆಹಾರದ ಪೊಟ್ಟಣಗಳನ್ನು ವಿತರಿಸಲಾಗುತ್ತಿದೆ. ಅದರ ಬಗ್ಗೆ ಕಾರ್ಮಿಕರಿಗೆ ಸಂತೋಷವಿದೆ. ಆದರೆ ಆಹಾರ ಪದ್ಧತಿಗಳು ವಿಭಿನ್ನ ಇರುವುದರಿಂದ ಸಣ್ಣ ಸಣ್ಣ ಸಮಸ್ಯೆಗಳಾಗುತ್ತಿವೆ.

ಹೀಗೆ ಕೆಲವು ಮೇಲ್ನೋಟಕ್ಕೆ ಕಾಣುವ ಅಂಶಗಳನ್ನಷ್ಟೇ ಇಲ್ಲಿ ಪಟ್ಟಿ ಮಾಡಿದ್ದು ಇನ್ನೂ ಬೇಕಾದಷ್ಟು ಸಮಸ್ಯೆಗಳಿವೆ. ಹಾಗೂ ಈ ಸಮಸ್ಯೆಗಳು ಕೇವಲ ಲಾಕ್ ಡೌನ್ ಅವಧಿಗೆ ಮಾತ್ರವಲ್ಲದೇ ನಂತರದ ಕೆಲವು ತಿಂಗಳುಗಳ ವರೆಗೂ ವಿಸ್ತರಿಸುತ್ತದೆ. ಹಾಗಾಗಿ ಸ್ವಲ್ಪ ದೀರ್ಘಕಾಲೀನ ಮುನ್ನೋಟದೊಂದಿಗೆ ಸರ್ಕಾರ ಕೆಲವು ಕ್ರಮಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತೇವೆ.

ನಮ್ಮ ಬೇಡಿಕೆಗಳು:

ಕಾರ್ಮಿಕರಿಗೆ ವಿತರಣೆಯಾಗಲಿರುವ ರೇಷನ್ ಸಮರ್ಪಕವಾಗಿ ಅರ್ಹರ ಕೈಗೇ ದೊರೆಯುವಂತೆ ವಿತರಣೆಯಾಗಬೇಕು.

ಕಾರ್ಮಿಕ ಇಲಾಖೆಯ ಮೂಲಕ ಅಸಂಘಟಿತ ವಲಯದ ಮಹಿಳೆಯರಿಗೆ ಉಚಿತ ಸ್ಯಾನಿಟರಿ ನ್ಯಾಪಕಿನ್ ಗಳನ್ನು ವಿತರಿಸುವ ವ್ಯವಸ್ಥೆಯಾಗಬೇಕು.

ಊಟ ಮತ್ತು ರೇಷನ್ ಜೊತೆ ಮಕ್ಕಳಿಗೆ ಕುಡಿಯಲು ಹಾಲು ಮತ್ತು ಬಿಸ್ಕೆಟ್ ಪೊಟ್ಟಣಗಳನ್ನು ವಿತರಿಸುವ ವ್ಯವಸ್ಥೆಯಾಗಬೇಕು.

ದಾಸೋಹ 2020 ಒಂದು ಉತ್ತಮ ಹೆಜ್ಜೆಯಾಗಿದ್ದರೂ ಹಂಗರ್ ಹೆಲ್ಪ್ ಲೈನ್ (155214) ಗೆ ಕರೆ ಮಾಡಿ ಕೇಳುವ ಆಹಾರ ಸರಬರಾಜಿನ ಬೇಡಿಕೆಗೆ ಪ್ರತಿಯಾಗಿ ಆಹಾರ ಪೂರೈಕೆಯಾಗದಿರುವುದು ನಮ್ಮ ಅನುಭವಕ್ಕೆ ಬಂದಿದ್ದು ಅದರ ಬಗ್ಗೆ ತಾವು ಗಮನ ಹರಿಸಿ ವ್ಯತ್ಯಯವಾಗದಂತೆ ಕ್ರಮ ವಹಿಸಬೇಕು.

ಮನೆಗೆಸಲದ ಮಹಿಳೆಯರಿಗೆ ಸಂಬಳ ಕಡಿತ ಮಾಡದಂತೆ ವಿನಂತಿಸುವ ಹೇಳಿಕೆಯೊಂದನ್ನು ನೀಡಬೇಕು. ಕಟ್ಟಡ ಕಾರ್ಮಿಕರಿಗೆ ಕೊಡಲು ನಿರ್ಧರಿಸಿರುವ ಸಹಾಯಧನವನ್ನು 3000/ಕ್ಕೆ ಏರಿಸಬೇಕು ಮತ್ತು ಅದನ್ನೇ ಮನೆಗೆಸಲದವರಿಗೂ ವಿಸ್ತರಿಸಬೇಕು.

ಕಟ್ಟಡ ಮತ್ತಿತರ ನಿರ್ಮಾಣ ಕಾರ್ಯದ ಕೆಲಸಗಾರರಿಗೆ ಲೇಬರ್ ಕಾರ್ಡ್ ಮೂಲಕ ಕೊಡುವ ಸೌಲಭ್ಯಗಳನ್ನು ಮನೆಗೆಲಸದ ಸ್ಮಾರ್ಟ್ ಕಾರ್ಡ್ ಪಡೆದವರಿಗೂ ವಿಸ್ತರಿಬೇಕು.

ಲಾಕ್ ಡೌನ್ ಲಿಫ್ಟ್ ಆದ ನಂತರ ಅಸಂಘಟಿತ ವಲಯದ ಮಹಿಳೆಯರಿಗೆ ಕನಿಷ್ಠ ಮೂರುತಿಂಗಳಿಗಾದರೂ ಉಚಿತ ಬಸ್ ಪಾಸ್ ನೀಡುಲು ಅಗತ್ಯವಾದ ಕ್ರಮ ಕೈಗೊಳ್ಳಬೇಕು.

ಜಿಲ್ಲಾ ಮಟ್ಟದಲ್ಲಿ ಅಸಂಘಟಿತ ಹಾಗೂ ವಲಸೆ ಕಾರ್ಮಿಕರುಗಳ–(ಮಹಿಳೆಯರನ್ನೂ ಗಮನದಲ್ಲಿಟ್ಟುಕೊಂಡು) ಸಮಸ್ಯೆಗೆ ಕಿವಿಕೊಡಲು ಹಾಗೂ ಸಮರ್ಪಕ ಪರಿಹಾರ ಒದಗಿಸಲು ಸಾಮಾಜಿಕ ಕಳಕಳಿಯಲ್ಲಿ ಕೆಲಸ ಮಾಡುವ ಸಾಮಾಜಿಕ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ಸಲಹಾ ಸಮಿತಿಗಳನ್ನು ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ರಚಿಸಿ ಕಾರ್ಯ ನಿರ್ವಹಿಸುವಂತೆ ಕ್ರಮ ವಹಿಸಬೇಕು.

ಕೇಂದ್ರ ಸರ್ಕಾರ ಎರಡು ತಿಂಗಳ ರೇಷನ್‌ನ್ನು ಮುಂಗಡವಾಗಿ ಕೊಡಲು ಮಾಡಿದ ಆದೇಶದ ಹಿನ್ನೆಲೆಯಲ್ಲಿ ರೇಷನ್ ಪೂರೈಕೆ ಪ್ರಾರಂಭವಾಗಿದೆ. ಆದೇಶದಂತೆ ಯಾರು ಯಾವ ರೇಷನ್ ಅಂಗಡಿಗಳಲ್ಲಿ ಬೇಕಾದರೂ ರೇಷನ್ ಪಡೆಯಬಹುದು ಎಂದಿದ್ದರೂ ಕೆಲವು ಅಂಗಡಿಗಳಲ್ಲಿ ತಮ್ಮ ಪಡಿತರದಾರರಲ್ಲವೆಂದು ರೇಷನ್ ನೀಡಿಲ್ಲ. ಸಾಮಾನ್ಯವಾಗಿ ರೇಷನ್ ಪಡೆಯುವವರು ಅಸಂಘಟಿತ ವಲಯದ ಕಾರ್ಮಿಕರಾಗಿರುವುದರಿಂದ ತಾವು ಮಧ್ಯಪ್ರವೇಶಿಸಿ ಕೇಂದ್ರ ಸರ್ಕಾರದ ಆದೇಶದ ಜಾರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿಸುತ್ತೇವೆ.

ಲಾಕ್ ಡೌನ್ ತಂದಿರಿಸಿದ ಸಂಕಷ್ಟಗಳಿಂದ ಕೌಟುಂಬಿಕ ದೌರ್ಜನ್ಯದ ಪ್ರಮಾಣದಲ್ಲಿ ತೀರ ಹೆಚ್ಚಳವಾಗಿದೆಯೆಂದು ವರದಿಗಳು ಹೇಳುತ್ತಿವೆ. ಕಾರ್ಮಿಕ ವಲಯದಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು ಇಲಾಖೆಯಿಂದ ಸಮಾಲೋಚನೆ ನಡೆಸಲು ಮಾರ್ಗೋಪಾಯಗಳನ್ನು ಹುಡುಕಬೇಕು.

ನಮ್ಮ ಈ ಮನವಿಯನ್ನು ಮಹಿಳಾ ಪರ ಮಾನವೀಯ ನೆಲೆಯಲ್ಲಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇವೆ.

ದೇವಿ, ಅಧ್ಯಕ್ಷರು – ವಿಮಲಾ ಕೆ.ಎಸ್., ಲಕ್ಷ್ಮಿ ಕೆ.ಎಸ್. ಉಪಾಧ್ಯಕ್ಷರು – ಗೌರಮ್ಮ ಪ್ರಧಾನ ಕಾರ್ಯದರ್ಶಿ (09–04–2020)

ಮುಖ್ಯವಾಗುವುದಿಲ್ಲ.

ಮನು ಕುಲದ ಭವಿಷ್ಯದ ಜೀವನದ ಪ್ರಶ್ನೆ ಮೇಲೆ ನಿಂತಿದೆ. ಆದ್ದರಿಂದ ಹೆಚ್ಚೆಚ್ಚು ಈ ಬಗ್ಗೆ ತಿಳಕೊಳ್ಳಲು ಇತಿಹಾಸ ಅರಿಯಲು ಪುಸ್ತಕ ಬೇಕಷ್ಟಿದೆ ಓದಿ ವಿಷಯ ತಿಳಿದುಕೊಳ್ಳಲು ಮುಂದಾಗೋಣ. ಈ ನಮ್ಮ ದೇಶದ ಜನಸಂಖ್ಯೆಯ ಶೇಖಡಾ 1% ಬಂಡವಾಳಶಾಹಿ ಶ್ರೀಮಂತರು, (ಕಪಿಮುಷ್ಟಿ) ದೇಶದ ಜನರ ಶೇಖಡಾ 99% ಪಾಲಿನಷ್ಟು ಸಂಪತ್ತನ್ನು ಹೊಂದಿದ್ದಾರೆ ಎಂಬ ಕಹಿ ಸತ್ಯ ಅರಿಯಬೇಕು. ಅಂದರೆ ಇದರಿಂದ ನಮ್ಮ ದೇಶದ ಬಡತನದ ಆಳ ಅರಿವಿಗೆ ಬರುತ್ತದೆ. ದೇಶದ ಕೇವಲ 100 ಕುಟುಂಬ ಮಿಲಿಯಾದಿಪತಿಗಳು ದೇಶದ ಸಂಪತ್ತಿನ ಅತೀ ದೊಡ್ಡ ಪಾಲನ್ನು ಹೊಂದಿದ್ದಾರೆ. ಅದೇ ಹೊತ್ತಿಗೆ ಅನ್ನದಾನ ಶ್ರೇಷ್ಟ ದಾನ, ಮಹಾದಾನ ಎಂಬ ನಮ್ಮ ದೇಶದಲ್ಲಿ ಕ್ಯಾನ್ಸರ್, ಏಯ್ಡ್ಸ ಖಾಯಿಲೆಗಿಂತ ಬಡತನದಿಂದ, ಹಸಿವಿನ ಸಾವೆ ಹೆಚ್ಚು ನಡೆಯುತ್ತಿದೆ ಇದು ವಿಪರ್ಯಾಸ. 40 ಕೋಟಿಗೂ ಮಿಕ್ಕಿ ದೇಶದ ಜನಸಾಮಾನ್ಯರ ದಿನದ ತಲಾ ಆದಾಯ ಕೇವಲ ರೂ 20/– ಎಂಬುದು ಮರೆಯಲಾಗದು. ಬಡತನ ಕಿತ್ತು ತಿನ್ನುವ ದೃಶ್ಯ ನಿತ್ಯ ನಿರಂತರ. ನಿರುದ್ಯೋಗ, ಬಡತನ, ದಟ್ಟ ದಾರಿದ್ರ್ಯ, ಹಸಿವು, ಅನಕ್ಷರತೆ, ಅನಾರೋಗ್ಯ ದೇಶಕ್ಕೆ ಕೊರೊನ ಮಾರಿಗಿಂತ ಮಿಲಿಗಾಗಿ ಕಾಡುತ್ತಿದೆ. ಇದನ್ನು ಅರ್ಥ ಮಾಡಿಕೊಳ್ಳಲಾರದ ನಮಗೆ ಮೌಢ್ಯ, ಬುದ್ದಿಗೆ ಬರ, ದಾರಿದ್ರ ಬಡಿದಿದೆ ಎಂಬುದು ಅಷ್ಟೇ ಸತ್ಯ.

ಬರಹ: ವೆಂಕಟೇಶ ಕೋಣಿ


ಪಡಿತರ ನೀಡಲು ಒಟಿಪಿ ಬೇಡವೇ ಬೇಡ

ಈ ಮೂಲಕ ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್ಎಫ್ಐ) ರಾಯಚೂರು ಜಿಲ್ಲಾ ಸಮಿತಿ ತಮಗೆ ತಿಳಿಸುವುದೇನೆಂದರೆ, ಜಿಲ್ಲೆಯಿಂದ ರಾಜ್ಯ ಸರ್ಕಾರ ಒಟಿಪಿ ಇಲ್ಲದೇ ಪಡಿತರ ವಿತರಿಸಲು ಆದೇಶ ನೀಡಿದೆ. ಆದರೂ ಸಹ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳು ಒಟಿಪಿ ಪಡೆದು ಪಡಿತರ ವಿತರಿಸುತ್ತಿದ್ದು, ಈ ಕ್ರಮ ಜನವಿರೋಧಿಯಾಗಿದೆ. ಸರ್ಕಾರವೂ ಇಂತಹದರ ಬಗ್ಗೆ ಸ್ಪಷ್ಟ ಕ್ರಮ ತೆಗೆದುಕೊಂಡು ಜನಸಾಮಾನ್ಯನಿಂದ ಹಿಡಿದು ಎಪಿಎಲ್, ಬಿಪಿಎಲ್ ಎಂಬ ತಾರತಮ್ಯವಿಲ್ಲದೇ ಪಡಿತರ ಇಲ್ಲದವರಿಗೂ ಪಡಿತರ ನೀಡಬೇಕು.

ಜಿಲ್ಲೆಯಿಂದ ಗುಳೆ ಹೋಗಿದ್ದ ಅದೆಷ್ಟೋ ಜನ ಕರೊನಾದಿಂದ ತತ್ತರಿಸಿದ ಜಿಲ್ಲೆಗೆ ವಾಪಾಸ್ಸಾಗಿದ್ದಾರೆ. ಕೂಲಿಯನ್ನೇ ನಂಬಿ ಜೀವನ ನಡೆಸುವ ಜನರು ಆದಾಯವಿಲ್ಲದೇ ಜೀವನ ಸಾಗಿಸೋದು ಹೇಗೆ ಎಂಬ ಚಿಂತೆಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ಮತ್ತು ಸರ್ಕಾರ ಭಿನ್ನ ಭಿನ್ನವಾದ ಹೇಳಿಕೆ ನೀಡಿ ಜನತೆಯನ್ನು ಮತಷ್ಟು ಮಾನಸೀಕವಾಗಿ ಸಾಯಿಸುವುದು ಸರಿಯಲ್ಲ. ಕೂಡಲೇ ಪ್ರತಿಯೊಬ್ಬರಿಗೂ ಸರಳವಾಗಿ ಪಡಿತರ ಸಿಗುವಂತ ಸರಳ ವಿಧಾನ ಅನುಸರಿಸಬೇಕು.

ಅಲ್ಲದೇ ಈಗ ಪ್ರತೀ ಬಿಬಿಎಲ್ ಕುಂಟುಂಬ ಸದಸ್ಯಯೊಬ್ಬರಿಗೆ 5 ಕೆಜಿಯಂತೆ ಕಾರ್ಡ್‌ವೊಂದಕ್ಕೆ ಒಂದು ಕೆಜಿ ಗೋದಿ ವಿತರಿಸಲಾಗುತ್ತಿದೆ. ಎಪಿಎಲ್ ಕಾರ್ಡ್‌ಗೆ 1 ಕೆಜಿ ಅಕ್ಕಿಗೆ 10 ರೂ, ಗೋದಿಗೆ 15 ರೂ. ನಂತೆ ಹಣ ತೆಗೆದುಕೊಳ್ಳಲಾಗುತ್ತಿದ್ದು, ಇದು ಕೂಡಾ ಸರಿಯಾದ ನಿರ್ಧಾರವಲ್ಲ. ಎಲ್ಲಾ ಕಾರ್ಡ್‌ದಾರರು ಹಾಗೂ ಕಾರ್ಡ್ ಇಲ್ಲದವರಿಗೂ ಯಾವುದೇ ತಾರತಮ್ಯವಿಲ್ಲದೇ ಪಡಿತರ ನೀಡಬೇಕು. ಈಗ ನೀಡುತ್ತಿರುವ ಆಹಾರ ಧಾನ್ಯ ನೀಡಿದರೆ ಜೀವನಾವಶ್ಯಕತೆಗೆ ಸಾಲುವುದಿಲ್ಲ. ಆದ್ದರಿಂದ ಬೇಳೆ, ಸಕ್ಕರೆ, ಬೆಲ್ಲ, ಸಾಬೂನು ಸೇರಿದಂತೆ ಇನ್ನಿತರ ಅಗತ್ಯ ದಿನಸಿ ವಸ್ತುಗಳನ್ನು ಪೂರೈಸಲು ಅಧಿಕಾರಿಗಳು ಮತ್ತು ಸರ್ಕಾರ ಮುಂದಾಗಬೇಕು. ಪಡಿತರಕ್ಕೆ ನ್ಯಾಯಬೆಲೆ ಅಂಗಡಿ ಮಾಲಕರು ಹೆಚ್ಚುವರಿ ಅಥವಾ ಇಲಾಖೆ ಆದೇಶಕ್ಕೆ ವಿರುದ್ಧವಾಗಿ ಹಣ ವಸೂಲಿ ಮಾಡಿದರೆ ಅಥವಾ ಅಳತೆಯಲ್ಲಿ ಮೋಸ ಹಾಗೂ ಕಡಿಮೆ ವಿತರಿಸಿದ ಮಾಲೀಕರ ಮಾನ್ಯತೆ ರದ್ದುಗೊಳಿಸಬೇಕು. ಪಡಿತರ ನೀಡುವಾಗ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ನೂಕು ನುಗ್ಗಲುವುಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕ್ರಮ ಜರುಗಿಸಬೇಕು ಎಂದು ಎಸ್ಎಫ್ಐ ರಾಯಚೂರು ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ.

ರಮೇಶ ವೀರಾಪೂರು



ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ


ಯುದ್ಧ, ಮತ್ತು ಅನಾಹುತಗಳ ಪರಿಸ್ಥಿತಿಗಳನ್ನು ಸೃಷ್ಟಿಸಿ ಅವುಗಳ ತೆಕ್ಕೆಗೆ ಜನರನ್ನು ಏಕಾಏಕಿ ಬೀಳಿಸಿ, ಭಯಗ್ರಸ್ತರನ್ನಾಗಿಸಿ, ಅಂಥ ದಿಗ್ಮೂಢ ಸ್ಥಿತಿಯಲ್ಲಿ, ಸಾಧಾರಣ ಪರಿಸ್ಥಿತಿಗಳಲ್ಲಿ ಜಾರಿಗೊಳಿಸಲಾಗದಂಥ ಜನವಿರೋಧೀ ನೀತಿಗಳನ್ನು, ಅಭಿವೃದ್ಧಿಯ ಹೆಸರಿನಲ್ಲಿ ಜಾರಿಗೊಳಿಸುವುದು ಬಂಡವಾಳಶಾಹಿ ಸರ್ಕಾರಗಳು ಬಳಸುವ ಮತ್ತೊಂದು ತಂತ್ರ. ಇದನ್ನೇ ನೋಮೀ ಕ್ಲೀನ್ 'ಷಾಕ್ ಡಾಕ್ಟ್ರಿನ್' ಎಂದು ಕರೆದಿದ್ದಾರೆ. ಈಗ ರಾಷ್ಟ್ರೀಯತೆ, ತಾತ್ವಿಕತೆ, ವರ್ಗ, ಜಾತಿ–ಮತಗಳ ಭೇದಗಳನ್ನು ಮೀರಿ ಜಾಗತಿಕವಾಗಿ ಹರಡುತ್ತಿರುವ ಕೋವಿಡ್ ತಾನೇ 'ಒಂದು ದೊಡ್ಡ ನೈಸರ್ಗಿಕ ಷಾಕ್' ಎನ್ನುತ್ತಾರೆ, ನೋಮಿ ಕ್ಲೀನ್. ಆದರೆ, ಇಂಥ ನೈಸರ್ಗಿಕ ಅನಾಹುತಗಳನ್ನೂ ಸಹ ತಮ್ಮ ಫ್ಯಾಸಿಸ್ಟ್–ಬಲಪಂಥೀಯ ಉದ್ದೇಶಗಳನ್ನು ಸಾಧಿಸಲು 'ಷಾಕ್ ಡಾಕ್ಟ್ರಿನ್' ವ್ಯೂಹವಾಗಿ ಬಂಡವಾಳಶಾಹಿಗಳು ಬಳಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಇದು 'ಕೊರೋನಾ ಕ್ಯಾಪಿಟಲಿಸಂ' ಆಗಿದೆ ಎಂದು ನೋಮಿ ಕ್ಲೀನ್ ಹೇಳುತ್ತಾರೆ.

ಸಂಘಪರಿವಾರದ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದಲೂ, ತನ್ನ ಜನವಿರೋಧೀ ನೀತಿಗಳನ್ನು ನಾಲ್ಕು ವಿಧಾನಗಳಲ್ಲಿ ಅನುಷ್ಠಾನಗೊಳಿಸುತ್ತಿದೆ. ಅವೆಂದರೆ, ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಖಾಸಗೀಕರಣ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಡಿಜಿಟಲೀಕರಣ, ಎಲ್ಲ ಸ್ತರಗಳಲ್ಲಿನ ಅಧಿಕಾರದ ಕೇಂದ್ರೀಕರಣ, ಮತ್ತು ಎಲ್ಲ ಸಾಂವಿಧಾನಿಕ ಸಂಸ್ಥೆಗಳ ಕೇಸರೀಕರಣ. ಕೋವಿಡ್ ರೋಗದ ವಿರುದ್ಧ ಪ್ರಕಟಿಸಲಾಗುತ್ತಿರುವ ಪರಿಹಾರ ಕಾರ್ಯಗಳ ಹಿಂದೆಯೂ ಸಹ ಈ ನಾಲ್ಕೂ ವಿಧಾನಗಳ ಬಳಕೆ ಎದ್ದುಕಾಣುತ್ತದೆ.

ಬಂಡವಾಳವಾದವೆಂಬ ಕೊರೋನಾ ಜಾಡ್ಯ

ಜಾಗತಿಕವಾಗಿ ಹರಡುತ್ತಿರುವ ನವಕೊರೋನಾ ವೈರಸ್ 19, ನಾಲ್ಕು ಪ್ರಧಾನ ನೆಲೆಗಳಲ್ಲಿ ಭಾರತದ ಜನಸಮುದಾಯವನ್ನು ಬಾಧಿಸುತ್ತಿದೆ.

1. ಈಗಾಗಲೇ ವೈರಸ್‌ನಿಂದ ಬಾಧಿತರಾಗಿ ಆಸ್ಪತ್ರೆ ಸೇರಿ ವಿವಿಧ ಹಂತಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು.
2. ತಮಗೆಲ್ಲಿ ಅಂಟುತ್ತದೋ ಎಂದು ಭಯಭೀತರಾಗಿ, ಸುದ್ದಿಮಾಧ್ಯಮಗಳ ವ್ಯಾಪಾರಿಗಳು ಒದಗಿಸುವ, ಊಹಾಪೋಹಗಳು, ಭಯರಂಜನೆ ಮತ್ತು ಸಾಮಾಜಿಕ ಜಾಲತಾಣಗಳ ಜಾಲದಲ್ಲಿ ಹರಡುವ ರೋಚಕ ಸುದ್ದಿಗಳು, ಗುಲ್ಲು ಮತ್ತು ಸಂದೇಶಗಳ ವಿನಿಮಯದಲ್ಲಿ ಮುಳುಗೇಳುತ್ತಾ ಕಾಲಹಾಕುತ್ತಿರುವ ಮಧ್ಯಮವರ್ಗೀಯ ಜನರು.
3. ಕರ್ತವ್ಯನಿರತರಾಗಿ ಆರೋಗ್ಯ ಮತ್ತು ಕಾನೂನು ಪಾಲನೆಗಳಲ್ಲಿ ತೊಡಗಿಸಿಕೊಂಡು ಭಯ–ಸಾಂಕ್ರಾಮಿಕಗಳ ಮಧ್ಯೆಯೇ ಹಗಲಿರುಳೂ ದುಡಿಯುತ್ತಿರುವ ಸಾಮಾನ್ಯ ವೈದ್ಯಕೀಯ ಸಿಬ್ಬಂದಿ, ನೈರ್ಮಲ್ಯ ಸೇವಾ ಸಿಬ್ಬಂದಿ ಮತ್ತು ರಕ್ಷಣಾ ಸಿಬ್ಬಂದಿ.
4. ಜನಹಿತದೃಷ್ಟಿ, ವಿವೇಕ, ದೂರಗಾಮಿ ಪರಿಣಾಮಗಳ ಅರಿವಿನ ಅಭಾವದಿಂದ ನರಳುತ್ತಿರುವ ಅಧಿಕಾರಸ್ಥರು ಅಗತ್ಯವಾದ ಪೂರ್ವಸಿದ್ಧತೆಗಳಿಲ್ಲದೆ ಏಕಾಏಕಿ ಹೇರುತ್ತಿರುವ ಕಠಿಣ ಕ್ರಮಗಳಿಂದಾಗಿ ಬದುಕುವ ದಾರಿಗಳೇ ಬಂದಾಗಿರುವ ಬಡಜನರು. ಕೋವಿಡ್ ಜಾಡ್ಯ ತರಬಹುದಾದ ಅಕಾಲಿಕ ಮರಣ, ಹಸಿವಿನಿಂದ ಬರಬಹುದಾದ ದಾರುಣ ಸಾವು ಇವುಗಳಲ್ಲಿ ಯಾವುದು ಮೊದಲೋ ಎಂದು ಪರಿತಪಿಸುತ್ತಿರುವ ನಿರ್ಗತಿಕರು, ಉದ್ಯೋಗಹೀನರು, ನಿರುದ್ಯೋಗಿಗಳು ಮತ್ತು ಅವರನ್ನು ನಂಬಿದ ಅಸಹಾಯ ಕುಟುಂಬಗಳು.



ಇವರೆಲ್ಲರೂ ಒಂದಲ್ಲ ಒಂದು ರೀತಿಗಳಲ್ಲಿ ಎಲ್ಲರ ದೃಷ್ಟಿಗೂ ಬೀಳುವವರು. ಆದರೆ ಇವರೆಲ್ಲರ ಮಧ್ಯೆ ಇದ್ದೂ, ನವಕೋವಿಡ್ ನಂತೆ ಅಗೋಚರವಾಗಿರುವ, ಭವಿಷ್ಯತ್ತಿನ ಭವ್ಯ ಭಾರತದಲ್ಲಿ ಪಡೆಯಬಹುದಾದ ರಾಜಕೀಯ ಮತ್ತು ಆರ್ಥಿಕ ಲಾಭಗಳ ಬಗ್ಗೆ ಲೆಕ್ಕ ಹಾಕುತ್ತಿರುವ ವಿಶೇಷ ಬಗೆಯ ಜನರಿದ್ದಾರೆ. ಅವರೇ, ಕಾರ್ಪೊರೇಟ್ ಉದ್ಯಮಿಗಳು ಮತ್ತು ಧರ್ಮೋದ್ಯಮದ ಮುಖಂಡರು. ಇವರು ಎಲ್ಲರ ಗಮನಕ್ಕೂ ಸುಲಭವಾಗಿ ಬಾರದವರು. ದುಡಿಯುವ ಜನರಿಂದ ವರ್ಷವೆಲ್ಲಾ ಕೊಳ್ಳೆಹೊಡೆದ ಸಂಪತ್ತಿನ ರಾಶಿಯ ನಗಣ್ಯಭಾಗವನ್ನು ದೇಣಿಗೆಯೆಂದು ಕೂಗಿ ಹೇಳುವ ಪ್ರಕಟಣೆಗಳಿಂದ ಅವರ ಇರವನ್ನು ಗುರುತಿಸಬಹುದೇ ಹೊರತು ಬೇರಾವ ರೀತಿಗಳಲ್ಲೂ ಅವರ ಅಸ್ತಿತ್ವವು ಸಾಮಾನ್ಯ ಜನರ ಗಣನೆಗೆ ಬರುವುದಿಲ್ಲ.



ಸಾಮಾನ್ಯ ಜನರು ಕಷ್ಟ ಬಂದಾಗ ದೇವರನ್ನು ನೆನೆಯುತ್ತಾರೆ. ಕಾರ್ಪೊರೇಟ್ ಉದ್ಯಮಿಗಳು, ಬಂಡವಾಳವನ್ನು ನೆನೆಯುತ್ತಾರೆ. ಅವರಿಗೆ ಬಂಡವಾಳವೇ ದೇವರು. ವ್ಯಾಪಾರವೇ ಪೂಜೆ. ಕಾರ್ಮಿಕರೇ ಬಲಿಪಶುಗಳು. ಲಾಭವೇ ಪ್ರಸಾದ. ಧಾರ್ಮಿಕ ಮುಖಂಡರು ಮತ್ತು ಅಧಿಕಾರಸ್ಥರು ಬಂಡವಾಳದ ಪೂಜಾರಿಗಳು.

ಸಾಮಾನ್ಯ ಜನರ ಕಷ್ಟಗಳು ಕಾರ್ಪೊರೇಟ್ ಬಂಡವಳಿಗರಿಗೆ ಲಾಭಾವಕಾಶಗಳು. ಮಳೆ ಕಮ್ಮಿಯಾದರೆ ರೈತರಿಗೆ ಬೆಳೆ ಒಣಗುವ ಚಿಂತೆ. ಬಂಡವಳಿಗರಿಗೆ ಎಲ್ಲೆಲ್ಲಿ ಎಷ್ಟೆಷ್ಟು, ಹೊಸ ಮಿನರಲ್ ವಾಟರ್ ಪ್ಲಾಂಟ್‌ಗಳನ್ನು ಹಾಕಬಹುದೆಂಬ ಹಂಚಿಕೆ. ಆಡಳಿತಗಾರರ ಜನವಿರೋಧೀ ನೀತಿಗಳಾಗಿರಲಿ ಅಥವಾ ನೈಸರ್ಗಿಕ ಅನಾಹುತಗಳಾಗಿರಲಿ ಬಂಡವಳಿಗರ ಪಾಲಿಗೆ ತಮ್ಮ ಲಾಭದ ಹಾಲು ಕರೆಯಬಲ್ಲ ಕಾಮಧೇನುಗಳು. 'ಬರ ಎಂದರೆ ಎಲ್ಲರಿಗೂ ಇಷ್ಟ' ಎಂದು ಸಾಯಿನಾಥ್ ಹೇಳಿದ್ದು ಇದನ್ನೇ. ಇಂಥ ಪರಿಸ್ಥಿತಿಗಳಲ್ಲೇ, ಕಾರ್ಪೊರೇಟ್ ಉದ್ಯಮಿಗಳು ದೇಶೀಯ ಸರ್ಕಾರಗಳ ಸಹಯೋಗದಲ್ಲಿ ತೀವ್ರತರವಾದ ಜನವಿರೋಧೀ ಆರ್ಥಿಕ–ರಾಜಕೀಯ ಕ್ರಮಗಳನ್ನು ವ್ಯವಸ್ಥೆಯೊಳಕ್ಕೆ ನುಗ್ಗಿಸುವುದು. ಕೆನಡಾ ಮೂಲದ ಅಮೆರಿಕನ್ ಪತ್ರಕರ್ತೆ ನೋಮಿ ಕ್ಲೀನ್, ಇಂಥ ವ್ಯವಸ್ಥೆಯನ್ನು 'ಅನಾಹುತದ ಬಂಡವಾಳವಾದ' (ಡಿಸಾಸ್ಟರ್ ಕ್ಯಾಪಿಟಲಿಸಂ) ಎಂದು ಕರೆದಿದ್ದಾರೆ.

ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ, ಆದರೆ ಬಂಡವಾಳಶಾಹಿಗಳಿಗೆ ಲಾಭಕರವಾದ ನೀತಿಗಳನ್ನು ಜಾರಿಗೆ ತರುವುದು ಜನರಿಂದಲೇ ಚುನಾಯಿತರಾದ ಅಧಿಕಾರಸ್ಥರಿಗೆ ಹೇಗೆ ಸಾಧ್ಯ?

ತಮ್ಮ ವರ್ಗಹಿತಾಸಕ್ತಿಗಳನ್ನು ರಕ್ಷಿಸುವ ತಪ್ಪು ನೀತಿಗಳಿಂದಾಗಿ, ಆರ್ಥಿಕ ಬಿಕ್ಕಟ್ಟುಗಳು ಎದುರಾದಾಗ, ಜನರನ್ನು ಮರುಳುಮಾಡುವ ಅಭಿವೃದ್ಧಿ ಮಂತ್ರಗಳನ್ನು ಬಳಸಿ ಜನಘಾತುಕ ಕ್ರಮಗಳಿಗೆ ಜನರ ಸಮ್ಮತಿಯನ್ನು ಪಡೆಯುವುದು ಮಾಮೂಲಿ ಕ್ರಮ.

ಶತ್ರುವಿನ ಆಕ್ರಮಣದ ಭಯ ಹುಟ್ಟಿಸಿ ಯುದ್ಧರೀತಿಯ ಬಿಕ್ಕಟ್ಟನ್ನು ಸೃಷ್ಟಿಸಿ ದೇಶಪ್ರೇಮದ ಹೆಸರಿನಲ್ಲಿ ವ್ಯಾಪಾರಿಗಳ ಹಿತಾಸಕ್ತಿಗಳನ್ನು ಪೂರೈಸುವಂತೆ ಜನಸಾಮಾನ್ಯರನ್ನು ಸಜ್ಜುಗೊಳಿಸುವುದು ವಿಶೇಷ ಕ್ರಮ.

ಯುದ್ಧ, ಮತ್ತು ಅನಾಹುತಗಳ ಪರಿಸ್ಥಿತಿಗಳನ್ನು ಸೃಷ್ಟಿಸಿ ಅವುಗಳ ತೆಕ್ಕೆಗೆ ಜನರನ್ನು ಏಕಾಏಕಿ ಬೀಳಿಸಿ, ಭಯಗ್ರಸ್ತರನ್ನಾಗಿಸಿ, ಅಂಥ ದಿಗ್ಮೂಢ ಸ್ಥಿತಿಯಲ್ಲಿ, ಸಾಧಾರಣ ಪರಿಸ್ಥಿತಿಗಳಲ್ಲಿ ಜಾರಿಗೊಳಿಸಲಾಗದಂಥ ಜನವಿರೋಧೀ ನೀತಿಗಳನ್ನು, ಅಭಿವೃದ್ಧಿಯ ಹೆಸರಿನಲ್ಲಿ ಜಾರಿಗೊಳಿಸುವುದು ಬಂಡವಾಳಶಾಹಿ ಸರ್ಕಾರಗಳು ಬಳಸುವ ಮತ್ತೊಂದು ತಂತ್ರ. ಇದನ್ನೇ ನೋಮೀ ಕ್ಲೀನ್ 'ಷಾಕ್ ಡಾಕ್ಟ್ರಿನ್' ಎಂದು ಕರೆದಿದ್ದಾರೆ.


ಕಾಂಬೋಡಿಯಾ, ಚಿಲಿ, ಪೋಲೆಂಡ್, ಇರಾಕ್,

ಪುಟ 10 ಕ್ಕೆ





ಇಟಲಿಯ ನೆರವಿಗೆ ಧಾವಿಸಿದ ಕ್ಯೂಬಾದ ಡಾಕ್ಟರುಗಳು



ಕೊರೊನ ಮತ್ತು ಬಡತನದ ನಡುವೆ ಜನತೆ – ವ್ಯಂಗ್ಯಚಿತ್ರ: ಮಂಜುಲ್

ಬರೀ ಫ್ಲೂ ಎಂದು ಆರಂಭಿಸಿ 2ಲಕ್ಷ ಸಾವುಗಳಾಗಬಹುದು ಎಂದು ಹೇಳುವವರೆಗೆ –ದಿನಕ್ಕೋಮದರಂತೆ ಟ್ರಂಪ್‌ಹೇಳಿಕೆಗಳು

ಬಂಡವಾಳಶಾಹಿ, ಸಮಾಜವಾದ ಮತ್ತು ಮಹಾಮಾರಿ

ಪ್ರಕಾಶ ಕಾರಟ್



ಕೊವಿಡೊ ಮಹಾಮಾರಿ ಜನಗಳ ಆರೋಗ್ಯ ಮತ್ತು ಕಲ್ಯಾಣದ ಮೇಲೆ ಬಂಡವಾಳಶಾಹಿ ವ್ಯವಸ್ಥೆಯ ಹಾನಿಕಾರಕ ಪರಿಣಾಮಗಳನ್ನು ಸ್ಫೂಟವಾಗಿ ಪ್ರಕಟಗೊಳಿಸಿದೆ. ಪರ್ಯಾಯವಾಗಿ, ಸಮಾಜವಾದೀ ನಿಲುವು ಬಲ ಪಡೆದಿದೆ. ಅತ್ಯಂತ ಬಲಿಷ್ಟ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದೇಶ ಅಮೇರಿಕದ ಆರೋಗ್ಯ ವ್ಯವಸ್ಥೆ ವ್ಯವಸ್ಥೆ ಒಂದು ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲಾರದ ದರಿದ್ರ ವ್ಯವಸ್ಥೆ ಎಂದು ತೋರಿಸಿಕೊಂಡಿದೆ. ತದ್ವಿರುದ್ಧವಾಗಿ, ಪುಟ್ಟ ಕ್ಯೂಬ ಕೊವಿಡ್–19 ಮಹಾಮಾರಿಯ ಸಂದರ್ಭದಲ್ಲಿ, ಇಟಲಿ, ವೆನಝುವೆಲ ಮತ್ತು ನಾಲ್ಕು ಕೆರಿಬಿಯನ್ ದೇಶಗಳಿಗೆ ತನ್ನ ಡಾಕ್ಟರುಗಳನ್ನು ಮತ್ತು ಅರೆ–ವೈದ್ಯಕೀಯ ಸಿಬ್ಬಂದಿಯನ್ನು ಕಳಿಸಿದೆ. ಕೊವಿಡ್–19 ವೈರಸ್‌ನಿಂದ ಮೊದಲು ಪೀಡಿತವಾದ ಚೀನಾಕ್ಕೆ ಅದನ್ನು ತಡೆಯಲು ವೈದ್ಯಕೀಯ ವಲಯದಲ್ಲಿನ ತನ್ನೆಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಸಾಧ್ಯವಾಯಿತು.

ಬಂಡವಾಳಶಾಹಿ ಮತ್ತು ಸಮಾಜವಾದೀ – ಈ ಎರಡು ಸಾಮಾಜಿಕ ವ್ಯವಸ್ಥೆಗಳ ನಡುವೆ ವ್ಯತ್ಯಾಸವನ್ನು, ಮತ್ತೊಮ್ಮೆ, 21ನೇ ಶತಮಾನದಲ್ಲಿ ತೋರಿಸಿಕೊಡಲು ಒಂದು ಪುಟ್ಟ, ಆದರೆ ಮಾರಣಾಂತಿಕ ವೈರಸ್ ಬರಬೇಕಾಯಿತು. ಜಾಗತಿಕ ಕೊರೊನ ವೈರಸ್ ಮಹಾಮಾರಿಯನ್ನು ಕೆಲವು ದೇಶಗಳು ನಿಭಾಯಿಸುತ್ತಿರುವ ರೀತಿ ಈ ವ್ಯತ್ಯಾಸವನ್ನು ಇನ್ನಷ್ಟು ಎತ್ತಿ ತೊರಿಸುತ್ತಿದೆ.

ಒಂದು ತುದಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಇದೆ. ಇದು ಜಗತ್ತಿನ ಅತ್ಯಂತ ಬಲಿಷ್ಟ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದೇಶ. ಅದು ಒಂದು ಅತ್ಯಂತ ಖಾಸಗೀಕೃತ ಆರೋಗ್ಯಪಾಲನೆ ವ್ಯವಸ್ಥೆಯನ್ನು ಹೊಂದಿರುವ ದೇಶವೂ ಆಗಿದೆ. ಇದು ಕಾರ್ಪೊರೇಟ್‌ಗಳು ನಡೆಸುವ, ಲಾಭದ ಧಾವಂತದಲ್ಲಿರುವ ಆರೋಗ್ಯ ವಲಯ. ಇಂತಹ ಒಂದು ವ್ಯವಸ್ಥೆ ಒಂದು ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲಾರದ ದರಿದ್ರ ವ್ಯವಸ್ಥೆ ಎಂದು ತೋರಿಸಿಕೊಂಡಿದೆ. ಈ ವ್ಯವಸ್ಥೆ ಹೊಂದಿರುವ ಆಸ್ಪತ್ರೆ ಹಾಸಿಗೆಗಳು, ತೀವ್ರ ನಿಗಾ ಘಟಕಗಳು, ಕೃತಕ ಉಸಿರಾಟಕ್ಕೆ ಬೇಕಾಗುವ ವೆಂಟಿಲೇಟರುಗಳು ಮತ್ತು ಆರೋಗ್ಯ ಕಾರ್ಯಕರ್ತರ ವೈಯಕ್ತಿಕ ಸುರಕ್ಷಾ ಪರಿಕರಗಳು ಅತಿ ಕನಿಷ್ಟ. ಸಾಮಾನ್ಯ ಪರಿಸ್ಥಿತಿಗಳಲ್ಲೂ ಇಲ್ಲಿ ಆರೋಗ್ಯಪಾಲನೆ ಅತ್ಯಂತ ದುಬಾರಿ, ಮತ್ತು ಖಾಸಗಿ ಆರೋಗ್ಯ ವಿಮಾವ್ಯವಸ್ಥೆ ಕೋಟ್ಯಂತರ ಜನಗಳ ಎಟುಕಿಗೆ ನಿಲುಕದಂತದ್ದು. ಇದು ಅಮೆರಿಕ ಎಷ್ಟೊಂದು ಅಸಮಾನತೆಯ ಸಮಾಜ ಎಂಬುದನ್ನು ಬಿಂಬಿಸುತ್ತದಷ್ಟೇ. ಇಲ್ಲಿ ಕೊರೊನ ಬಿಕ್ಕಟ್ಟಿನ ಸಮಯದಲ್ಲೂ ಕೂಡ ಶ್ರೀಮಂತರು ವೈದ್ಯಕೀಯ ಸಲಹಾ ಏಜೆನ್ಸಿಗಳಿಗೆ ಭಾರೀ ಹಣ ತೆತ್ತು ಉತ್ತಮ ಶುಶ್ರೂಷೆಯನ್ನು ಮತ್ತು ತ್ವರಿತ ಸೌಲಭ್ಯಗಳನ್ನು ಪಡೆಯಬಲ್ಲರು.

ಇದಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ಸನ್ನಿವೇಶವನ್ನು ಪುಟ್ಟ ಕ್ಯೂಬಾದಲ್ಲಿ ಕಾಣಬಹುದು. ಅದು ಒಂದು ಸಮಾಜವಾದಿ ಸಮಾಜವನ್ನು ಅಭಿವೃದ್ಧಿ ಪಡಿಸುವ ತನ್ನ ಪ್ರಯತ್ನದಲ್ಲಿ ಎಂತವರೂ ಅಸೂಯೆ ಪಡಬಹುದಾದ ಒಂದು ಸಾಮಾಜೀಕೃತ ಆರೋಗ್ಯ ವ್ಯವಸ್ಥೆಯನ್ನು ಕಟ್ಟಿ ಬೆಳೆಸಿದೆ. ಅಮೆರಿಕಾದ ನಿರ್ಬಂಧಗಳು ಮತ್ತು ಆರ್ಥಿಕ ನಿಷೇಧಗಳ ಎದುರು ಕ್ಯೂಬಾ ತನ್ನದೇ ಸಂಪನ್ಮೂಲಗಳನ್ನು ಅವಲಂಬಿಸಿಕೊಂಡು ಜನಗಳ ಸೇವೆಯಲ್ಲಿ ತೊಡಗಿರುವ ಒಂದು ಮಾದರಿ ಆರೋಗ್ಯಪಾಲನೆ ವ್ಯವಸ್ಥೆಯನ್ನು ಕಟ್ಟಲು ಪ್ರಯತ್ನಗಳನ್ನು ನಡೆಸಿತು. ಕ್ಯೂಬಾದಲ್ಲಿ ವೈದ್ಯಕೀಯ ಶುಶ್ರೂಷೆ ಉಚಿತವಾಗಿದೆ. ದಾಖಲಾತಿಗೆಂದು ಒಂದು ನಾಮಮಾತ್ರದ ಶುಲ್ಕವನ್ನು ಕಟ್ಟಬೇಕಷ್ಟೇ. ಕ್ಯೂಬಾ ಜೈವಿಕ ತಂತ್ರಜ್ಞಾನವನ್ನು ಆಧರಿಸಿ ಒಂದು ಮುಂದುವರೆದ ಔಷಧಿ ಉದ್ದಿಮೆಯನ್ನು ಕೂಡ ಅಭಿವೃದ್ಧಿ ಪಡಿಸಿದೆ. ಅದು ಲ್ಯಾಟಿನ್ ಅಮೆರಿಕ, ಕೆರಿಬಿಯನ್ ಮತ್ತು ಆಫ್ರಿಕಾದ ವಿವಿಧ ದೇಶಗಳ ಬಡ ಜನವಿಭಾಗಗಳ ಸೇವೆಯಲ್ಲಿ ತನ್ನ ವೈದ್ಯಕೀಯ ಮಿಶನ್‌ಗಳನ್ನು, ಡಾಕ್ಟರುಗಳನ್ನು ಕಳಿಸುತ್ತಿದೆ.

ಕೊವಿಡ್–19 ಮಹಾಮಾರಿಯ ಸಂದರ್ಭದಲ್ಲಿ, ಕ್ಯೂಬಾ ಇಟಲಿ, ವೆನಝುವೆಲ ಮತ್ತು ನಾಲ್ಕು ಕೆರಿಬಿಯನ್ ದೇಶಗಳಿಗೆ ತನ್ನ ಡಾಕ್ಟರುಗಳನ್ನು ಮತ್ತು ಅರೆ–ವೈದ್ಯಕೀಯ ಸಿಬ್ಬಂದಿಯನ್ನು ಕಳಿಸಿದೆ. ಇಂತಹ ಒಂದು ವೈದ್ಯಕೀಯ ವ್ಯವಸ್ಥೆ ಮತ್ತು ಉತ್ತಮ ಆರೋಗ್ಯ ಸೂಚ್ಯಂಕಗಳು ಸಾಧ್ಯವಾಗಿರುವುದು, ಶುಲ್ಕರಹಿತ ಸಾರ್ವಜನಿಕ ಶಿಕ್ಷಣ, ಆಹಾರ ಮತ್ತು ವಸತಿಯ ಸಾರ್ವಜನಿಕ ಲಭ್ಯತೆಯನ್ನು ಮತ್ತು ಮಹಿಳೆಯರ ಸ್ಥಾನಮಾನದಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿರುವ ಒಂದು ಸಮಾಜವಾದಿ ವ್ಯವಸ್ಥೆ ಅಲ್ಲಿ ಇರುವುದರಿಂದಾಗಿಯೇ.

ಇತರ ಮುಂದುವರೆದ ಬಂಡವಾಳಶಾಹೀ ದೇಶಗಳಲ್ಲಿ, ಅಮೆರಿಕದಲ್ಲಿರುವಂತಹ ವ್ಯವಸ್ಥೆಯಿರಲಿಲ್ಲ. ಅದಕ್ಕೆ ಹೋಲಿಸಿದರೆ ಉತ್ತಮವೆನ್ನಬಹುದಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳು ಇದ್ದವು. ಇವನ್ನು ನವ–ಉದಾರವಾದಿ ಧೋರಣೆಗಳು ಮತ್ತು ವರ್ಷಾನುಗಟ್ಟಲೆ ಅನುಸರಿಸಿದ 'ಮಿತವ್ಯಯ' ದುರ್ಬಲಗೊಳಿಸಿವೆ, ಸಾರ್ವತ್ರಿಕ ಆರೋಗ್ಯ ಸೌಲಭ್ಯಗಳನ್ನು ಕೊರೆದು ಹಾಕಿವೆ. ಬ್ರಿಟನನ್ನಿನ 'ನ್ಯಾಶನಲ್ ಹೆಲ್ತ್ ಸರ್ವಿಸಸ್'(ಎನ್.ಹೆಚ್.ಎಸ್.– ರಾಷ್ಟ್ರೀಯ ಆರೋಗ್ಯ ಸೇವೆಗಳು) ಅಗತ್ಯ ಹಣ ನೀಡದೇ ಇದ್ದುದರಿಂದ ಮತ್ತು ಆರೋಗ್ಯ ವಲಯದ ಖಾಸಗೀಕರಣದಿಂದ ತೊಂದರೆಗೊಳಗಾಗಿದೆ; ಇಟಲಿಯ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೂ ಬಾಧೆಯುಂಟಾಗಿದೆ. ಪ್ರಸಕ್ತ ಬಿಕ್ಕಟ್ಟಿನಲ್ಲಿ , ಈ ದೇಶಗಳಲ್ಲಿ ಜನಗಳಿಗೆ ಸಾರ್ವಜನಿಕ ಆರೋಗ್ಯ ಪಾಲನೆಯನ್ನು ಶಿಥಿಲಗೊಳಿಸಿದ ಪ್ರಮಾದ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಅರಿವಿಗೆ ಬಂದಿದೆ. ಸ್ಪೇನ್‌ನಲ್ಲಂತೂ ಖಾಸಗಿ ಆಸ್ಪತ್ರೆಗಳನ್ನು ರಾಷ್ಟ್ರೀಕರಿಸಲಾಗಿದೆ.

ಕೊವಿಡ್–19 ವೈರಸ್‌ನಿಂದ ಮೊದಲು ಪೀಡಿತವಾದ ಚೀನಾ ಅದು ವುಹಾನ್ ಮತ್ತು ಹುಬೈ ಪ್ರಾಂತದಿಂದ ಬೇರೆಡೆಗೆ ಹರಡದಂತೆ ತಡೆಯಲು ಅಪಾರ ಪ್ರಯತ್ನ ನಡೆಸಿತು, ವೈದ್ಯಕೀಯ ವಲಯದಲ್ಲಿನ ತನ್ನೆಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಿತು. ಡಬ್ಲ್ಯುಹೆಚ್‌ಒ–ಚೀನಾ ಜಂಟಿ ಮಿಶನ್ ನ್ ವರದಿ ಇದು 'ಚರಿತ್ರೆಯಲ್ಲೇ ಅತ್ಯಂತ ಮಹತ್ವಾಕಾಂಕ್ಷೆಯ, ಕುಶಾಗ್ರ ಮತ್ತು ಕೆಚ್ಚಿನ ರೋಗ ನಿರೋಧಕ ಪ್ರಯತ್ನ' ಎಂದಿದೆ. ಚೀನಾಕ್ಕೆ ಇದನ್ನು ಮಾಡಲು ಸಾಧ್ಯವಾಗಿರುವುದು ಅದು ಒಂದು ಗಟ್ಟಿಮುಟ್ಟಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹೊಂದಿರುವುದರಿಂದಾಗಿ.

2009ರಲ್ಲಿ ಚೀನೀ ಸರಕಾರ "ಆರೋಗ್ಯ ವ್ಯವಸ್ಥೆ ಸುಧಾರಣೆಯನ್ನು ಆಳಗೊಳಿಸುವ ಕುರಿತು ಅಭಿಪ್ರಾಯ" ಎಂಬ ಒಂದು ಅಧಿಕೃತ ದಸ್ತಾವೇಜನ್ನು ಪ್ರಕಟಿಸಿತು. ಇದು 2020ರೊಳಗೆ ಎಲ್ಲ ಜನಗಳನ್ನು ಒಳಗೊಳ್ಳುವ ಒಂದು ಸುಲಭ–ಲಭ್ಯ, ಸಮತ್ವಪೂರ್ಣ, ಕೈಗೆಟಕುವ ಮತ್ತು ದಕ್ಷ ಆರೋಗ್ಯ ವ್ಯವಸ್ಥೆಯನ್ನು ಸ್ಥಾಪಿಸುವ ಒಂದು ರಾಜಕೀಯ ಬದ್ಧತೆಯ ದಸ್ತಾವೇಜು ಆಗಿತ್ತು. ಈ ದಿಕ್ಕಿನಲ್ಲಿ ಆಗಿರುವ ಪ್ರಗತಿ ಕಣ್ಣಿಗೆ ಕಾಣಿಸುತ್ತಿದೆ. ಒಟ್ಟು ಆರೋಗ್ಯ ವೆಚ್ಚ ಜಿಡಿಪಿಯ 5ಶೇ.ದಿಂದ 2017ರಲ್ಲಿ 6.4ಕ್ಕೇರಿತು. ಸ್ವಂತವಾಗಿ ಮಾಡಬೇಕಾದ ಖರ್ಚಿನ ಪ್ರಮಾಣ 27ಶೇ.ಕ್ಕೆ ಇಳಿಯಿತು. 2017ರಲ್ಲಿ ಒಳರೋಗಿ ಚಿಕಿತ್ಸೆಗಳಲ್ಲಿ 82ಶೇ. ದಷ್ಟನ್ನು ಸಾರ್ವಜನಿಕ ಆಸ್ಪತ್ರೆಗಳೇ ಒದಗಿಸಿದವು. ಚೀನಾದಲ್ಲಿ ಒಂದು ಬೃಹತ್ ಗಾತ್ರದ ಔಷಧಿ ಉದ್ದಿಮೆ ಇದೆ. ಅದು ಜಗತ್ತಿನಾದ್ಯಂತ ಔಷಧಿ ಕಂಪನಿಗಳಿಗೂ ರಾಸಾಯನಿಕ ರಿಯೇಜಂಟ್‌ಗಳನ್ನು ಒದಗಿಸುತ್ತಿದೆ. ಇವೆಲ್ಲವೂ ಯೋಜನಾಬದ್ಧವಾಗಿ ಮತ್ತು ಲಾಭದ ಗುರಿಯಿಂದ ಮುಕ್ತವಾದ ಒಂದು ಸಾಮಾಜಿಕ ವಲಯವನ್ನು ಬೆಳೆಸಿದ್ದರಿಂದಾಗಿ ಸಾಧ್ಯವಾಯಿತು.

ಇದಕ್ಕೆ ಹೋಲಿಸಿದರೆ ಭಾರತದಲ್ಲಿನ ಪರಿಸ್ಥಿತಿ ಕೆಟ್ಟದಾಗಿದೆ. ಇದೀಗ ಭಾರತ ಜಗತ್ತಿನಲ್ಲೆ ಅತಿ ಹೆಚ್ಚು ಖಾಸಗೀಕೃತ ಆರೋಗ್ಯ ವ್ಯವಸ್ಥೆ ಹೊಂದಿರುವ ದೇಶಗಳಲ್ಲಿ ಒಂದಾಗಿದೆ. ಮೋದಿ ಸರಕಾರ ಅಂಗೀಕರಿಸಿರುವ ರಾಷ್ಟ್ರೀಯ ಆರೋಗ್ಯ ಧೋರಣೆ ಖಾಸಗೀಕರಣಕ್ಕೇ ಉತ್ತೇಜನೆ ನೀಡುತ್ತದೆ. ಆರೋಗ್ಯದ ಮೇಲೆ ಸಾರ್ವಜನಿಕ ವೆಚ್ಚದ ಪ್ರಮಾಣ ಜಿಡಿಪಿಯ 1ಶೇ.ಕ್ಕಿಂತಲೂ ಕಡಿಮೆ. ಆರೋಗ್ಯಕ್ಕೆ ಒಂದು ಕುಟುಂಬ ಮಾಡುವ ವೆಚ್ಚದಲ್ಲಿ 70 ಶೇ.ದಷ್ಟು ಸ್ವಂತ ಜೇಬಿನಿಂದಲೇ ಬರಬೇಕು. ಸಾರ್ವಜನಿಕ ಆಸ್ಪತ್ರೆಗಳಲ್ಲಿ ಒಳರೋಗಿ ಶುಶ್ರೂಷೆಯ ಪ್ರಮಾಣ ಕೇವಲ 44ಶೇ. ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸುವುದು ಒತ್ತಟ್ಟಿಗಿರಲಿ, ಜನಗಳ ಸಾಮಾನ್ಯ ಆರೋಗ್ಯದ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯ ಕೂಡ ಇಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಇಲ್ಲ.

ನಿಜ, ಈ ರಾಷ್ಟ್ರೀಯ ಚಿತ್ರಕ್ಕೆ ಕೇರಳ ಒಂದು ಅಪವಾದ. ಈಗಾಗಲೇ ಅದು ಕೊರೊನ ವೈರಸ್ ಸಾಂಕ್ರಾಮಿಕವನ್ನು ಎದುರಿಸಿರುವ ತ್ವರಿತ ಮತ್ತು ದಕ್ಷ ರೀತಿ ಮೆಚ್ಚುಗೆ ಗಳಿಸಿದೆ. ಇದಕ್ಕೆ ಕಾರಣ ದಶಕಗಳಿಂದ ಕಟ್ಟಿ ಬೆಳೆಸಿದ ಒಂದು ಸಾರ್ವಜನಿಕ ಆರೋಗ್ಯ ಪಾಲನೆ ವ್ಯವಸ್ಥೆ. ಇದು ಪ್ರಸಕ್ತ ಎಲ್‌ಡಿಎಫ್ ಸರಕಾರದ ಅಡಿಯಲ್ಲಿ ಮೇಲ್ದರ್ಜೆಗೇರಿದೆ, ಸುಧಾರಣೆಗೊಂಡಿದೆ. ಈ ಸರಕಾರ 2017ರಲ್ಲಿ 'ಆರ್ದ್ರಂ' ಎಂಬ ಒಂದು ಆರೋಗ್ಯ ಮಿಶನ್ ಆರಂಭಿಸಿತು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಮತ್ತು ಸೌಲಭ್ಯಗಳನ್ನು ಹೆಚ್ಚಿಸಿ ಅವನ್ನು ಕುಟುಂಬ ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸಲಾಯಿತು. ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಮತ್ತು ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಹೆಚ್ಚಿಸಲಾಗಿದೆ. ಕೇರಳದಲ್ಲಿನ ಉತ್ತಮ ಆರೋಗ್ಯ ಸೂಚ್ಯಂಕಗಳು ಆಹಾರ ಭದ್ರತೆ, ಶಿಕ್ಷಣ, ವಸತಿ, ಶುಚಿತ್ವ ಮತ್ತು ಲಿಂಗ ಸಂಬಂಧಗಳು ಮುಂತಾದ ಸಾಮಾಜಿಕ ನಿರ್ಧಾರಕಗಳ ಫಲಿತಾಂಶ ಕೂಡ ಆಗಿದೆ. ಈ 'ಕೇರಳ ಮಾದರಿ'ಯು ಧೋರಣೆ ರೂಪೀಕರಿಸುವಲ್ಲಿ ಮತ್ತು ಸಾರ್ವಜನಿಕ ಕ್ರಿಯೆಯಲ್ಲಿ ಸಮಾಜವಾದೀ ಮಾದರಿಯ ಗುರಿಗಳಿಂದ ಪ್ರೇರಿತವಾದ ಎಡಶಕ್ತಿಗಳ ಪಾತ್ರದಿಂದ ಪ್ರಭಾವಿತಗೊಂಡಿರುವಂತದ್ದು.

ಕೊವಿಡೊ ಮಹಾಮಾರಿ ಜನಗಳ ಆರೋಗ್ಯ ಮತ್ತು ಕಲ್ಯಾಣದ ಮೇಲೆ ಬಂಡವಾಳಶಾಹಿ ವ್ಯವಸ್ಥೆಯ ಹಾನಿಕಾರಕ ಪರಿಣಾಮಗಳನ್ನು ಸ್ಫೂಟವಾಗಿ ಪ್ರಕಟಗೊಳಿಸಿದೆ. ಪರ್ಯಾಯವಾಗಿ, ಸಮಾಜವಾದೀ ನಿಲುವು ಬಲ ಪಡೆದಿದೆ. ಕೊವಿಡೊ ನಂತರದ ಘಟ್ಟದಲ್ಲಿ ಸಾಮಾಜಿಕ ಪರಿವರ್ತನೆಯ ಹೋರಾಟದಲ್ಲಿ ನಮ್ಮ ಬತ್ತಳಿಕೆಗೆ ಬಂದಿರುವ ಈ ಅನುಭವವನ್ನು ಬಳಸಿಕೊಳ್ಳಬೇಕಾಗಿದೆ.




ಕೊವಿಡ್ ವಿರುದ್ಧ ಸಮರ ಗೆದ್ದ ಚೀನಾ ವೈದ್ಯಕೀಯ ತಂಡ

ಕೊವಿಡ್ ಜತೆ ಸಮರ–ವಿಯೆಟ್ನಾಂ ಪೋಸ್ಟರ್



ಕೋವಿಡ್ 19: ಭಾರತೀಯ ಕೃಷಿ ಆರ್ಥಿಕತೆಯ ಮೇಲಿನ ಪರಿಣಾಮಗಳು

ಕೃಷಿ ಸರಕುಗಳ ಲಭ್ಯತೆ ಕಡಿಮೆ ಆಗದೇ ಹೋದರೂ ಪೂರೈಕೆ ಯಲ್ಲಿ ಇರುವ ಹಲವು ಅಡಚಣೆಗಳಿಂದಾಗಿ ಬೆಲೆಗಳು ಏರುವ ಸಾಧ್ಯತೆಗಳು ಇವೆ. ಲಾಕ್ ಡೌನ್ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಮುಂದುವರೆದರೆ ಪೂರೈಕೆಯಲ್ಲಿ ತೀವ್ರ ವ್ಯತ್ಯಯಗಳಾಗುವ ಸಂಭವವಿದೆ. ಪೂರೈಕೆ ಮತ್ತು ಬೇಡಿಕೆ ಎರಡೂ ಒಟ್ಟಿಗೆ ಕಡಿಮೆಯಾದಾಗ ಬೆಲೆಗಳ ಮೇಲೆ ಪರಿಣಾಮ ಬಹಳ ಅನಿಶ್ಚಿತವಾಗಿರುತ್ತವೆ. ಲಾಕ್ ಡೌನ್ ನ ಅವಧಿಯಲ್ಲಿ ಬೆಲೆಗಳು ಕಡಿಮೆ ಆಗಿ ನಂತರ ಅತಿಯಾಗಿ ಏರಬಹುದು. ಆದರೆ ರೈತರಿಗೆ ಬೆಲೆ ಸಿಗುವ ಸಾಧ್ಯತೆ ಬಹಳ ಕಡಿಮೆ. ಯಾಕೆಂದರೆ ಈ ಬೆಲೆ ಏರಿಕೆಯಿಂದಾಗಿ ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಲಾಭವಾಗುವ ಸಾಧ್ಯತೆಗಳೇ ಹೆಚ್ಚು. ಪೂರೈಕೆಯ ಸರಪಣಿ ಮತ್ತು ಕೃಷಿ ಉತ್ಪಾದನೆಯ ಕಾರ್ಯಾಚರಣೆಗಳಲ್ಲಿ ಹಲವು ಸಮಸ್ಯೆಗಳು ಉದ್ಭವವಾಗಬಹುದು. ಕೊವಿಡ್–19 ಹಿನ್ನೆಲೆಯಲ್ಲಿ ಕೃಷಿ ಸಮಸ್ಯೆಗಳಿಗೆ ಪರಿಹಾರವಾಗಿ ಸರಕಾರ ಮೂರು ಕ್ರಮಗಳನ್ನು ಘೋಷಿಸಿದೆ. ನೈಜ ಅಗತ್ಯತೆಗಳನ್ನು ಪರಿಗಣಿಸಿದರೆ ಈ ಕ್ರಮಗಳು ಏನೇನೂ ಸಾಲವು. ಹಲವು ತಕ್ಷಣದ ಕ್ರಮಗಳ ಅಗತ್ಯವಿದೆ.


ಲಾಕ್ ಡೌನ್ ನಿಂದಾಗಿ ತರಕಾರಿ ಮಾರಾಟವಾಗದೆ ಹಾಳಾಗುತ್ತಿರುವುದು

ಜಿ.ಎಸ್.ಮಣಿ

(ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್ ನ ನಬಾರ್ಡ್ ದತ್ತಿ ಪೀಠದ ಪ್ರಾಧ್ಯಾಪಕರಾದ ಆರ್ ರಾಮಕುಮಾರ ಅವರ ಫೌಂಡೇಶನ್ ಆಫ್ ಅಗ್ರೇರಿಯನ್ ಸ್ಟಡೀಸ್ ವೆಬ್ ಸೈಟಿನ ಬ್ಲಾಗ್ ನಲ್ಲಿ ಬರೆದ ಟಿಪ್ಪಣಿ ಮೇಲೆ ಆಧಾರಿತ) https://fas.org.in/blog/covid19-and-indian-agriculture/ (ಮೂಲ ಲೇಖನ ಇಲ್ಲಿ ಲಭ್ಯವಿದೆ)

ಕೋವಿಡ್ 19 ಮಹಾಮಾರಿಯ ಪರಿಣಾಮಗಳು ಜಾಗತಿಕ ಮತ್ತು ಭಾರತದ ಆರ್ಥಿಕತೆಯ ಮೇಲೆ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಆಹಾರ ಧಾನ್ಯಗಳ ಜಾಗತಿಕ ಸಾಗಾಣಿಕೆ ಸೇರಿದಂತೆ ಜಗತ್ತಿನ ಹಲವು ಭಾಗಗಳು ಲಾಕ್ ಡೌನಿನಲ್ಲಿದ್ದು, ಆಹಾರ ಭದ್ರತೆಗೆ ತೀವ್ರ ಸವಾಲುಗಳು ಎದುರಾಗಲಿವೆ. ಆಹಾರ ಉತ್ಪಾದನೆ ಮತ್ತು ದಾಸ್ತಾನು ಸ್ಥಿತಿ ತೃಪ್ತಿಕರವಾಗಿದ್ದರೂ, ಕೃಷಿ ಕಾರ್ಮಿಕರ ಅಲಭ್ಯತೆ, ಕೃಷಿ ಲಾಗುವಾಡುಗಳ ಸಾಗಾಣಿಕೆ ಮತ್ತು ಆಹಾರ ವಸ್ತುಗಳ ಮೇಲೆ ರಫ್ತು ನಿಷೇಧ ಇತ್ಯಾದಿಗಳಿಂದ ಈ ವರ್ಷದ ಕೃಷಿ ಉತ್ಪಾದನೆಯಲ್ಲಿ ತೀವ್ರ ವ್ಯತ್ಯಯಗಳಾಗುವ ಸಾಧ್ಯತೆಯಿದೆ. ಈಗಾಗಲೇ ಹಸಿವು, ಪೋಷಕಾಂಶಗಳ ಕೊರತೆಯಿಂದ ಜಗತ್ತಿನ ದೊಡ್ಡ ಜನವಿಭಾಗ ನರಳುತ್ತಿದ್ದು, ಸರಕಾರಗಳು ತಕ್ಷಣ ರಕ್ಷಣಾ ಕ್ರಮಗಳನ್ನು ಕೈಗೊಳ್ಳದಿದ್ದರೆ ತೀವ್ರ "ಆಹಾರ ಬಿಕ್ಕಟ್ಟು" ಎದುರಾಗುವ ಸಾಧ್ಯತೆಯಿದೆ ಎಂದು ವಿಶ್ವ ಕೃಷಿ ಮತ್ತು ಆಹಾರ ಸಂಸ್ಥೆ ಎಚ್ಚರಿಕೆ ನೀಡಿದೆ. ಅದೇ ಸಮಯದಲ್ಲಿ ರೈತರು ಕೃಷಿಯಲ್ಲಿ ತೊಡಗಲು ಸಾಧ್ಯವಾಗದೆ ಕಂಗಾಲಾಗಿದ್ದಾರೆ.

ಭಾರತ ಪೂರ್ತಿ ಲಾಕ್ಡೌನ್ ಗೆ ಪರಿವರ್ತಿತವಾಗಿರುವಾಗ ಕೋವಿಡ್ 19 ರ ಪರಿಣಾಮಗಳು ಹೆಚ್ಚೆಚ್ಚು ಅಗಾಧವಾಗುತ್ತಿದೆ. ಆಗಲೇ ಇಳಿತವನ್ನು ಕಾಣುತ್ತಿದ್ದ ಭಾರತದ ಆರ್ಥಿಕತೆ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಅಸಾಮಾನ್ಯ ಕಡಿತದ ಬೆಳವಣಿಗೆಯನ್ನು ಕಾಣಲಿದೆ. ಲಾಕ್ ಡೌನ್ ಒಂದು ತಿಂಗಳಿಗಿಂತಲೂ ಹೆಚ್ಚು ಮುಂದುವರಿದರೆ ಈ ಪರಿಣಾಮಗಳು ಇನ್ನೂ ತೀವ್ರವಾಗಲಿವೆ. ಅತಿದೊಡ್ಡ ಜನವಿಭಾಗ ಕೃಷಿಯ ಮೇಲೆ ಅವಲಂಬಿತವಾಗಿರುವ ನಮ್ಮ ದೇಶದಲ್ಲಿ ಕೃಷಿಯ ಮೇಲಿನ ಪರಿಣಾಮಗಳು ದೊಡ್ಡ ಜನಸಂಖ್ಯೆಯ ಜನರ ಮೇಲೆ ಆಗುತ್ತದೆ.

ಬೆಲೆಗಳು ಇಳಿದು ಮತ್ತೆ ಏರಲಿವೆ

ಮೊದಲು ಬೆಲೆಗಳ ಪ್ರಶ್ನೆ ತೆಗೆದುಕೊಳ್ಳೋಣ. ಕೋವಿಡ್ 19 ಮಾರಿ ಬರುವ ಮೊದಲೇ ಆಹಾರದ ಬೆಲೆಗಳು ಏರುತ್ತಲೇ ಇದ್ದವು. ಅಂಕಿ ಸಂಖ್ಯೆಗಳ ಪ್ರಕಾರ ಆಹಾರ ಸಂಬಂಧಿ ಹಣದುಬ್ಬರ ಏರುತ್ತಲೇ ಇತ್ತು. 2020 ರ ಜನವರಿಯ ವೇಳೆಗೆ ಅದು 2013–14 ರಲ್ಲಿ ಇದ್ದ ಮಟ್ಟದಲ್ಲಿ ಇದ್ದವು. ಸಗಟು ಬೆಲೆ ಸೂಚ್ಯಂಕಗಳಲ್ಲಿ ಆಹಾರದ ಬೆಲೆಗಳು ಆಗಸ್ಟ್ 2019 ರಿಂದಲೇ ಏರತೊಡಗಿದ್ದವು. ತರಕಾರಿ, ಅದರಲ್ಲೂ ಈರುಳ್ಳಿ ಮತ್ತು ಆಲೂಗಡ್ಡೆ ಮತ್ತು ಟೊಮೆಟೊಗಳ ಬೆಲೆ ಏರಿಕೆ ಒಟ್ಟಾರೆ ಆಹಾರ ಬೆಲೆಗಳ ಏರಿಕೆಯನ್ನು ನಿರ್ದೇಶಿಸುತ್ತಿದ್ದವು. ಈರುಳ್ಳಿ ಬೆಲೆಗಳು ಕಡಿಮೆಯಾದರೂ ಉಳಿದ ತರಕಾರಿಗಳ ಬೆಲೆಗಳು ಫೆಬ್ರುವರಿ 2020 ರಲ್ಲೂ ಏರಿಕೆಯ ಹಾಗೆ ಉಳಿದವು. ಕೋವಿಡ್19 ರಿಂದಾಗಿ ಆಹಾರದ ಬೇಡಿಕೆ ಮತ್ತು ಪೂರೈಕೆ ಎರಡೂ ಕುಸಿಯಲಿವೆ. ಇಂತಹ ಕುಸಿತದ ಪರಿಣಾಮ ಜನಸಾಮಾನ್ಯರ ಮೇಲೆ ಆಗಲಿದೆ.

ಈ ವರ್ಷದಲ್ಲಿ ಅಹರಧಾನ್ಯಗಳ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ ದೊಡ್ಡ ಪ್ರಮಾಣದಲ್ಲೇ ಆಗಲಿವೆ ಎಂಬ ಅಂದಾಜು ಆಗಲೇ ಇದೆ. ಇದಲ್ಲದೆ ಹಿಂಗಾರು ಬೆಳೆ ಉತ್ಪಾದನೆಯೂ ಚೆನ್ನಾಗಿರಲಿದೆ ಎಂಬ ಅಂದಾಜು ಇದೆ. ಈಗ ಆಹಾರ ಕಾರ್ಪೊರೇಶನ್ (ಎಫ್.ಸಿ.ಐ) ಗೋಡೌನುಗಳಲ್ಲಿ ಅಕ್ಕಿ ಮತ್ತು ಗೋಧಿ ದಾಸ್ತಾನು 7.8 ಕೋಟಿ ಟನ್ ಇದ್ದು, ಇದು ಕನಿಷ್ಠ ಇರಬೇಕಾದ ಸ್ಟಾಕಿನ (2.1 ಕೋಟಿ ಟನ್) ಮೂರು ಪಟ್ಟಿಗಿಂತಲೂ ಹೆಚ್ಚು. ಇವೆಲ್ಲ ಸಕಾರಾತ್ಮಕ ಬೆಳವಣಿಗೆಗಳಿದ್ದಾಗಲೂ ಆರ್ಥಿಕ ಪರಿಸ್ಥಿತಿ ಹದಗೆಟ್ಟೆ ಇದೆ. ಬಹು ದೊಡ್ಡ ಪ್ರಮಾಣದಲ್ಲಿ ಹಾಲು ಉತ್ಪಾದಿಸುವ ಅಮೂಲ್ ಸಹ ಲಾಕ್ ಡೌನ್ ನಿಂದಾಗಿ ಹಾಲಿನ ಬೇಡಿಕೆ ಕಡಿಮೆಯಾಗಲಿದೆ ಎಂದು ಅಂದಾಜಿಸಿದೆ.

ಕೃಷಿ ಸರಕುಗಳ ಲಭ್ಯತೆ ಕಡಿಮೆ ಆಗದೇ ಹೋದರೂ ಪೂರೈಕೆ ಯಲ್ಲಿ ಇರುವ ಹಲವು ಅಡಚಣೆಗಳಿಂದಾಗಿ ಬೆಲೆಗಳು ಏರುವ ಸಾಧ್ಯತೆಗಳು ಇವೆ. ಲಾಕ್ ಡೌನ್ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಮುಂದುವರೆದರೆ ಪೂರೈಕೆಯಲ್ಲಿ ತೀವ್ರ ವ್ಯತ್ಯಯಗಳಾಗುವ ಸಂಭವವಿದೆ. ಪೂರೈಕೆ ಮತ್ತು ಬೇಡಿಕೆ ಎರಡೂ ಒಟ್ಟಿಗೆ ಕಡಿಮೆಯಾದಾಗ ಬೆಲೆಗಳ ಮೇಲೆ ಪರಿಣಾಮ ಬಹಳ ಅನಿಶ್ಚಿತವಾಗಿರುತ್ತವೆ. ಲಾಕ್ ಡೌನ್ ನ ಅವಧಿಯಲ್ಲಿ ಬೆಲೆಗಳು ಕಡಿಮೆ ಆಗಿ ನಂತರ ಅತಿಯಾಗಿ ಏರಬಹುದು.

ಇದು ಪೂರೈಕೆಯ ವಿಷಯವಾಯಿತು. ಈಗಿನ ಪರಿಸ್ಥಿತಿಯಿಂದಾಗಿ, ಪೂರೈಕೆಯ ಸರಪಣಿ ಮತ್ತು ಕೃಷಿ ಉತ್ಪಾದನೆಯ ಕಾರ್ಯಾಚರಣೆಗಳಲ್ಲಿ ಹಲವು ಸಮಸ್ಯೆಗಳು ಉದ್ಭವವಾಗಬಹುದು.

ಕಟಾವು ಮತ್ತು ಮಾರಾಟದಲ್ಲಿ ತೊಡಕುಗಳು

ಮೊದಲನೆಯದಾಗಿ,

ಬೆಳೆ ಕಟಾವು ಮತ್ತು ಮಾರಾಟದಲ್ಲಿ ಕೆಳಗಿನ ತೊಡಕುಗಳು ತಲೆದೋರಬಹುದು:

ಅ) ಸರ್ಕಾರಿ ವಿಭಾಗ ಅಥವಾ ಏಜೆನ್ಸೀ ಗಳು ಬೆಳೆಗಳ ಕೊಳ್ಳುವಿಕೆಯಲ್ಲಿ ತೊಂದರೆ

ಬ) ಖಾಸಗಿ ಖರೀದಿದಾರರು ಸಂಗ್ರಹಣೆ ಮಾಡುವಲ್ಲಿಯೂ ತೊಂದರೆ

ಕ) ಹಿಂಗಾರು ಬೆಳೆ ಕಟಾವಿಗೆ ಕೂಲಿಕಾರರು ದೊರೆಯದೆ ಇರುವುದು

ಡ) ಸಾಗಾಣಿಕೆಗೆ ಡ್ರೈವರ್ ಗಳ ಕೊರತೆ

ಈ) ಹೆದ್ದಾರಿಗಳಲ್ಲಿ ಸಾಗಾಣಿಕೆಗಳಿಗೆ ತೊಂದರೆಗಳು

ಫ) ಕೃಷಿ ಮಾರುಕಟ್ಟೆಗಳ/ಮಂಡಿಗಳ ಮುಚ್ಚುವಿಕೆ/ಭಾಗಶಃ ಕಾರ್ಯ

ಗ) ಚಿಲ್ಲರೆ ಮಾರುಕಟ್ಟೆಗಳ ಮುಚ್ಚುವಿಕೆ

ಮೇಲಿನ ಕಾರಣಗಳಿಂದಾಗಿ ಗೋಧಿ, ದ್ರಾಕ್ಷಿ, ಬಾಳೆ, ಕಲ್ಲಂಗಡಿ, ಕರಬೂಜ, ಮೆಣಸಿನಕಾಯಿ, ಕಡಲೆಕಾಳು, ಹತ್ತಿ, ಅರಿಶಿನ, ಜೀರಿಗೆ, ಈರುಳ್ಳಿ, ಕೊತ್ತುಂಬರಿ, ಆಲೂಗಡ್ಡೆ ಬೆಳೆಗಳಲ್ಲಿ ಬಿಕ್ಕಟ್ಟಿನ ವಾತಾವರಣ ಈಗಾಗಲೇ ಸೃಷ್ಟಿಯಾಗಿದೆ.

ಎರಡನೇಯದಾಗಿ,

ಹಲವು ಅಡಚಣೆಗಳಿಂದಾಗಿ ಆಗಲೇ ಹಲವು ಉತ್ಪನ್ನಗಳ ಬೆಲೆಗಳು ಕುಸಿದಿವೆ. ಮಹಾರಾಷ್ಟ್ರದಲ್ಲಿ ಟೊಮೆಟೊ ಬೆಲೆ 2 ರೂಪಾಯಿಗೆ ಇಳಿದಿರುವುದು, ದ್ರಾಕ್ಷಿಯ ಬೆಳೆಗಾರರು ಬೇಡಿಕೆಯ ಕೊರತೆಯಿಂದಾಗಿ 1000 ಕೋಟಿ ರೂಪಾಯಿಗಳ ನಷ್ಟ ಎದುರಿಸುತ್ತಿರುವುದು ಇಂತಹ ಉದಾಹರಣೆಗಳು. ಮಧ್ಯ ಪ್ರದೇಶದಲ್ಲಿ ಗೋಧಿಯ ಬೆಲೆ 2200 ರೂಪಾಯಿಗಳಿಂದ 1600 ರೂಪಾಯಿಗಳಿಗೆ ಇಳಿದಿದೆ. ಪಂಜಾಬಿನಲ್ಲಿ ಹಲವು ತರಕಾರಿಗಳು ಕಿಲೋ ಗೆ ಒಂದು ರೂಪಾಯಿಗೆ ಕುಸಿದಿದೆ. ದೆಹಲಿಯ ಮಾರುಕಟ್ಟೆಗಳಲ್ಲಿ ಕೋಳಿ ಮಾಂಸದ ಬೆಲೆ ಕಿಲೋಗೆ 55 ರಿಂದ 24 ರೂಪಾಯಿಗಳಿಗೆ ಇಳಿದಿದೆ. ತಮಿಳು ನಾಡಿನಲ್ಲಿ ಮೊಟ್ಟೆಯ ಬೆಲೆ ನಾಲ್ಕು ರೂಪಾಯಿಯಿಂದ 1.95 ರೂಪಾಯಿಗೆ ಇಳಿದಿದೆ.

ಲಾಕ್ ಡೌನ್ ನಿಂದಾಗಿ ಇಳಿದ ಬೆಲೆ ಕೆಲ ದಿನಗಳಲ್ಲಿ ಏರಬಹುದು. ಆದರೆ ರೈತರಿಗೆ ಬೆಲೆ ಸಿಗುವ ಸಾಧ್ಯತೆ ಬಹಳ ಕಡಿಮೆ. ಯಾಕೆಂದರೆ ಈ ಬೆಲೆ ಏರಿಕೆಯಿಂದಾಗಿ ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಲಾಭವಾಗುವ ಸಾಧ್ಯತೆಗಳೇ ಹೆಚ್ಚು.

ಮೂರನೇಯದಾಗಿ,

ವಲಸೆ ಕಾರ್ಮಿಕರ ವಾಪಸಾತಿಯಿಂದಾಗಿ ಕಟಾವು ಸುಲಲಿತವಾಗಿ ಆಗುವ ಸಾಧ್ಯತೆ ಕಡಿಮೆ. ಇದರಿಂದ ರೈತರ ಹಾನಿ ಅಪಾರವಾಗುತ್ತದೆ. ಕಟಾವಿನ ಯಂತ್ರಗಳನ್ನು ಬಳಸಬಹುದು. ಆದರೆ ಲಾಕ್ ಡೌನ್ ಇರುವುದರಿಂದ ಅವುಗಳ,ಮುಕ್ತ ಓಡಾಟ ಸಾಧ್ಯತೆ ಬಹಳ ಕಡಿಮೆ ಇರುತ್ತದೆ. ಕೆಲವು ಕಡೆ ಡ್ರೈವರ್ ಗಳ ಲಭ್ಯತೆ ಇರಲಾರದು. ಯಂತ್ರಗಳ ರಿಪೇರಿ ವ್ಯವಸ್ಥೆಯ ಕೊರತೆ, ಬಿಡಿ ಭಾಗಗಳ ಕೊರತೆ ಇತ್ಯಾದಿಗಳು ಸಮಸ್ಯೆಯನ್ನು ತೀವ್ರಗೊಳಿಸುತ್ತವೆ. ವರದಿಗಳ ಪ್ರಕಾರ ಕೇರಳದ ಅಕ್ಕಿ ಗಿರಣಿಗಳು ಭತ್ತದ ಸಂಗ್ರಹಣೆ ಮಾಡಿಲ್ಲ. ಹಾಲಿನ ಘಟಕಗಳಲ್ಲಿ ಕಾರ್ಮಿಕರ ಅಭಾವದಿಂದಾಗಿ ಉತ್ಪಾದನೆ ಕುಂಠಿತಗೊಂಡಿದೆ.

ನಾಲ್ಕನೇಯದಾಗಿ,

ದೇಶದಾದ್ಯಂತ ಸರಬರಾಜು ಸರಪಳಿಯ


ಹಿಂಗಾರು ಬೆಳೆ ಕಟಾವಿಗೆ ಕೂಲಿಕಾರರ ಕೊರತೆಯಿಂದಾಗಿ ಆಹಾರ ಪೂರೈಕೆಯಲ್ಲಿ ಏರುಪೇರುಗಳಾಗಲಿದೆ

ಪುಟ 10 ಕ್ಕೆ

ಸಾಂಕೇತಿಕ ಆಚರಣೆಗಳು ಮೂರ್ತ ಕ್ರಮಗಳಿಗೆ ಬದಲಿಯಾಗಲಾರವು



ಭಾರತೀಯ ಸಂವಿಧಾನದ ರಕ್ಷಕರೆನಿಸಿರುವ ರಾಷ್ಟ್ರಪತಿಗಳಿಗೆ ಸೀತಾರಾಂ ಯೆಚುರಿ ಪತ್ರ

ನಮ್ಮ ದೇಶ ಒಂದು ಮಹಾಮಾರಿಯ ಎದುರು ಗಂಭೀರ ಸಮರದಲ್ಲಿ ತೊಡಗಿರುವಾಗ ಅದಕ್ಕೆ ಅಗತ್ಯವಾದ ಮೂರ್ತ ಕ್ರಮಗಳ ಬದಲು ಸಾಂಕೇತಿಕ ಆಚರಣೆಗಳು ನಡೆಯುತ್ತಿವೆ. ಎಪ್ರಿಲ್ 5ರ ಸಾಂಕೇತಿಕ ಆಚರಣೆಯನು ಇಂತಹ ಗಂಭೀರ ಸನ್ನಿವೇಶದಲ್ಲೂ ಪಟಾಕಿಗಳ ಮೂಲಕ ಉತ್ಸವದಂತೆ ಆಚರಿಸುವ ಕಳವಳಕಾರೀ ಪ್ರಸಂಗ ನಡೆದಿದೆ.



ಈ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಎಪ್ರಿಲ್ 6ರಂದು ಭಾರತದ ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ. "ಇಂತಹ ಸಾಂಕೇತಿಕ ಆಚರಣೆಗಳು ಸರಕಾರ ತುರ್ತಾಗಿ ಕೈಗೊಳ್ಳಬೇಕಾದ ಮೂರ್ತ ಕ್ರಮಗಳಿಗೆ ಬದಲಿಯಾಗಲಾರವು ಎಂಬುದನ್ನು ತಾವು ಕೂಡ ಖಂಡಿತವಾಗಿ ಒಪ್ಪುತ್ತೀರಿ" ಎಂದು ಹೇಳುತ್ತ ಆರು ಮುಖ್ಯ ಅಂಶಗಳತ್ತ ಗಮನ ಸೆಳೆಯಲು ಈ ಪತ್ರವನ್ನು ಬರೆದಿದ್ದಾರೆ ಈ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಗೌರವಾನ್ವಿತ ರಾಷ್ಟ್ರಪತಿಗಳೇ,

ಭಾರತೀಯು ಸಂವಿಧಾನದ ರಕ್ಷಕರು ತಾವಾಗಿರುವುದರಿಂದ, ನಿಮ್ಮ ಮಂಜೂರಾತಿಯಿಂದ ಮತ್ತು ಅಧಿಕಾರದ ಅಡಿಯಲ್ಲಿ ಕೇಂದ್ರ ಸರಕಾರ ಕಾರ್ಯ ನಿರ್ವಹಿಸುತ್ತಿರುವುದರಿಂದ, ನಾನು ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ.

ದೇಶ ಮತ್ತು ಜನತೆ ಇದುವರೆಗೆ ಎರಡು 'ಸಾಂಕೇತಿಕ' ಪ್ರಸಂಗಗಳ ಮೂಲಕ ಹಾದು ಬಂದಿದ್ದಾರೆ. ಕಳವಳಕಾರಿ ಸಂಗತಿಯೆಂದರೆ, ನಿನ್ನೆಯ ಸಾಂಕೇತಿಕ ಸಂದರ್ಭವನ್ನು ಹಲವರು, ದೇಶ ಮಹಾಮಾರಿಯ ವಿರುದ್ಧ ಗಂಭೀರ ಸಮರ ನಡೆಸುತ್ತಿರುವಾಗ, ಪಟಾಕಿಗಳ ಮೂಲಕ ಒಂದು ಉತ್ಸವದಂತೆ ಆಚರಿಸಿದ್ದಾರೆ. ಇಂತಹ ಸಾಂಕೇತಿಕ ಆಚರಣೆಗಳು ಸರಕಾರ ತುರ್ತಾಗಿ ಕೈಗೊಳ್ಳಬೇಕಾದ ಮೂರ್ತ ಕ್ರಮಗಳಿಗೆ ಬದಲಿಯಾಗಲಾರವು ಎಂಬುದನ್ನು ತಾವು ಕೂಡ ಖಂಡಿತವಾಗಿ ಒಪ್ಪುತ್ತೀರಿ.

ನಾನು ತಮ್ಮ ಮಧ್ಯಪ್ರವೇಶವನ್ನು ಕೋರಬೇಕಾಗಿ ಬಂದಿರುವುದು, ಈ ಹಿಂದೆ ನಾನು ಗೌರವಾನ್ವಿತ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳೊಡನೆ ನಡೆಸಿದ ಸಂಪರ್ಕಗಳಿಗೆ ಅಷ್ಟೇನೂ ಸ್ಪಂದನೆ ಸಿಕ್ಕಿಲ್ಲವಾದ್ದರಿಂದ. ಇದು 'ನಿಮ್ಮ' ಸರಕಾರವಾದ್ದರಿಂದ, ನಾನು, ನಮ್ಮ ಜನಗಳ ಪರವಾಗಿ ಈ ಕೆಳಗಿನ ಪ್ರಶ್ನೆಗಳನ್ನು ಪರಿಶೀಲಿಸಿ, ಅದಕ್ಕನುಗುಣವಾಗಿ ಸರಕಾರಕ್ಕೆ ಕೊವಿಡ್–19 ಮಹಾಮಾರಿಯ ವಿರುದ್ಧ ಸಮರ ನಡೆಸುವುದಕ್ಕಾಗಿ ಮತ್ತು ಅದನ್ನು ಸೋಲಿಸುವುದಕ್ಕಾಗಿ ನಿರ್ದೇಶನಗಳನ್ನು ನೀಡಬೇಕೆಂದು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ.

ಪ್ರಧಾನ ಮಂತ್ರಿಗಳ ದೇಶವ್ಯಾಪಿ 21 ದಿನಗಳ ಲಾಕ್‌ಡೌನಿನ ಪ್ರಕಟಣೆ ಕೇವಲ ನಾಲ್ಕು ಗಂಟೆಗಳ ನೋಟೀಸು ಕೊಟ್ಟಿತ್ತು. ಆದರೆ ಅವರು ಮಾರ್ಚ್ 22ರಂದು ನಡೆಸಬೇಕೆಂದು ನೀಡಿದ ಒಂದೇ ದಿನದ 'ಜನತಾ ಕರ್ಫ್ಯೂ'ನ ಕರೆಗೆ ಜನಗಳು ಸಿದ್ಧರಾಗಲು ಅನುವಾಗುವಂತೆ ಎರಡು ದಿನಗಳ ನೋಟೀಸು ಕೊಡಲಾಗಿತ್ತು.

ಈ ಲಾಕ್‌ಡೌನನ್ನು, ಸರಕಾರದಿಂದಾಗಲೀ, ಜನತೆಯಿಂದಾಗಲೀ, ಯಾವುದೇ ಪೂರ್ವಸಿದ್ಧತೆಯಿಲ್ಲದೆ ಹೇರಲಾಯಿತು. ಅದರ ಫಲಿತಾಂಶವೆಂದರೆ, ಒಂದು ಮಟ್ಟಿನ ಅಸ್ತವ್ಯಸ್ತತೆ ಮತ್ತು ಅರಾಜಕತೆ, ಈ ಮಹಾಮಾರಿ ಇಡೀ ಸಮುದಾಯದಲ್ಲಿ ಹರಡದಂತೆ ತಡೆಯುವ ಗುರಿಯನ್ನೇ ವಿಫಲಗೊಳಿಸುವಂತದ್ದು.

ಆದ್ದರಿಂದ ಈ ಕೆಳಗಿನ ಪ್ರಶ್ನೆಗಳನ್ನು ಸಮರೋಪಾದಿಯಲ್ಲಿ ಎತ್ತಿಕೊಳ್ಳುವಂತೆ ಸರಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರುತ್ತೇನೆ:

1. ವಲಸೆ ಕಾರ್ಮಿಕರು

ಈ ಲಾಕ್‌ಡೌನಿನಿಂದ ತಮ್ಮ ಜೀವನಾಧಾರಗಳನ್ನು ಮತ್ತು ದೈನಂದಿನ ಆದಾಯಗಳನ್ನು ಕಳಕೊಂಡ ಲಕ್ಷ–ಲಕ್ಷ ವಲಸೆ ಕಾರ್ಮಿಕರು ನೂರಾರು ಕಿಲೋಮೀಟರುಗಳ ದೂರದಲ್ಲಿರುವ ತಮ್ಮ ಮನೆಗಳಿಗೆ ಧಾವಿಸುತ್ತಿದ್ದಾರೆ. ಅಲ್ಲದೆ ಇದು ಕಟಾವಿನ ಸಮಯ. ಅವರಲ್ಲಿ ಹಲವರು ಈ ಅವಧಿಯಲ್ಲಿ ತಮ್ಮ ಕುಟುಂಬಗಳಿಗೆ ನೆರವಾಗಲು ಹಿಂದಿರುಗುತ್ತಾರೆ.

ಸರಕಾರ ಭಾರತಕ್ಕೆ ಮರಳಲು ಸಾಧ್ಯವಾಗದೆ ವಿದೇಶಗಳಲ್ಲಿ ಇಕ್ಕಟ್ಟಿನಲ್ಲಿದ್ದ ಭಾರತೀಯರನ್ನು ಕರೆತರಲು ವಿಶೇಷ ವಿಮಾನ ಹಾರಾಟಗಳನ್ನು ಸಂಘಟಿಸಿತು. ಇದೇ ರೀತಿಯಲ್ಲಿ, ನಮ್ಮ ಈ ಬಂಧುಗಳಿಗೆ, ಅದೇ ರೀತಿಯಲ್ಲಿ ವಿಮಾನಗಳಲ್ಲವಾದರೂ, ವಿಶೇಷ ರೈಲುಗಳ ಅಥವ ಬಸ್‌ಗಳ ವ್ಯವಸ್ಥೆ ಮಾಡಬಹುದಿತ್ತು. ಅದು ಸಾಧ್ಯವಾಗದಿದ್ದರೆ, ಲಾಕ್‌ಡೌನಿನ ಪ್ರಕಟನೆಯ ಮೊದಲು, ಅವರು ವೈಯುಕ್ತಿಕ ದೂರಗಳನ್ನು ಕಾಯ್ದುಕೊಳ್ಳುವಂತೆ ತಾತ್ಕಾಲಿಕ ಆಶ್ರಯ ತಾಣಗಳನ್ನು, ಸಾಕಷ್ಟು ರೇಶನ್‌ನೊಂದಿಗೆ ಮತ್ತು ಉಳಿದುಕೊಳ್ಳುವ ಸೌಲಭ್ಯಗಳೊಂದಿಗೆ ವ್ಯವಸ್ಥೆಗೊಳಿಸಬೇಕಾಗಿತ್ತು.

2. ರಾಜ್ಯಗಳನ್ನು ವಿಶ್ವಾಸಕ್ಕೆ ತಗೊಳ್ಳಲಿಲ್ಲ.

ಒಕ್ಕೂಟ ತತ್ವ ನಮ್ಮ ಸಂವಿಧಾನದ ಒಂದು ಮೂಲಭೂತ ಲಕ್ಷಣ. ಭಾರತೀಯ ಸಂವಿಧಾನದ ಮೊದಲ ಕಲಮು "ಇಂಡಿಯಾ, ಅಂದರೆ ಭಾರತ, ಒಂದು ರಾಜ್ಯಗಳ ಸಂಘ" ಎಂದು ನಿರೂಪಿಸುತ್ತದೆ.

ದುರದೃಷ್ಟವಶಾತ್, ಪ್ರಧಾನ ಮಂತ್ರಿಗಳು, ದೇಶವ್ಯಾಪಿ ಲಾಕ್‌ಡೌನನ್ನು ಪ್ರಕಟಿಸುವ ಮೊದಲು ಚುನಾಯಿತ ರಾಜ್ಯ ಸರಕಾರಗಳನ್ನು ವಿಶ್ವಾಸಕ್ಕೆ ತಗೊಳ್ಳಲಿಲ್ಲ. ಇದರಿಂದಾಗಿ ಹಲವು ರಾಜ್ಯಗಳು ಯಾವುದೇ ಸಿದ್ಧತೆಗಳನ್ನು ಮಾಡಿಕೊಂಡಿರಲಿಲ್ಲ.

ಈಗ ರಾಜ್ಯಗಳನ್ನು ವಲಸೆ ಕಾರ್ಮಿಕರ ಬಿಕ್ಕಟ್ಟಿನ ಹೊಣೆ ತಗೊಳ್ಳಬೇಕು ಎಂದು ಹೇಳುವುದು ಬಹಳ ಅನ್ಯಾಯದ ಸಂಗತಿ. ಕೇಂದ್ರ ಸರಕಾರ, ಈ ಪ್ರಯತ್ನಗಳಲ್ಲಿ ರಾಜ್ಯ ಸರಕಾರಗಳಿಗೆ ಉದಾರವಾಗಿ ಹಣಕಾಸು ಬೆಂಬಲ ನೀಡಬೇಕು. ಇತ್ತೀಚೆಗೆ, 'ರಾಜ್ಯ ಅನಾಹುತ ಅಪಾಯ ನಿರ್ವಹಣೆ ನಿಧಿ'ಯಿಂದ ಪ್ರಕಟಿಸಿದ ಬೆಂಬಲ ಅತ್ಯಲ್ಪ, ಏನೇನೂ ಸಾಲದು.

3. ಪ್ರತಿಕೂಲ ಆರ್ಥಿಕ ಪರಿಣಾಮಗಳನ್ನು ಶಮನಗೊಳಿಸಬೇಕು.

ಅ) ಕೋಟ್ಯಂತರ ಜನಗಳು ತಮ್ಮ ಆದಾಯ ಗಳಿಸುವ ಸಾಮರ್ಥ್ಯವನ್ನು ಕಳಕೊಂಡಿದ್ದಾರೆ. ಸಾಮೂಹಿಕ ಹಸಿವು ಮತ್ತು ಆಹಾರ ಕೊರತೆಯ ಒಂದು ತೀವ್ರ ಬಿಕ್ಕಟ್ಟು ಸಂಭವಿಸಲು ನಾವು ಬಿಡಲಾಗದು. ಏನೇ ಬೆಲೆ ತೆತ್ತಾದರೂ ಇದನ್ನು ತಡೆಯಬೇಕಾಗಿದೆ ಎಂಬುದನ್ನು ನೀವೂ ಒಪ್ಪುತ್ತೀರಿ ಎಂಬ ಖಾತ್ರಿ ನನಗಿದೆ.

ಕೇಂದ್ರ ಸರಕಾರದ ಎಫ್‌ಸಿಐ ಗೋದಾಮುಗಳಲ್ಲಿ ಸುಮಾರು 7.5 ಕೋಟಿ ಟನ್ ಆಹಾರಧಾನ್ಯಗಳ ದಾಸ್ತಾನು ಇದೆ. ಈ ದಾಸ್ತಾನು ಕೊಳೆತು ಹೋಗಲು, ಅಥವ ಹೆಗ್ಗಣಗಳಿಗೆ ಆಹಾರವಾಗಲು ಬಿಡುವ ಬದಲು, ಅದನ್ನು ತಕ್ಷಣವೇ ರಾಜ್ಯಗಳಿಗೆ ತಮ್ಮ ಆದಾಯಗಳನ್ನು ಕಳಕೊಂಡಿರುವ ಜನಗಳ ನಡುವೆ ಹಂಚಲು ರವಾನಿಸಬೇಕು.

ಆ) ಈ ಮಹಾಮಾರಿ ಎರಗುವ ಮೊದಲೇ ಕಾಲು ಹಾಕಿದ್ದ ಆರ್ಥಿಕ ಹಿಂಜರಿತವನ್ನು ಈ ಲಾಕ್‌ಡೌನಿನ ದುಷ್ಪರಿಣಾಮಗಳು ಉಲ್ಬಣಗೊಳಿಸಿವೆ. ಹಲವು ಉದ್ಯಮಗಳು ಕಾರ್ಮಿಕರ ಲೇ–ಆಫ್ ಮಾಡುತ್ತಿವೆ, ಮತ್ತು ಹಲವು ರಾಜ್ಯಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ವೇತನ ಕಡಿತಗಳಾಗುತ್ತಿವೆ. ವೇತನಗಳನ್ನು ಮೊದಲಿನ ಹಾಗೇ ಇಟ್ಟುಕೊಳ್ಳಬೇಕು ಎಂದೇನೋ ಸರಕಾರ ಆದೇಶ ನೀಡಿದೆ. ಆದರೆ ಕಾರ್ಯತಃ ಹೀಗಾಗುತ್ತಿಲ್ಲ. ಮಾಲಕರು ತಮ್ಮ ವ್ಯವಹಾರಗಳು ಸ್ತಬ್ಧಗೊಂಡಿರುವುದರಿಂದಾಗಿ ಸಂಬಳಗಳನ್ನು ಕೊಡಲು ತಮಗಾಗುತ್ತಿಲ್ಲ ಎನ್ನುತ್ತಿದ್ದಾರೆ.

ಹಲವು ದೇಶಗಳ ಸರಕಾರಗಳು ಮಾಲಕರ ನಷ್ಟಗಳನ್ನು ತುಂಬಿಕೊಡಲು ಮುಂದೆ ಬಂದಿವೆ. ಕೆಲವು ಒಟ್ಟು ವೇತನ ಪಾವತಿಗೆ ಬೇಕಾದ ಮೊತ್ತದ 80ಶೇ. ವರೆಗೆ ಕೊಡುವುದಾಗಿ ಹೇಳಿವೆ. "ನಿಮ್ಮ ಸರಕಾರ"ವೂ ಇದೇ ರೀತಿಯ ಒಂದು ಕ್ರಮವನ್ನು ಪ್ರಕಟಿಸಬೇಕು.

ಇ) ಕೋಟ್ಯಂತರ ಮಧ್ಯಮ ವರ್ಗಗಳ ಜನರು ತೆಗೆದುಕೊಂಡ ಸಾಲದ ಕಂತುಗಳನ್ನು ಕಟ್ಟಬೇಕಾಗಿದೆ. ಇಂತಹ ಪಾವತಿಗಳನ್ನು ಕನಿಷ್ಟ ಮೂರು ತಿಂಗಳ ಮಟ್ಟಿಗೆ ಮುಂದೂಡಬೇಕು. ಈ ಮುಂದೂಡಿಕೆ ಬಡ್ಡಿರಹಿತವಾಗಿರಬೇಕು.

ಈ) ಕೃಷಿ ಸಂಕಟ ಮತ್ತಷ್ಟು ತೀಕ್ಷ್ಣಗೊಳ್ಳುವುದು ಖಂಡಿತ. ಇಂತಹ ಸಂದರ್ಭಗಳಲ್ಲಿ "ನಿಮ್ಮ ಸರಕಾರ" ತಕ್ಷಣವೇ ರೈತರು ತೆಗೆದುಕೊಂಡ ಸಾಲದ ಒಂದು ಸಮಯದ ಸಾಲಮನ್ನಾವನ್ನು ಪ್ರಕಟಿಸಬೇಕು. ಇದು ಖಂಡಿತಾ ಸಾಧ್ಯವಿದೆ. ಏಕೆಂದರೆ, ಇದುವರೆಗೆ ನಮ್ಮ ಸೂಪರ್ ಶ್ರೀಮಂತ ಕಾರ್ಪೊರೇಟ್‌ಗಳ ರೂ.7.78 ಲಕ್ಷ ಕೋಟಿ ರೂ.ಗಳಷ್ಟು ಸಾಲಗಳನ್ನು ಈ ಸರಕಾರ ಮನ್ನಾ ಮಾಡಿದೆ. ಖಂಡಿತವಾಗಿಯೂ, ಇಂತಹ ತಾದಾತ್ಮ್ಯವನ್ನು ನಮ್ಮ "ಅನ್ನದಾತ"ರ ವಿಷಯದಲ್ಲೂ ತೋರಿಸಬಹುದು.

4. ವೈದ್ಯಕೀಯ ಸಾಧನಗಳ ಕೊರತೆ

ಅತ್ಯಗತ್ಯವಾದ ವೈದ್ಯಕೀಯ ಸಾಧನಗಳ ತೀವ್ರ ಕೊರತೆ ಇದೆ ಎಂಬ ಹಲವಾರು ವರದಿಗಳಿವೆ. ಅತ್ಯಂತ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ನಮ್ಮ ಧೀರ ಆರೋಗ್ಯ ಕಾರ್ಯಕರ್ತರಿಗೆ ಸರಿಯಾದ ಸುರಕ್ಷಾ ಉಡುಗೆ–ಪರಿಕರಗಳಿಲ್ಲ. ಅವರಿಗೆ ಈಗಾಗಲೇ ಸೋಂಕು ತಗಲಿರುವ ವರದಿಗಳು ಹಲವು ಆಸ್ಪತ್ರೆಗಳಿಂದ ಬರುತ್ತಿವೆ. ಇವುಗಳ ಪೂರೈಕೆಯನ್ನು ಹೇಗಾದರೂ ಮಾಡಿ ತಕ್ಷಣವೇ ಹೆಚ್ಚಿಸಬೇಕು.

ರೋಗಿಗಳನ್ನು ಪ್ರತ್ಯೇಕಗೊಳಿಸಿಡುವ ಐಸೊಲೇಷನ್ ವಾರ್ಡುಗಳಿಗೆ ಆಸ್ಪತ್ರೆಗಳಲ್ಲಿ ಕೊರತೆ ಉಂಟಾಗುವ ಸಂಭವವೂ ಇದೆ. ಈಗಲಾದರೂ ಇವನ್ನು ತಕ್ಷಣವೇ ಹೆಚ್ಚಿಸಬೇಕು. ವೆಂಟಿಲೇಟರುಗಳ ಕೊರತೆ ತೀವ್ರವಾಗಿದೆ, ಅವನ್ನು ತಕ್ಷಣವೇ ಖರೀದಿಸಬೇಕು.

ಸೋಂಕಿನ ತಪಾಸಣೆಯ ಪ್ರಮಾಣ ಅತೀ ಕಡಿಮೆ ಇರುವ ದೇಶಗಳಲ್ಲಿ ಭಾರತವೂ ಒಂದು ಎಂದು ಸಾರ್ವತ್ರಿಕವಾಗಿ ಟಿಪ್ಪಣಿ ಮಾಡಲಾಗಿದೆ. ದಕ್ಷಿಣ ಕೊರಿಯಾದಲ್ಲಿ ಪ್ರತಿ ದಶಲಕ್ಷ ಜನಸಂಖ್ಯೆಯಲ್ಲಿ 7,659 ಜನಗಳ ತಪಾಸಣೆ ಮಾಡಿದ್ದರೆ, ಭಾರತದಲ್ಲಿ ಇದು ಕೇವಲ 32ರಷ್ಟು ಅತೀ ಕೆಳಮಟ್ಟದಲ್ಲಿದೆ. ಇದು ಭವಿಷ್ಯದ ಮಟ್ಟಿಗೆ ಅತ್ಯಂತ ಅಪಾಯಕಾರಿ. ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾಗಿ ಸೋಂಕು ತಪಾಸಣೆ ಆಗಬೇಕಿದೆ, ದೇಶವ್ಯಾಪಿ ಲಾಕ್‌ಡೌನ್ ಬದಲು, ಯಾವ ಸಮೂಹಗಳಲ್ಲಿ ವೈರಸ್‌ಗಳು ಹರಡುತ್ತಿವೆ ಎಂದು ಗುರುತಿಸಿ, ಅವನ್ನು ಪ್ರತ್ಯೇಕಗೊಳಿಸಿ ಅಲ್ಲಿ ಲಾಕ್ಡೌನ್ ಹಾಕಬೇಕಿದೆ.


ಈ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕಿದೆ, "ನಿಮ್ಮ ಸರಕಾರ"ಕ್ಕೆ ಹೀಗೆ ಮಾಡಲು ನಿರ್ದೇಶನ ನೀಡಬೇಕು.

5. ಹೊಸ ಕೊವಿಡ್–19 ನಿಧಿ

ವಿಚಿತ್ರ ಸಂಗತಿಯೆಂದರೆ, "ನಿಮ್ಮ ಸರಕಾರ" ಈ ಮಹಾಮಾರಿಯನ್ನು ಎದುರಿಸಲು "ಪಿಎಂ ಕೇರ್ಸ್" ಎಂಬ ಹೊಸದೊಂದು ನಿಧಿಯನ್ನು ಸ್ಥಾಪಿಸಿದೆ. ಕಾಯ್ದೆ ಪ್ರಕಾರ ಸ್ಥಾಪಿಸಿದ 'ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ' ದೇಶ ಸ್ವತಂತ್ರವಾದಂದಿನಿಂದ ಅಸ್ತಿತ್ವದಲ್ಲಿ ಇದೆ. ಈ ನಿಧಿ ಪಾರದರ್ಶಕವಾಗಿದೆ, ಇದರಲ್ಲಿ ಜವಾಬುದಾರಿಕೆ ಇದೆ ಮತ್ತು ದೇಶದ ಮಹಾ ಲೆಕ್ಕ ಪರಿಶೋಧಕರು ಇದರ ಲೆಕ್ಕ ಪರಿಶೋಧನೆ ಮಾಡುತ್ತಾರೆ. ಇನ್ನೊಂದೆಡೆಯಲ್ಲಿ "ಪಿಎಂ ಕೇರ್ಸ್" ನಿಧಿಯನ್ನು ನಾಲ್ವರು–ಪ್ರಧಾನ ಮಂತ್ರಿ, ಗೃಹಮಂತ್ರಿ, ರಕ್ಷಣಾ ಮಂತ್ರಿ ಮತ್ತು ಹಣಕಾಸು ಮಂತ್ರಿಗಳಿರುವ ಒಮದು ಟ್ರಸ್ಟ್ ನೊಡಿಕೊಳ್ಳುತ್ತದೆ. ಈ ನಿಧಿಗೆ ಸಂಗ್ರಹ, ಅದರಿಂದ ವಿತರಣೆ ಹೇಗೆ ನಡೆಯುತ್ತದೆ, ಅದಕ್ಕೆ ಜವಾಬುದಾರಿಕೆ ಏನು, ಇವೆಲ್ಲ ಅಂಶಗಳು ಅಜ್ಞಾತವಾಗಿವೆ. ಬಲವಂತದಿಂದ ಸಂಗ್ರಹ, ಸರಕಾರೀ ನೌಕರರ, ವೃತ್ತಿಪರರ, ಅಷ್ಟೇ ಏಕೆ, ಆರೋಗ್ಯ ಕರ್ತರ ಸಂಬಳಗಳಿಂದಲೂ, ಅವರ ಒಪ್ಪಿಗೆ ಇಲ್ಲದೆ ಒಂದು ದಿನದ ಸಂಬಳವನ್ನು ತಂತಾನೇ ಮುರಿದುಕೊಳ್ಳಲಾಗುತ್ತಿದೆ ಎಂಬ ಕಳವಳಕಾರೀ ವರದಿಗಳಿವೆ.

ಈಗಾಗಲೇ ಕಾರ್ಪೊರೇಟ್‌ಗಳಿಂದ, ಪ್ರತಿಷ್ಠಿತ ವ್ಯಕ್ತಿಗಳಿಂದ, ಸಾರ್ವಜನಿಕ ವಲಯದ ಉದ್ದಿಮೆಗಳಿಂತ

ಪುಟ 14 ನೋಡಿ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ವ್ಯಂಗ್ಯಚಿತ್ರ: ಶುಭಾನಿ, ಡೆಕ್ಕನ್ ಕ್ರಾನಿಕಲ್

ಕೋವಿಡ್ 19: ಭಾರತೀಯ ಕೃಷಿ ಆರ್ಥಿಕತೆಯ ಮೇಲಿನ ಪರಿಣಾಮಗಳು...... ಪುಟ 8 ರಿಂದ

ಕೊಂಡಿಗಳು ಮುರಿದುಬಿದ್ದಿವೆ. ಇದು ಲಾಕ್ ಡೌನ್ ಘೋಷಿಸುವ ಮುನ್ನ ಸಾಕಷ್ಟು ವಿಚಾರ ಮಾಡದೆ ಇರುವುದರಿಂದಾಗಿ ಆಗಿದೆ. ಉದಾಹರಣೆಗೆ ಆವಶ್ಯಕ ಪಟ್ಟಿಯಲ್ಲಿ ಬಹಳ ಗೊಂದಲಗಳಿದ್ದವು. ನಂತರ ಹಲವು ಪ್ರಕಟಣೆಗಳ ಮೂಲಕ ಅದನ್ನು ಸರಪಡಿಸಲಾಗುತ್ತಿದೆ. ಈಗ ರಾಜ್ಯ ಗಡಿಗಳಲ್ಲಿ ಸಾವಿರಾರು ಲಾರಿಗಳ ದಟ್ಟಣೆಯಾಗಿದ್ದು ಯಾವುದು ಆವಶ್ಯಕ ಆಹಾರ ವಸ್ತುಗಳನ್ನು ಸಾಗಿಸುತ್ತಿವೆ ಎಂಬಿತ್ಯಾದಿ ಗೊಂದಲಗಳಿವೆ. ಆವಶ್ಯಕ ಆಹಾರ ವಸ್ತುಗಳ ಸರಬರಾಜು ಸರಪಳಿಯನ್ನು ಸರಿಪಡಿಸುವ ಪ್ರಯತ್ನ ನಡೆದಿದ್ದರೂ, ಅದನ್ನು ಸರಿಪಡಿಸುವುದು ಸುಲಭವಲ್ಲ. ಎ.ಪಿ.ಎಂ.ಸಿ ಮಂಡಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ವಾರಕ್ಕೊಮ್ಮೆ ಮಾತ್ರ ತೆರೆದಿವೆ. ಇದರಿಂದಾಗಿಯೂ ಕೃಷಿ ಆರ್ಥಿಕತೆ ಹೊಡೆತ ಅನುಭವಿಸಿದೆ.

ಕೃಷಿಗೆ ಬೆಂಬಲವಾಗಿ ಅಗತ್ಯ ತಕ್ಷಣ ಕ್ರಮಗಳು

ಕೊವಿದ್–19 ಹಿನ್ನೆಲೆಯಲ್ಲಿ ಕೃಷಿ ಸಮಸ್ಯೆಗಳಿಗೆ ಪರಿಹಾರವಾಗಿ ಸರಕಾರ ಮೂರು ಕ್ರಮಗಳನ್ನು ಘೋಷಿಸಿದೆ :

1. ಕೃಷಿ ಸಂಬಂಧಿತ ಚಟುವಟಿಕೆಗಳು, ವ್ಯಕ್ತಿಗಳು, ವಸ್ತುಗಳು, ಅಂತಹ ವಸ್ತುಗಳ ಉತ್ಪಾದನೆಗೆ ಸಂಬಂಧಿಸಿದವು ಇತ್ಯಾದಿಗಳನ್ನು 'ಆವಶ್ಯಕ' ಎಂದು ಪರಿಗಣಿಸಲಾಗಿದ್ದು ಇವುಗಳ ಸಾಗಾಣಿಕೆ, ಕಾರ್ಯಾಚರಣೆಗೆ ತೊಡಕಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಘೋಷಿಸಿದೆ.
2. ಪ್ರಧಾನ ಮಂತ್ರಿ ಕಿಸಾನ್ ಯೋಜನೆಯ ರೂ. 2000 ರ ಮೊದಲ ಕಂತನ್ನು ಎಪ್ರಿಲ್ ಮೊದಲ ವಾರದಲ್ಲೇ ಕೊಡಲಾಗುವುದು. ರೇಗಾ ಕೂಲಿಯನ್ನು ರೂ. 182ರಿಂದ ರೂ. 202 ಕ್ಕೆ ಏರಿಸಲಾಗುವುದು.
3. ಕೃಷಿ ಸಾಲದ ಮೂರು ತಿಂಗಳ ಕಂತುಗಳ ವಸೂಲಿಗೆ ತಾತ್ಕಾಲಿಕ ತಡೆ ನೀಡಲಾಗಿದೆ.

ಜಗತ್ತಿನಾದ್ಯಂತ ಕೃಷಿ ಬೆಂಬಲಕ್ಕೆ ಕೊಡಲಾಗಿರುವ ಪ್ಯಾಕೇಜುಗಳ ಹೋಲಿಕೆಯಲ್ಲಿ ಮತ್ತು ನೈಜ ಅಗತ್ಯತೆಗಳನ್ನು ಪರಿಗಣಿಸಿದರೆ ಈ ಕ್ರಮಗಳು ಏನೇನೂ ಸಾಲವು. ಇದರಲ್ಲಿ ಎರಡನೆಯದಂತೂ ಈಗಾಗಲೇ ಇರುವ ಯೋಜನೆಯಷ್ಟೇ ಹೊಸ ಪ್ಯಾಕೇಜೇನಲ್ಲ. ಇದನ್ನು ಯು.ಎಸ್. ನ 2350 ಕೋಟಿ ಡಾಲರಿನ ಕೃಷಿ ಪ್ಯಾಕೇಜಿನೊಂದಿಗೆ ಹೋಲಿಸಿ ನೋಡಬಹುದು.

ಈ ಕೆಳಗಿನ ತಕ್ಷಣ ಕ್ರಮಗಳ ಅಗತ್ಯವಿದೆ

1. ಪ್ರಧಾನ ಮಂತ್ರಿ–ಕಿಸಾನ್ ಯೋಜನೆಯ ಮೂಲಕ ರೈತರಿಗೆ ಕೊಡಬೇಕಾದ ಹಣವನ್ನು ವಾರ್ಷಿಕ ರೂ. 12 ಸಾವಿರಕ್ಕೆ ಏರಿಸಬೇಕು. ಅದರ ಅರ್ಧ ಭಾಗ ಅಂದರೆ ರೂ. 6 ಸಾವಿರ ತಕ್ಷಣ ಪಾವತಿ ಮಾಡಬೇಕು. ಇದರಲ್ಲಿ ಗೇಣಿದಾರ ರೈತರನ್ನು ಸೇರಿಸಬೇಕು.
2. ಕೊವಿದ್–19 ಮಹಾಮಾರಿಯಿಂದ ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ಕೊಡಲು ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನಾವನ್ನು ಇದಕ್ಕಾಗಿ ವಿಸ್ತರಿಸಬೇಕು.
3. ರೇಗಾಕಾರ್ಮಿಕರಿಗೆ ವರ್ಷಕ್ಕೆ 100 ದಿನಗಳ ಕೆಲಸದ ಆಧಾರದ ಮೇಲೆ ಕನಿಷ್ಟ ಅದರ ಕೂಲಿಯ ಅರ್ಧದಷ್ಟು ಸಿಗುವಂತೆ ನಿರುದ್ಯೋಗ ಭತ್ಯೆ ಕೊಡಬೇಕು.
4. ಎಲ್ಲ ಮನೆಗಳಿಗೂ ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೆ.ಜಿ.ಯಂತೆ ಆಹಾರ ಧಾನ್ಯಗಳನ್ನು ವಿತರಿಸಬೇಕು.
5. ಹಳ್ಳಿಗಳಲ್ಲಿ ವಲಸೆ ಕಾರ್ಮಿಕರಿಗೆ ಆಹಾರ, ಆಶ್ರಯ ಮತ್ತು ಬಟ್ಟೆ ಕೊಡಬೇಕು. ಅವರಿಗೆ ಸಿದ್ಧ ಆಹಾರ ಕೊಡಲು ವ್ಯವಸ್ಥೆ ಮಾಡಬೇಕು.
6. ಎಲ್ಲಾ ಬೆಳೆ ಸಾಲಗಳ ಬಡ್ಡಿ ಮನ್ನಾ ಮಾಡಿ, 2020 ಖಾರಿಫ್ ಬೆಳೆಗೆ ಸಣ್ಣ ಮತ್ತು ಬಡ ರೈತರಿಗೆ ಹೊಸ ಸಾಲ ಸಿಗುವಂತೆ ವ್ಯವಸ್ಥೆ ಮಾಡಬೇಕು.
7. ಕನಿಷ್ಟ ಬೆಂಬಲ ಬೆಲೆಯನ್ನು ಸ್ವಾಮಿನಾಥನ್ ಕಮಿಶನ್ ಶಿಫಾರಸಿನಂತೆ ಸಿ2 ವೆಚ್ಚದ ಒಂದುವರೆ ಪಟ್ಟಿಗೆ ಏರಿಸಬೇಕು. ಖರೀದಿಯನ್ನು ಗನಾರ್ಹವಾಗಿ ವಿಸ್ತರಿಸಬೇಕು.
8. ಬಿಕ್ಕಟ್ಟು 2 ತಿಂಗಳುಗಳಿಗಿಂತ ಹೆಚ್ಚು ಮುಂದುವರೆದರೆ, ಆವಶ್ಯಕ ಆಹಾರ ವಸ್ತುಗಳ ಖರೀದಿ ಮತ್ತು ಪೂರೈಕೆಯ (ಟ್ರಕ್ಕುಗಳು, ಗೊಡೌನುಗಳು, ಮಾರಾಟ ಇತ್ಯಾದಿ) ದೊಡ್ಡ ಭಾಗವನ್ನು ಸರಕಾರ ಖಾಸಗಿಯವರಿಂದ ವಹಿಸಿಕೊಳ್ಳಬೇಕು. ●

ಬಂಡವಾಳವಾದವೆಂಬ ಕೊರೋನಾ ಜಾಡ್ಯ.... ಪುಟ 6 ರಿಂದ

ಆಫ್ಘಾನಿಸ್ತಾನ, ದಕ್ಷಿಣ ಆಫ್ರಿಕ ಮುಂತಾದ ದೇಶಗಳಲ್ಲಿ ಯುದ್ಧಗಳ ಮೂಲಕ ಆರ್ಥಿಕ ಉದಾರವಾದವನ್ನು ನುಗ್ಗಿಸಿದ್ದು ಈ ತಂತ್ರವನ್ನು ಬಳಸಿಯೇ. ಈ ತಂತ್ರಕ್ಕೆ ಆಧಾರ, ಮನುಷ್ಯ ಪ್ರಜ್ಞೆಯ ಮೇಲೆ ಕ್ಯಾಮರಾನ್ ಎಂಬ ವಿಜ್ಞಾನಿ ನಡೆಸಿದ ವಿಸ್ಮೃತಿ–ಸ್ಮೃತಿ ಸಂಬಂಧದ, ಸಿಐಎ ಪ್ರಾಯೋಜಿತ ಪ್ರಯೋಗಗಳು ಮತ್ತು ಬಂಡವಾಳಶಾಹೀ ಪದ್ಧತಿಯ ಸಮರ್ಥಕನಾಗಿ ಮಿಲ್ಟನ್ ಫ್ರೀಡ್‌ಮನ್ ಪ್ರತಿಪಾದಿಸಿದ ನೀತಿ–ತಂತ್ರಗಳು. ಇವುಗಳಲ್ಲಿ, ಆರ್ಥಿಕ ಬೇಹುಗಾರಿಕೆ, ವ್ಯೂಹಾತ್ಮಕ ತಂತ್ರಗಳು, ರಹಸ್ಯ ಮಿಲಿಟರಿ ಯೋಜನೆ– ಸೈನಿಕ ಕಾರ್ಯಾಚರಣೆ ಪೂರ್ಣರೂಪದ ಆಕ್ರಮಣಕಾರಿ ಯುದ್ಧ, ಎಲ್ಲವೂ ಸೇರಿವೆ.

ಜನಸಾಮಾನ್ಯರ ಪಾಲಿಗೆ 'ನವ ಕೊರೋನಾ ವೈರಸ್ 19 ಹುಟ್ಟಿಸಿರುವ ನರಳಿಕೆಗಳು ಚೀನಾ ಮತ್ತು ಅಮೆರಿಕಾ ದೇಶಗಳ ನಡುವೆ ನಡೆಯುತ್ತಿರುವ 'ವ್ಯಾಪಾರ ಯುದ್ಧದ' ಭಾಗವಾಗಿ, ಉದ್ದೇಶ ಪೂರ್ವಕವಾಗಿ ಬಳಸಿರುವ, 'ಮಾನವ ನಿರ್ಮಿತ ಜೈವಿಕ ಅಸ್ತ್ರ'ದ ಸಂಚುಗಳೆಂದು ಆರೋಪಿಸುವವರು, ವಾದಿಸುವವರು ಎರಡೂ ದೇಶಗಳ ಪರ–ವಿರೋಧದ ಎರಡು ಬಣಗಳಲ್ಲೂ ಇದ್ದಾರೆ.

ಆದರೆ ಕೊರೋನಾ ಸಾಂಕ್ರಾಮಿಕವು ಕಾಣಿಸಿಕೊಂಡು ಹರಡುತ್ತಿರುವುದರ ಹಿಂದೆ ಅಂಥ ಯಾವ ಸಂಚುಗಳೂ ಇಲ್ಲವೆಂದು ಸ್ಪಷ್ಟ ಮಾತುಗಳಲ್ಲಿ ವಿಜ್ಞಾನಿಗಳು, ವೈಚಾರಿಕರು ಪದೇ ಪದೇ ಹೇಳುತ್ತಲೇ ಇದ್ದಾರೆ. ಈಗ ರಾಷ್ಟ್ರೀಯತೆ, ತಾತ್ವಿಕತೆ, ವರ್ಗ, ಜಾತಿ–ಮತಗಳ ಭೇದಗಳನ್ನು ಮೀರಿ ಜಾಗತಿಕವಾಗಿ ಹರಡುತ್ತಿರುವ ಕೋವಿಡ್ ತಾನೇ 'ಒಂದು ದೊಡ್ಡ ನೈಸರ್ಗಿಕ ಷಾಕ್' ಎನ್ನುತ್ತಾರೆ, ನೋಮಿ ಕ್ಲೀನ್. ಆದರೆ, ಇಂಥ ನೈಸರ್ಗಿಕ ಅನಾಹುತಗಳನ್ನೂ ಸಹ ತಮ್ಮ ಫ್ಯಾಸಿಸ್ಟ್–ಬಲಪಂಥೀಯ ಉದ್ದೇಶಗಳನ್ನು ಸಾಧಿಸಲು 'ಷಾಕ್ ಡಾಕ್ಟ್ರಿನ್' ವ್ಯೂಹವಾಗಿ ಬಂಡವಾಳಶಾಹಿಗಳು ಬಳಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಇದು 'ಕೊರೋನಾ ಕ್ಯಾಪಿಟಲಿಸಂ' ಆಗಿದೆ ಎಂದು ನೋಮಿ ಕ್ಲೀನ್ ಹೇಳುತ್ತಾರೆ.

ಕೊರೋನಾ ಪೀಡೆಯು ಸಾಂಕ್ರಾಮಿಕ ವ್ಯಾಧಿಯಾಗಿ ಎಲ್ಲರಿಗೂ ಒಂದೇ ಆಗಿದ್ದರೂ, ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳಲ್ಲಿ ಶ್ರಮಿಕರಿಗೆ ಮತ್ತು ಬಂಡವಾಳಶಾಹಿಗಳಿಗೆ ಬೇರೆ ಬೇರೆಯಾಗಿದೆ. ಮಧ್ಯಮ ವರ್ಗಗಳಿಗಿರುವ ಮೂಲ ಸೌಲಭ್ಯಗಳು ಕೆಳವರ್ಗಗಳಿಗೆ ಇಲ್ಲ. 'ಮನೆಯಲ್ಲೇ ಇರಿ, ಹೊರಗೆ ಬರಬೇಡಿ' ಎಂಬ ತಾಕೀತು, ಉಳ್ಳವರಿಗೆ ಅನ್ವಯವಾಗುವಂತೆ ಎಲ್ಲೆಲ್ಲಿಂದಲೋ ವಲಸೆ ಬಂದು, ಜೋಪಡಿಗಳಲ್ಲಿ ಹೇಗೋ ಬದುಕುವ ವಸತಿಹೀನರಿಗೆ, ವಲಸೆ ಶ್ರಮಿಕರಿಗೆ ಅನ್ವಯವಾಗುವುದು ಸಾಧ್ಯವಿಲ್ಲ. 'ಆಹಾರ ಧಾನ್ಯಗಳ ಕೊರತೆ ಇಲ್ಲ, ಜೀವನಾಧಾರ ವಸ್ತುಗಳ ಕೊರತೆಯಿಲ್ಲ, ಹೆದರಬೇಡಿ' ಎಂಬ ಆಶ್ವಾಸನೆಗಳು, ಭದ್ರ ಆದಾಯ, ಸಂಚಿತ ಹಣ, ಬ್ಯಾಂಕ್ ಖಾತೆ, ಕಾರ್ಡುಗಳನ್ನು ಹೊಂದಿರುವ ಜನರಿಗೆ ಕೊಡುವ ಆರ್ಥಿಕ ಭದ್ರತೆಗಳು, ಅಂದಂದೇ ದುಡಿದು ತಿನ್ನಬೇಕಾದ ಅನಿವಾರ್ಯತೆ ಇರುವ ಬಹುಸಂಖ್ಯಾತ ಕಾರ್ಮಿಕರಿಗೆ, ಬೀದಿಬದಿಯ ವ್ಯಾಪಾರಿಗಳಿಗೆ ಯಾವ ಅರ್ಥವನ್ನೂ ಕೊಡುವುದಿಲ್ಲ. ದೇಶ ವಿದೇಶಗಳಲ್ಲಿ ಅತಂತ್ರರಾಗಿ ಪರಿತಪಿಸುತ್ತಿದ್ದ ಮೇಲು ವರ್ಗದ ಜನರನ್ನು ಕರೆತರಲು ವಿಮಾನಗಳನ್ನು ಒದಗಿಸಿದ ಬಂಡವಾಳವಾದೀ ಸರ್ಕಾರಗಳು, ನೂರಾರು ಮೈಲಿಗಳಾಚೆ ಇರುವ ತಮ್ಮ ಜನರನ್ನು ಸೇರಿಕೊಳ್ಳಲು ಹೆಂಗಸರು–ಮಕ್ಕಳೊಂದಿಗೆ ಕಾಲ್ನಡಿಗೆಯಲ್ಲೇ ಹೊರಟ ಬಡಜನರಿಗೆ ವಿಶೇಷ ರೈಲು–ಬಸ್ಸುಗಳನ್ನು ಓಡಿಸಲು ಹಿಂದೆಗೆದವು. ಕಾಯಿಲೆ ಹರಡುವ ಭಯ, ಉದ್ಯೋಗಪತಿಗಳ ಸೇವೆ ಮಾಡಲು ಜನರಿರುವುದಿಲ್ಲವೆಂಬ ಆತಂಕಗಳೂ ಸಹ ಆಳುವವರ ಮನುಷ್ಯತ್ವವನ್ನು ಬಡಿದೆಬ್ಬಿಸುವಲ್ಲಿ ವಿಫಲವಾದವು. ಸಾಕಷ್ಟು ವಿವೇಚನೆ–ಮುಂದಾಲೋಚನೆಗಳಿಲ್ಲದೆ ಸಿನಿಮೀಯ ರೀತಿಯಲ್ಲಿ ಘೋಷಿಸಿದ 'ಲಾಕ್‌ಡೌನ್' ನಿಂದಾಗಿ ಬೆಳೆದ ಫಸಲನ್ನು ಮಾರುಕಟ್ಟೆಗೆ ಸಾಗಿಸಲಾಗದ ರೈತರು, ಹಸಿವಿನಿಂದ ಕಂಗೆಟ್ಟ ಮಕ್ಕಳು ಪ್ರಾಣ ಕಳೆದುಕೊಳ್ಳಬೇಕಾಯಿತು. ಇವು ಸಾಲದೆಂಬಂತೆ ಐಡಿಯಾಲಜಿ ಮತ್ತು ಧಾರ್ಮಿಕ ಶ್ರದ್ಧೆಗಳ ಸಂಬಂಧದ ದ್ವೇಷ–ಪೂರ್ವಗ್ರಹಗಳನ್ನು ಜನರಮಧ್ಯೆ ಹರಡುವ ಯತ್ನಗಳಲ್ಲಿ ರಾಜಕಾರಣಿಗಳೊಂದಿಗೆ ಸುದ್ದಿ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳ ಬರಹಗಳು ಕೈಜೋಡಿಸುತ್ತಲೇ ಇವೆ.

ಸಮಾಜವಾದದ ಕೇಂದ್ರದಲ್ಲಿರುವುದೇ ಸಹೋದರತೆ ಸಾರ್ವಜನಿಕ ಹಿತ, ಮತ್ತು ಮಾನವೀಯತೆಗಳು. ಅದರಲ್ಲೂ ಕಷ್ಟಕಾಲದಲ್ಲಿ ಸಹಜವಾಗಿ ವ್ಯಕ್ತವಾಗುವ ಬಂಧುತ್ವ, ಸಹಾನುಕಂಪ, ಮತ್ತು ಸಹಾಯಬುದ್ಧಿಗಳ ಹಿಂದೆ ಸಮುದಾಯದ ಹಿತವಿರುತ್ತದೆಯೇ ಹೊರತು ಲಾಭದೃಷ್ಟಿಯಲ್ಲ. ಆದರೆ, ಬಂಡವಾಳವಾದ ಹಾಗಲ್ಲ. ಖಾಸಗಿತನ, ಸ್ವಾರ್ಥಕೇಂದ್ರಿತ ನೆಮ್ಮದಿ, ಲಾಭಬಡುಕತನವೇ ಬಂಡವಾಳವಾದದ ಎಲ್ಲ ಕ್ರಿಯೆಗಳ ಪರಮಾರ್ಥ. 'ಬಲಿಷ್ಠರಿಗೇ ಬದುಕುವ ಹಕ್ಕು' ಎಂಬ ಮೃಗನ್ಯಾಯವನ್ನು ಬದುಕಿನ ತಳಹದಿಯನ್ನಾಗಿ ಬಂಡವಾಳವಾದವು ಮಾಡಿಕೊಂಡಿದೆ. ಇದೇನೂ ಹೊಸದಾಗಿ ಕಂಡುಕೊಂಡ ಸತ್ಯವಲ್ಲ. ಈ ನಗ್ನಸತ್ಯವನ್ನು ಕೋವಿಡ್ ಈಗ ಮತ್ತೊಮ್ಮೆ ಬಯಲುಗೊಳಿಸಿದೆ ಅಷ್ಟೆ.

ಸಂಘಪರಿವಾರದ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದಲೂ, ತನ್ನ ಜನವಿರೋಧೀ ನೀತಿಗಳನ್ನು ನಾಲ್ಕು ವಿಧಾನಗಳಲ್ಲಿ ಅನುಷ್ಠಾನಗೊಳಿಸುತ್ತಿದೆ. ಅವೆಂದರೆ, ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಖಾಸಗೀಕರಣ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಡಿಜಿಟಲೀಕರಣ, ಎಲ್ಲ ಸ್ತರಗಳಲ್ಲಿನ ಅಧಿಕಾರದ ಕೇಂದ್ರೀಕರಣ, ಮತ್ತು ಎಲ್ಲ ಸಾಂವಿಧಾನಿಕ ಸಂಸ್ಥೆಗಳ ಕೇಸರೀಕರಣ. ಕೋವಿಡ್ ರೋಗದ ವಿರುದ್ಧ ಪ್ರಕಟಿಸಲಾಗುತ್ತಿರುವ ಪರಿಹಾರ ಕಾರ್ಯಗಳ ಹಿಂದೆಯೂ ಸಹ ಈ ನಾಲ್ಕೂ ವಿಧಾನಗಳ ಬಳಕೆ ಎದ್ದುಕಾಣುತ್ತದೆ.

ಕೋವಿಡ್ ಜಾಡ್ಯವನ್ನು ಹಿಮ್ಮೆಟ್ಟಿಸುವ ಹೆಸರಿನಲ್ಲಿ ಇಡೀ ದೇಶದ ಬೆನ್ನೆಲುಬಾದ ಕಾರ್ಮಿಕರನ್ನು ಉದ್ದಿಮೆದಾರರ ಮುಂದೆ ಕೈಚಾಚಿ ನಿಂತ ಭಿಕ್ಷುಕರ ಸ್ಥಿತಿಗೆ ಇಳಿಸಲಾಗಿದೆ.

ವಿವಿಧ ರಾಜ್ಯಗಳ ಒಕ್ಕೂಟದ ವ್ಯವಸ್ಥೆಯಾದ ಭಾರತ ಈಗ ಏಕವ್ಯಕ್ತಿಯ ಹಿಡಿತದಲ್ಲಿರುವಂತೆ ಕಾಣಿಸುತ್ತಿದೆ. ರಾಷ್ಟ್ರೀಯ ಸರ್ಕಾರ ಎಂದರೆ ಕೇಂದ್ರದಲ್ಲಿರುವ ಸರ್ಕಾರ ಎಂಬ ಅರ್ಥ ಬರುವಂತಾಗಿದೆ.

ಸಣ್ಣ ವ್ಯಾಪಾರಿಗಳು ಬಳಸುತ್ತಿದ್ದ ಸಾರ್ವಜನಿಕ ಭೂಮಿ. ಕಟ್ಟಡ ಮತ್ತು ಮಾರುಕಟ್ಟೆ ಮಾಳಗಳನ್ನು ಕೋವಿಡ್ ಸಾಂಕ್ರಾಮಿಕದ ಸಂದರ್ಭವನ್ನು ಬಳಸಿಕೊಂಡು ತೆರವುಗೊಳಿಸಲಾಗುತ್ತಿದೆ.

ನಗರ ಪ್ರದೇಶಗಳಲ್ಲಿ ದುಡಿಯುವ ದಾರಿಗಳೆಲ್ಲವೂ ಮುಚ್ಚಿ ದೊಡ್ಡ ಪ್ರಮಾಣದಲ್ಲಿ ಸ್ವಗ್ರಾಮಗಳಿಗೆ ಗುಳೇ ಹೊರಟ ವಲಸೆ ಕಾರ್ಮಿಕರು ತಮ್ಮ ಜೋಪಡಿಗಳನ್ನು ತೆರವು ಮಾಡುತ್ತಿದ್ದಂತೆಯೇ ಭೂಮಾಫಿಯಾ ಶಕ್ತಿಗಳು ಆ ಸ್ಥಳಗಳನ್ನು ತಮ್ಮ ವಶಕ್ಕೆ ಪಡೆಯುತ್ತಿದ್ದಾರೆ.

ದೇಶದ ಗಂಭೀರ ಸಮಸ್ಯೆಯಾಗಿರುವ, ಬಡತನ, ನಿರುದ್ಯೋಗಗಳು ಈಗ ಕೋವಿಡ್ ಭಯದಲ್ಲಿ ಹೂತುಹೋಗಿದೆ.

ಆರ್ಥಿಕ ಹಿಂಜರಿಕೆ– ಹಣಕಾಸಿನ ಬಿಕ್ಕಟ್ಟುಗಳು, ಹಣದುಬ್ಬರ, ಉದ್ದಿಮೆದಾರರ ಭಾರೀಸಾಲದ ದರೋಡೆಗಳಿಂದಾದ ಬ್ಯಾಂಕುಗಳ ದಿವಾಳಿ, ಉತ್ಪಾದನೆಯ ಕುಸಿತ, ಬೆಲೆಯೇರಿಕೆ, ಹೀಗೆ ಬಂಡವಾಳಶಾಹಿಯ ನೇರ ಪರಿಣಾಮಗಳಾದ ಎಲ್ಲ ಸಮಸ್ಯೆಗಳೂ ಈಗ ಕೋವಿಡ್ ಹೆಸರನ್ನು ಧರಿಸಿಕೊಂಡಿವೆ.


ಇವೆಲ್ಲದರ ಒಟ್ಟು ಪರಿಣಾಮ, ಬಂಡವಾಳಶಾಹಿಯೇ ಜಾಗತಿಕ ಮಟ್ಟದ ಅತ್ಯಂತ ದೊಡ್ಡ ಸಾಂಕ್ರಾಮಿಕ ಜಾಡ್ಯ ಎಂಬ ಸತ್ಯ ಭಯಗ್ರಸ್ತ ಸಮುದಾಯಗಳ ಸಮಷ್ಟಿ ಪ್ರಜ್ಞೆಗೆ ಅರಿವಾಗುತ್ತಿಲ್ಲ. ಸಮಾಜವಾದೀ ಸಂಘಟನೆಗಳು ಪ್ರಗತಿಪರ ಮತ್ತು ಜನಪರವಾದ ಸಂಘಟನೆಗಳೊಂದಿಗೆ ಕೈಗೂಡಿಸಿ ವಸ್ತುಸ್ಥಿತಿಯ ಅರಿವನ್ನು ಮೂಡಿಸದಿದ್ದರೆ, ಜನರ ಬದುಕಿನಲ್ಲಿ ಕೋವಿಡ್ ಸೃಷ್ಟಿಸಿರುವ ದಿಗ್ಮೂಢತೆಯು ಬಂಡವಾಳವಾದ, ಸರ್ವಾಧಿಕಾರ ಮತ್ತು ಫ್ಯಾಸಿಸಂಗಳ ಹೊಸ ರೂಪಗಳ ಹುಟ್ಟಿಗೆ ದಾರಿಮಾಡಿಕೊಡಬಹುದು. ನವಕೋವಿಡ್‌ಗಿಂತಲೂ ಅನೇಕಪಟ್ಟು ವಿಧ್ವಂಸಕಕಾರಿಯಾದ ನವ ಆರ್ಥಿಕ ನೀತಿಗಳ ರಾಜಕೀಯವು ದೇಶೀಯವಾಗಿ ಮತ್ತು ಜಾಗತಿಕವಾಗಿ ಜನರನ್ನು ಕಾಡಬಹುದು. ●

ಶತಮಾನೋತ್ಸವ ಲೇಖನ ಮಾಲೆ-21


ಕಯ್ಯೂರು ಹುತಾತ್ಮರು: ಪ್ರಕಾಶಮಾನವಾಗಿ ಹೊಳೆಯುವ ತಾರೆಗಳು

ಭಾರತದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ, ಬಡ ರೈತ ಕುಟುಂಬದಲ್ಲಿ ಹುಟ್ಟಿದ ನಾಲ್ವರು ಎಳೆ ವಯಸ್ಸಿನ ಕಮ್ಯುನಿಸ್ಟರು, ಮದತ್ತಿಲ್ ಅಪ್ಪು, ಕುಜಂಬು ನಾಯರ್, ಚಿರುಕುಂಡನ್ ಮತ್ತು ಅಬೂಬಕರ್ ಮಾರ್ಚ್ 29, 1943ರಂದು ಗಲ್ಲಿಗೇರಿದರು. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಅಜೇಯ ಸೇನೆಯನ್ನು, ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಅವರು ನಿಜವಾದ ದೇಶಪ್ರೇಮಿಗಳಾಗಿ ಬದುಕಿದರು, ತಮ್ಮ ತುಟಿಯ ಮೇಲೆ 'ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ' ಎಂಬ ಘೋಷಣೆಯೊಂದಿಗೆ ಉದಾತ್ತ ಹುತಾತ್ಮರಾಗಿ ಮಡಿದರು. ಈ ಕಯ್ಯೂರಿನ ನಾಲ್ವರ ರಾಜಕೀಯ ಪರಿಪಕ್ವತೆ ಮತ್ತು ಸ್ಥೈರ್ಯ ಅಸಾಧಾರಣವಾಗಿತ್ತು.


ಮದತ್ತಿಲ್ ಅಪ್ಪು


ಅಬೂಬಕರ್


ಚಿರುಕುಂಡನ್


ಕುಜಂಬು ನಾಯರ್

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಕಮ್ಯುನಿಸ್ಟರ ನೇತೃತ್ವದ ಕ್ರಾಂತಿಕಾರಿ, ಸಾಮ್ರಾಜ್ಯಶಾಹಿ–ವಿರೋಧಿ ಚಳುವಳಿಯ ಅವಿಭಾಜ್ಯ ಅಂಗ ಈ ಕಯ್ಯೂರು ಹುತಾತ್ಮರ ಧೀರೋದಾತ್ತ ವೀರಗಾಥೆ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿರುವ ಅಂದಿನ ಕಣ್ಣೂರು ಜಿಲ್ಲೆಗೆ ಹೊಂದಿಕೊಂಡಿರುವ ಒಂದು ಪುಟ್ಟ ಹಳ್ಳಿಯೇ ಈ ಕಯ್ಯೂರು. ಅದು ಮದ್ರಾಸ್ ಪ್ರಾಂತ್ಯದ ಮಲಬಾರ್ ಪ್ರದೇಶದ ಭಾಗವಾಗಿತ್ತು. ಈಗ ಕಯ್ಯೂರು ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಇದೆ.

ಕಯ್ಯೂರು ಕಮ್ಯುನಿಸ್ಟರೆಂದು ಜನಪ್ರಿಯರಾದ ಮದತ್ತಿಲ್ ಅಪ್ಪು, ಕುಜಂಬು ನಾಯರ್, ಚಿರುಕುಂಡನ್, ಅಬೂಬಕರ್ ಈ ನಾಲ್ಕು ಯುವ ಕಮ್ಯುನಿಸ್ಟ್ ದೇಶಪ್ರೇಮಿಗಳನ್ನು 1943ರ ಮಾರ್ಚ್ 29 ರಂದು ಗಲ್ಲಿಗೇರಿಸಲಾಯಿತು. ಅವರೆಲ್ಲರೂ 25ವರ್ಷ ವಯಸ್ಸಿನೊಳಗಿನವರಾಗಿದ್ದರು, ಆದರೆ ಆ ಹಳ್ಳಿಯ ಜನಪ್ರಿಯ ಮುಖಂಡರಾಗಿದ್ದರು. ಅವರು ಕಿಸಾನ್ ಸಭಾ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಮತ್ತು 1938–41ರ ಅವಧಿಯಲ್ಲಿ ಆ ಜಿಲ್ಲೆಯಲ್ಲಿನ ಜೆನ್ಮಿಗಳು(ಜಮೀನುದಾರರು) ಮತ್ತು ಸರ್ಕಾರದ ದಾಳಿ ದಬ್ಬಾಳಿಕೆಗಳ ವಿರುದ್ಧ ಒಂದು ವೀರೋಚಿತ ರೈತ ಚಳುವಳಿಯನ್ನು ಕಟ್ಟಿದ್ದರು. ಪೋಲಿಸರು ಆ ಯುವಕರ ದೇಶಪ್ರೇಮವನ್ನು ದ್ವೇಷಿಸುತ್ತಿದ್ದರೆ, ರೈತರನ್ನು ಬಡಿದೆಬ್ಬಿಸಿ ಕ್ರಿಯಾಶೀಲರನ್ನಾಗಿ ಮಾಡಿದ್ದಕ್ಕೆ ಜಮೀನುದಾರರು ಅವರನ್ನು ದ್ವೇಷಿಸುತ್ತಿದ್ದರು.

ಆ ತಾಲೂಕಿನ ರೈತರಿಗೆ ಗೇಣಿ ಹಕ್ಕು ಇರಲಿಲ್ಲ ಮತ್ತು ಅವರನ್ನು ತಲೆ ಎತ್ತದಂತೆ ತುಳಿಯಲಾಗಿತ್ತು. ವಿಶ್ವ ಯುದ್ಧ ಆರಂಭವಾಗಿತ್ತು ಮತ್ತು ಅದನ್ನು ಕಮ್ಯುನಿಸ್ಟರು ವಿರೋಧಿಸುತ್ತಿದ್ದರಿಂದ ಬ್ರಿಟಿಷರ ಕ್ರೌರ್ಯ ಅವರ ಮೇಲೆ ಇನ್ನೂ ತೀವ್ರವಾಗಿತ್ತು. ಮಲಬಾರ್ ವಿಶೇಷ ಪೋಲಿಸರ ತುಕಡಿಯೊಂದು ಆ ಪ್ರದೇಶದಲ್ಲಿ ಬೀಡು ಬಿಟ್ಟಿತ್ತು. ಮನೆ ತಪಾಸಣೆ ಮಾಡುವ ನೆಪವೊಡ್ಡಿ ಪೋಲಿಸರು ಅವುಗಳ ಲೂಟಿ ಮಾಡಿದ್ದರು. ವಿಚಾರಣೆಯ ಹೆಸರಿನಲ್ಲಿ ರೈತಾಪಿ ಜನರನ್ನು ಹಿಡಿದು ಬಡಿದರು. ಈ ದರ್ಪ–ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಲು 1941ರ ಮಾರ್ಚ್ 28ರಂದು ಕಯ್ಯೂರಿನಲ್ಲಿ ಒಂದು ಮತಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಮೆರವಣಿಗೆ ಬರುತ್ತಿರುವಾಗ ಆ ಹಳ್ಳಿಯಲ್ಲಿ ನೇಮಕವಾಗಿದ್ದ ಪೋಲಿಸನೊಬ್ಬ ಅಡ್ಡ ಬಂದು ಮುಸ್ಲಿಂ ರೈತ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ. ಅಲ್ಲಿ ಸೇರಿದ್ದ ರೈತರು ಅವನಿಗೆ ಕಲ್ಲಿನಿಂದ ಹೊಡೆದರೆಂದು ಮತ್ತು ಓಡಿದ ಅವನನ್ನು ಹಿಂಬಾಲಿಸಿದರೆಂದು, ಆಗ ಆ ಪೋಲಿಸ್ ನದಿಗೆ ಹಾರಿ ಸತ್ತನೆಂದು ಹೇಳಲಾಯಿತು. ಈ ಕಾರಣಕ್ಕಾಗಿ ಆ ಸಂಗಾತಿಗಳನ್ನು ನೇಣುಗಂಬಕ್ಕೆ ಏರಿಸಲಾಯಿತು.

ಇಂತಹ ಘಟನೆಗಳಲ್ಲಿ ತಪ್ಪಿತಸ್ಥರು ಯಾರು ಎಂದು ಗುರುತಿಸುವುದು ಕಷ್ಟ ಎಂದು ನ್ಯಾಯಾಲಯದ ನ್ಯಾಯಾಧೀಶರು ಒಪ್ಪಿಕೊಂಡರು. ತಿಂಗಳುಗಟ್ಟಲೆ ಪೋಲಿಸರು ಹೇಳಿಕೊಟ್ಟಿದ್ದರೂ ಸಹ ಸಾಕ್ಷಿಗಳು ಸುಸಂಬದ್ಧವಾಗಿ ಸಾಕ್ಷ್ಯ ಹೇಳುವಲ್ಲಿ ವಿಫಲರಾದರು. ಅವರ ಪುರಾವೆಗಳಲ್ಲಿ ಹಲವಾರು ವಿರೋಧಾಭಾಸದ ಹೇಳಿಕೆಗಳಿದ್ದವು, ಹಾಗಾಗಿ ಆ ಪ್ರಕರಣ ನಿಲ್ಲುವುದಿಲ್ಲ ಎಂದು ಎಲ್ಲರೂ ಭಾವಿಸಿದರು. ಇಷ್ಟೆಲ್ಲಾ ಸತ್ಯಾಂಶಗಳು ಇರುವಾಗಲೂ, ನ್ಯಾಯಾಧೀಶರು ಅವರಿಗೆ ಶಿಕ್ಷೆ ವಿಧಿಸಿ ನಾಲ್ವರಿಗೂ ಮರಣ ದಂಡನೆಯ ತೀರ್ಪನ್ನಿತ್ತರು. ಪಕ್ಷವು ತನ್ನೆಲ್ಲಾ ಪ್ರಯತ್ನಗಳನ್ನು ಮಾಡಿ ಮೇಲಿನ ನ್ಯಾಯಾಲಯಗಳಲ್ಲಿ ಮನವಿ ಸಲ್ಲಿಸಿದ್ದಾಗ್ಯೂ ಅವು ತಿರಸ್ಕರಿಸಲ್ಪಟ್ಟವು.

ಈ ಕಯ್ಯೂರಿನ ನಾಲ್ವರ ರಾಜಕೀಯ ಪರಿಪಕ್ವತೆ ಮತ್ತು ಸ್ಥೈರ್ಯ ಅಸಾಧಾರಣವಾಗಿತ್ತು. ಪಕ್ಷಕ್ಕೆ ಮತ್ತು ತಾಯಿನಾಡಿನ ವಿಮೋಚನೆಗಾಗಿ ಅದರ ಹೋರಾಟಕ್ಕೆ ತಮ್ಮ ಅದಮ್ಯ ನಿಷ್ಠೆಯನ್ನು ಘೋಷಿಸಿ ಅವರು ಅನೇಕ ಪತ್ರಗಳನ್ನು ಬರೆದಿದ್ದರು. ಅವರು ನೇಣುಗಂಬಕ್ಕೆ ಹೋಗುವ ಕೆಲವು ದಿನಗಳ ಮುಂಚೆ ಅವರು ಧೈರ್ಯೋತ್ಸಾಹಗಳನ್ನು ಬಡಿದೆಬ್ಬಿಸುವ ಪತ್ರವೊಂದನ್ನು ಜನರಿಗೆ ಬರೆದಿದ್ದರು. ಆ ಪತ್ರದ ಒಟ್ಟು ಸಾರಾಂಶ ಹೀಗಿದೆ:

"ನಮ್ಮ ಮಾಫಿ ಮನವಿಪತ್ರವು ಭಾರತದ ವೈಸ್‌ರಾಯರಿಂದಲೂ ತಿರಸ್ಕರಿಸಲ್ಪಟ್ಟಿರುವ ಮತ್ತು ನಾವು ನೇಣುಗಂಬಕ್ಕೆ ಹತ್ತಿರವಾಗುತ್ತಿದ್ದೇವೆಂಬ ಸಂಗತಿ ಇಷ್ಟೊತ್ತಿಗಾಗಲೇ ನಿಮಗೆಲ್ಲಾ ತಿಳಿದಿದೆಯೆಂದು ನಾವು ಭಾವಿಸುತ್ತೇವೆ. ಈ ತಿರಸ್ಕಾರದ ಸುದ್ದಿ ಕೇಳಿಸಿಕೊಳ್ಳಲು ನಮಗೆ ಅತ್ಯಾನಂದವಾಗಿದೆ, ಅದು ಇತರರಿಗೆ ಸಹಜವಾಗಿಯೇ ಪ್ರಿಯವಾಗದ ಸಂಗತಿ. ಈಗ ಪ್ರೀವಿ ಕೌನ್ಸಿಲ್ಲಿಗೆ ಸಲ್ಲಿಸಿದ ಮನವಿ ಮಾತ್ರ ಉಳಿದಿದೆ. ಈ ಮನವಿಯ ಅಂತಿಮ ಫಲಿತಾಂಶದ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ನಮಗೆ ಆ ತೀರ್ಪಿನ ಬಗ್ಗೆ ಆಸಕ್ತಿಯೂ ಇಲ್ಲ. ನಮ್ಮ ವ್ಯಕ್ತಿತ್ವ ನಮ್ಮದಲ್ಲ, ಏಕೆಂದರೆ ಅದು ಜಗತ್ತಿನ ಎಲ್ಲಾ ಜನರಿಗೆ ಸೇರಿದ್ದು ಎಂದು ನಾವು ನಂಬಿದ್ದೇವೆ. ನಮ್ಮ ದೇಶಕ್ಕಾಗಿ ನಾವು ಸಾಯುತ್ತಿದ್ದೇವೆ ಎಂದು ನಮಗೆ ಹೆಮ್ಮೆಯಾಗುತ್ತಿದೆ. ನಾವು ಹೇಡಿಗಳೆಂದು ತಿಳಿಯಬೇಡಿ; ನಾವು ಧೈರ್ಯವಾಗಿ ನಿಜವಾದ ದೇಶಪ್ರೇಮಿಗಳಂತೆ ಮತ್ತು ಹುತಾತ್ಮರಂತೆ ಸಾವನ್ನು ಎದುರಿಸಲು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ. ನಾವೀಗ ನೇಣುಗಂಬವನ್ನು ಅಪ್ಪಿಕೊಂಡರೆ, ನಮ್ಮ ಮುಂದಿನ ತಲೆಮಾರು ನಮ್ಮ ತ್ಯಾಗವನ್ನು ಎಂದೆಂದಿಗೂ ಹಾಡಿಹೊಗಳುತ್ತದೆ. ನಾವು ಇದನ್ನು ಒಂದು ಅಸಾಧಾರಣವಾದ ಸುಯೋಗವೆಂದು ಪರಿಗಣಿಸುತ್ತೇವೆ ಮತ್ತು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಸಾವನ್ನು ಎದುರಿಸಲು ದೊರೆತ ಅವಕಾಶವಿದೆಂದು ನಾವು ತಿಳಿಯುತ್ತೇವೆ. ಜೈಲಿನ ಕಂಬಿಗಳ ಹಿಂದೆ ನಮ್ಮ ಬದುಕಿನ ಪ್ರತಿಯೊಂದು ನಿಮಿಷವನ್ನೂ ಅತ್ಯಂತ ಸಂತೋಷದಿಂದ ನಮ್ಮ ಪವಿತ್ರ ತಾಯ್ನಾಡನ್ನು ಕೊಂಡಾಡುವ ಹಾಡುಗಳನ್ನು ಹಾಡುತ್ತಾ ಕಳೆಯುತ್ತಿದ್ದೇವೆ. ಭಗತ್‌ಸಿಂಗ್‌ನಂತಹ ದೇಶಪ್ರೇಮಿಗಳ ವೀರೋಚಿತ ಅಂತ್ಯವು ನಮಗೆ ಸ್ಫೂರ್ತಿದಾಯಕ. ಜಗತ್ತಿನ ಶ್ರಮಜೀವಿಗಳ ನಾಯಕ ಸಂಗಾತಿ ಲೆನಿನ್ ಅವರು ಝಾರ್‌ನ ಆಳ್ವಿಕೆಯನ್ನು ಕೊನೆಗೊಳಿಸಿ ಯಶಸ್ವೀ ಕ್ರಾಂತಿಯನ್ನು ಮಾಡುವ ಮುಂಚೆ ಅನುಭವಿಸಿದ ಅಸಂಖ್ಯಾತ ಕಷ್ಟನಷ್ಟಗಳನ್ನೂ ಕೂಡ ನಾವಿಲ್ಲಿ ನೆನೆಯುತ್ತೇವೆ."


ಕಯ್ಯೂರು ಹುತಾತ್ಮರಿಗೆ ನಮನ
–ಖ್ಯಾತ ಚಿತ್ರ ಕಲಾವಿದ ಚಿತ್ರಪ್ರಸಾದ್ ಅವರ ಕೃತಿ

"ಪ್ರೀವಿ ಕೌನ್ಸಿಲ್ಲಿನಲ್ಲಿ ಒಂದು ಮನವಿ ಪತ್ರವನ್ನು ಸಲ್ಲಿಸಿರುವುದಾಗಿ ಮತ್ತು ಎಲ್ಲಾ ಜನರೂ, ಬಹು ಮುಖ್ಯವಾಗಿ ಕಮ್ಯುನಿಸ್ಟ್ ಪಕ್ಷವು ತಮ್ಮ ಕೈಲಾದ ಎಲ್ಲವನ್ನೂ, ಮನುಷ್ಯ ಮಾತ್ರದವರು ಮಾಡಬಹುದಾದ ಎಲ್ಲವನ್ನೂ ನಿಮ್ಮ ಜೀವ ಉಳಿಸಲು ಪ್ರಯತ್ನ ಮಾಡುತ್ತಿರುವುದಾಗಿ ಸಂಗಾತಿ ಕುಮಾರಮಂಗಳಂ ಪತ್ರ ಬರೆದು ತಿಳಿಸಿದ್ದಾರೆ. ಇದೇ ಸುದ್ದಿಯನ್ನು ಆಗಾಗ ನಮ್ಮ ಸಂದರ್ಶನ ಮಾಡಲು ಬರುತ್ತಿರುವ ನಮ್ಮ ಕೇರಳ ಸಂಗಾತಿಗಳಿಂದಲೂ ಪಡೆಯುತ್ತಿದ್ದೇವೆ."

"ಫ್ಯಾಸಿಸಂನ್ನು ಸದೆಬಡಿಯಲು ಮತ್ತು ಬಲಿಷ್ಠರು ದುರ್ಬಲರ ಮೇಲೆ ನಡೆಸುವ ತಮ್ಮ ಆಕ್ರಮಣ ಮತ್ತು ಪ್ರಾಬಲ್ಯದಿಂದ ಭವಿಷ್ಯದ ವಿಶ್ವವನ್ನು ರಕ್ಷಿಸಲು ಹೊರಗಡೆ ಇರುವ ನಮ್ಮ ಸಂಗಾತಿಗಳು ವಿಶ್ವ ಸಂಸ್ಥೆಯ ಜನಗಳೊಂದಿಗೆ ನಮ್ಮ ಜನಗಳನ್ನೂ ಅಣಿನೆರೆಸಲು ತಮ್ಮೆಲ್ಲಾ ಶಕ್ತಿಯನ್ನು ವಿನಿಯೋಗಿಸುತ್ತಿರುವುದನ್ನು ಕೇಳಲು ನಮಗೆ ಬಹಳ ಸಂತಸವಾಗುತ್ತಿದೆ. ಜಪಾನಿ ಕ್ರೂರಿಗಳ ವಿರುದ್ಧ ಮತ್ತು ನಮ್ಮ ತಾಯ್ನಾಡಿನ ವಿಮೋಚನೆಗಾಗಿ ಹೋರಾಡುವಲ್ಲಿ ನಮ್ಮ ಪಾಲಿನ ಕೆಲಸವನ್ನು ಮಾಡಲಾಗಲಿಲ್ಲ ಎನ್ನುವ ಬೇಸರ ನಮಗಿದೆ."

"ಜೈಲಿನ ಕಂಬಿಯ ಹಿಂದಿನಿಂದ ನಮ್ಮ ಸಂಗಾತಿಗಳಿಗೆ ನಮ್ಮ ಮನಃಪೂರ್ವಕ ಪ್ರಾರ್ಥನೆ ಏನೆಂದರೆ ಅವರು ತಮ್ಮ ಕಠಿನ ಹಾಗೂ ನಿಷ್ಠಾವಂತ ಕೆಲಸಗಳ ಶಕ್ತಿಯಿಂದ ಜನರಿಗೆ ಮಾದರಿಯಾಗಬೇಕು ಮತ್ತು ಜನರಲ್ಲಿ ಧೈರ್ಯ ಮತ್ತು ಉತ್ಸಾಹಗಳನ್ನು ತುಂಬಿ ಅವರೂ ಒಗ್ಗಟ್ಟಾಗಿ ಮುಂದೆ ಬಂದು ತಮ್ಮದೆಲ್ಲವನ್ನೂ ದೇಶಕ್ಕಾಗಿ ತ್ಯಾಗ ಮಾಡುವಂತೆ ಸ್ಫೂರ್ತಿ ನೀಡಬೇಕು. ನಮಗೆ ಯಾವುದೇ ಆತಂಕ ಕಳವಳಗಳಿಲ್ಲ ಅಥವಾ ನಿರುತ್ಸಾಹಗೊಂಡಿಲ್ಲ. ನಮ್ಮ ನಾಡಿನ ಅನೇಕ ವೀರಾಧಿವೀರರು ಹುತಾತ್ಮರಾದ ಚರಿತ್ರೆಯು ನಮ್ಮ ದೇಶದ ಉದಾತ್ತ ಕಾರಣಗಳಿಗಾಗಿ ಸಾವನ್ನು ಧೈರ್ಯದಿಂದ ಎದುರಿಸಲು ನಮಗೆ ಸಾಕಷ್ಟು ಸ್ಫೂರ್ತಿಯನ್ನು ಮತ್ತು ಸಮಾಧಾನವನ್ನು ನೀಡುತ್ತದೆ. ಅಂತಿಮವಾಗಿ ಜಗತ್ತಿನ ಜನರು ಜಯ ಸಾಧಿಸುತ್ತಾರೆ ಮತ್ತು ಜಗತ್ತಿನ ಭವಿಷ್ಯವು ಕಾಂತಿಪೂರ್ಣವಾಗಿಯೂ ಹಾಗೂ ಕೀರ್ತಿದಾಯಕವಾಗಿಯೂ ಇರುತ್ತದೆ ಎಂಬ ಸಂಪೂರ್ಣ ಭರವಸೆ ನಮಗಿದೆ. ಏನೇ ಆಗಲಿ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿ, ನಮ್ಮ ರಾಷ್ಟ್ರೀಯ ವಿಮೋಚನೆಗೆ ಅದೊಂದೇ ದಾರಿ. ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ, ಇಂಕ್‌ಲಾಬ್ ಜಿಂದಾಬಾದ್"

ಅವರನ್ನು ನೇಣಿಗೆ ಹಾಕುವ ಸ್ವಲ್ಪ ದಿನಗಳ ಮುಂಚೆ, ಪಕ್ಷದ ಪ್ರಧಾನ ಕಾರ್ಯದರ್ಶಿ, ಪಿ.ಸಿ.ಜೋಶಿಯವರು ಆ ನಾಲ್ಕು ಸಂಗಾತಿಗಳನ್ನು ಭೇಟಿ ಮಾಡಿ ಇಡೀ ಪಕ್ಷದ ಪರವಾಗಿ ಶುಭಾಶಯಗಳನ್ನು ಕೋರಬೇಕೆಂದು ತೀರ್ಮಾನಿಸಲಾಗಿತ್ತು. ಅವರ ಜತೆ ಪಿ.ಸುಂದರಯ್ಯ ಹಾಗೂ ಕೃಷ್ಣ ಪಿಳ್ಳೈ ಹೋದರು, ದೇಶದೆಲ್ಲೆಡೆಯಿಂದ ಕಾರ್ಮಿಕರು ಮತ್ತು ರೈತರು ಬರೆದಿದ್ದ ಸೌಹಾರ್ದತೆಯ ಪತ್ರಗಳ ಒಂದು ದೊಡ್ಡ ಮೂಟೆಯನ್ನೇ ಕೊಂಡೊಯ್ದಿದ್ದರು.

ಅವರ ಜತೆಯಲ್ಲಿ ಮಾಡಿದ ಸಂಭಾಷಣೆಗಳನ್ನು ನೆನೆಯುತ್ತಾ ಪಿ.ಸಿ.ಜೋಷಿಯವರು ಬರೆಯುತ್ತಾರೆ:

"ಪಕ್ಷದ ಪರವಾಗಿ ನಾನು ಅವರಿಗೆ ಹೇಳಿದೆ: ತನ್ನ ಬೇರೆಲ್ಲಾ ಸದಸ್ಯರಿಗಿಂತ ನೀವು ನಾಲ್ಕು ಸಂಗಾತಿಗಳ ಬಗ್ಗೆ ಪಕ್ಷ ಹೆಮ್ಮೆಪಡುತ್ತದೆ. . . ನಾವು 17,000 ಪಕ್ಷದ ಸದಸ್ಯರೆಲ್ಲರೂ ನಿಮಗೆ ಪ್ರತಿಜ್ಞೆ ಮಾಡುತ್ತೇವೆ ನೀವ್ನುಷ್ಟೊಂದು ಸುಯೋಗ್ಯವಾಗಿ ಎತ್ತಿ ಹಿಡಿದ ಬಾವುಟವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುತ್ತೇವೆ ಮತ್ತು ನೀವು ವೀರೋಚಿತವಾಗಿ ನಡೆಸಿದ ಹೋರಾಟವನ್ನು ಮುಂದುವರಿಸುತ್ತೇವೆ . . . ಪಕ್ಷ ನಿಮ್ಮನ್ನು ಕಳೆದುಕೊಳ್ಳುತ್ತಿಲ್ಲ, ನಾಲ್ಕು ಹುತಾತ್ಮರನ್ನು ಪಡೆಯುತ್ತಿದೆ. ಅವರು ನಿಮ್ಮನ್ನು ನೇಣುಗಂಬಕ್ಕೆ ಹಾಕಲಿ, ಇವತ್ತು ಏನೂ ಮಾಡಲು ಸಾಧ್ಯವಾಗುತ್ತಿಲ್ಲ. ಆದರೆ ನಿಮ್ಮ ನಾಲ್ವರಿಂದ ಸ್ಫೂರ್ತಿ ಪಡೆದು, ನಾವು ನಾಲ್ಕು ನೂರು ಜನರನ್ನು ಪಡೆಯುತ್ತೇವೆ, ನಾಲ್ಕು ಸಾವಿರ ಜನ ಹೊಸ ಸದಸ್ಯರನ್ನು ಪಕ್ಷಕ್ಕೆ ತರುತ್ತೇವೆ. ಅವರು ಇದನ್ನು ತಡೆಯಲು ಸಾಧ್ಯವಿಲ್ಲ. ಅದಕ್ಕಾಗಿ ನಾವು ಕೆಲಸ ಮಾಡುತ್ತೇವೆ. ಸಂಗಾತಿಗಳೇ, ನಾವು ಇದನ್ನು ಗೆದ್ದೇ ಗೆಲ್ಲುತ್ತೇವೆಂದು ಭರವಸೆ ನೀಡುತ್ತೇವೆ. ನಮ್ಮ ಗುರಿ ಹೇಗೆ ಅಮರವೋ, ಅದರ ಸಾಧನ, ಪಕ್ಷ ಕೂಡ ಅಮರ. ನೀವು ಜನರನ್ನು ನಿಮ್ಮ ಪೋಷಕರೆಂದು ಒಪ್ಪಿಕೊಂಡಿರಿ ಮತ್ತು ನಿಮ್ಮ

ಪುಟ 14 ನೋಡಿ

ಆರ್ಥಿಕ ಬಿಕ್ಕಟ್ಟು ಆವರಿಸುತ್ತಿದೆ– ಸರಕಾರ ಇನ್ನೂ ಸಾಂಕೇತಿಕ ಆಚರಣೆಗಳಲ್ಲೇ ತೊಡಗಿದೆ!

*** ನಿರುದ್ಯೋಗ ದರ 8% ದಿಂದ 23% ಕ್ಕೆ ಜಿಗಿದಿದೆ!**

*** ಎರಡು ವಾರಗಳಲ್ಲಿ 5 ಕೋಟಿ ಉದ್ಯೋಗ ನಷ್ಟ !**

*** 40 ಕೋಟಿ ಕಾರ್ಮಿಕರು ಮತ್ತೆ ದಾರಿದ್ರ್ಯದ ದವಡೆಗೆ!**

*** ಲಾಕ್‌ಡೌನ್‌ನಿಂದಾಗಿಯೂ 117 ಸಾವುಗಳು!**

ಭಾರತದಲ್ಲಿ ನಿರುದ್ಯೋಗ ದರ ಮಾರ್ಚ್ ತಿಂಗಳಲ್ಲಿ 8.7ಕ್ಕೆ ಏರಿತ್ತು. ಅದು ಕಳೆದ 43 ತಿಂಗಳಲ್ಲೇ ಅತಿ ಹೆಚ್ಚಿನ ಮಟ್ಟ. ಆದರೆ ಮಾರ್ಚ್ ಅಂತ್ಯದ ವೇಳೆಗೆ ಅದು 23.8%ಕ್ಕೆ ನೆಗೆದಿದೆ ಎಂದು ಸಿಎಂಐಇ(ಭಾರತೀಯ ಅರ್ಥವ್ಯವಸ್ಥೆಯ ನಿರೀಕ್ಷಣೆಯ ಕೇಂದ್ರ) ಮುಖ್ಯ ನಿರ್ವಹಣಾಧಿಕಾರಿ ಮಹೇಶ ವ್ಯಾಸ್ ಹೇಳಿದ್ದಾರೆ(ದಿ ವೈರ್, ಎಪ್ರಿಲ್ 7).

ಇದು ಲಾಕ್‌ಡೌನ್‌ನಿಂದ ಅರ್ಥವ್ಯವಸ್ಥೆ ಸ್ಥಬ್ಧಗೊಂಡುದರ ಪರಿಣಾಮ ಎಂದು ಬೇರೆ ಹೇಳಬೇಕಾಗಿಲ್ಲ. ಸಿಎಂಐಇ ಪ್ರತಿವಾರ ಮತ್ತು ಪ್ರತಿ ತಿಂಗಳು ಉದ್ಯೋಗ–ನಿರುದ್ಯೋಗ ಕುರಿತಂತೆ ಸರ್ವೆಯ ಆಧಾರದಲ್ಲಿ ಈ ಅಂಕಿ–ಅಂಶಗಳನ್ನು ಪ್ರಕಟಿಸುತ್ತದೆ.

ನಿಜ, ಕಳೆದ ಎರಡು ವಾರಗಳಲ್ಲಿ ಲಾಕ್ ಡೌನ್‌ನಿಂದಾಗಿ ಎಂದಿನ ಪ್ರಮಾಣದಲ್ಲಿ ಸರ್ವೆ ನಡೆಸಲಾಗಲಿಲ್ಲ. ಆದರೂ ಇದು ನಿರುದ್ಯೋಗ ದರವನ್ನು ಉತ್ಪ್ರೇಕಿಸಿರುವ ಸಂಭವ ಕಡಿಮೆ. ವಾಸ್ತವವಾಗಿ ನಿರುದ್ಯೋಗ ದರ ಇನ್ನೂ ಹೆಚ್ಚಿರುವ ಸಂಭವವೇ ಜಾಸ್ತಿ. ಏಕೆಂದರೆ ಕೆಲಸ ಕಳಕೊಂಡು ಕಾಲ್ನಡಿಗೆಯಲ್ಲಿ ತಮ್ಮೂರುಗಳಿಗೆ ಸಾಗಿರುವ ವಲಸೆ ಕಾರ್ಮಿಕರ ಸಂಖ್ಯೆ ಇದರಲ್ಲಿ ಬಿಂಭಿತವಾಗಿರಲಿಕ್ಕಿಲ್ಲ ಎನ್ನುತ್ತಾರೆ ಮಹೇಶ 'ವ್ಯಾಸ್.

ಗ್ರಾಮೀಣ ನಿರುದ್ಯೋಗವೂ 8.29%ದಿಂದ ಎಪ್ರಿಲ್ 5ರ ವೇಳೆಗೆ 20.21%ಕ್ಕೇರಿದೆ ಎಂದು ಸಿಎಂಐಇ ಹೇಳಿದೆ.

ಅಂತರ್‍ರಾಷ್ಟ್ರೀಯ ಶ್ರಮ ಸಂಘಟನೆ(ಐಎಲ್‌ಒ)ಯ ವರದಿ 40 ಕೋಟಿ ಅಸಂಘಟಿತ ಕಾರ್ಮಿಕರು ದಾರಿದ್ರ್ಯಕ್ಕೆ ತಳ್ಳಲ್ಪಡುತ್ತಾರೆ ಎಂದು ಎಚ್ಚರಿಸಿದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಲ್ಲಿ ಸುಮಾರು 71% ಕಂಪನಿಗಳಿಗೆ ತನ್ನ ಉದ್ಯೋಗಿಗಳಿಗೆ ಮಾರ್ಚ್ ತಿಂಗಳ ಸಂಬಳವನ್ನು ಪೂರ್ಣವಾಗಿ ಅಥವ ಭಾಗಶಃ ಕೊಡಲು ಆಗಿಲ್ಲ ಎಂದು ಅಖಿಲ ಭಾರತ ತಯಾರಕರ ಸಂಘಟನೆ(ಎಐಎಂಒ) ಹೇಳಿದೆ(ದಿ ಹಿಂದು, ಎಪ್ರಿಲ್ 6)


ಇದು ಈ ವಲಯದ 5000ಕ್ಕೂ ಹೆಚ್ಚು ಕಂಪನಿಗಳ ಸರ್ವೆಯ ಆಧಾರದಲ್ಲಿ ಅದು ಮಾಡಿರುವ ಅಂದಾಜು. ಇವರಲ್ಲಿ 63% ಕಂಪನಿಗಳಿಗೆ ನಗದು ಹರಿವಿನ ಕೊರತೆಯ ಸಮಸ್ಯೆಗಳು ಎದುರಾಗಿವೆ. ಏಕೆಂದರೆ ತಮ್ಮ ಗ್ರಾಹಕರಿಂದ ಹಣ ಬರಲಿಲ್ಲ, ಹೊಸ ಆರ್ಡರುಗಳ ಮುಂಗಡ ಹಣವೂ ಬರಲಿಲ್ಲ.

ಮನೆಯಿಂದ ಕೆಲಸ ಮಾಡಲು ಅವಕಾಶ ಇರುವ, ಅದರಿಂದಾಗಿ ಕೆಲಸವಿರಲಿಲ್ಲ ಎಂಬ ಸಮಸ್ಯೆ ಇಲ್ಲದ ಐಟಿ ಕಂಪನಿಗಳೂ ಹಲವು ಸಂಬಳ ಕಡಿತ ಮಾಡಿವೆ ಮತ್ತು ಉದ್ಯೋಗಿಗಳು ರಾಜೀನಾಮೆ ಕೊಡುವಂತೆ ಪರೋಕ್ಷವಾಗಿ ಬಲವಂತ ಮಾಡುತ್ತಿವೆ ಎಂದೂ ವರದಿಯಾಗಿವೆ. ಸಂಬಳ ಕೊಡದಿರಬಾರದು ಎಂಬ ಕಾರ್ಮಿಕ ಇಲಾಖೆಯ 'ಸಲಹಾ ಆದೇಶ'(ಅಡ್ವೈಸರಿ) ಮಾರ್ಚ್ 31 ರವರೆಗೆ ಮಾತ್ರ ಅನ್ವಯವಾಗುತ್ತದೆ ಎಂದು ಕೆಲವು ಕಂಪನಿಗಳು ಸಬೂಬು ಕೊಡುತ್ತಿವೆಯಂತೆ.

ಈ ನಡುವೆ ಲಾಕ್ ಡೌನ್‌ನಿಂದಾಗಿ ಇದ್ದಕ್ಕಿದ್ದಂತೆ ತಮ್ಮ ಜೀವನಾಧಾರವನ್ನೇ ಕಳಕೊಂಡ, ತಂತಮ್ಮ ಊರಿಗೆ ಹಿಂದಿರುಗುವುದಲ್ಲದೆ ಅನ್ಯ ಮಾರ್ಗವಿಲ್ಲದ **ವಲಸೆ ಕೂಲಿಕಾರ ಕುಟುಂಬಗಳ ಪೈಕಿ 42% ಕುಟುಂಬಗಳ ಬಳಿ ಒಂದು ದಿನಕ್ಕೆ ಸಾಲುವಷ್ಟೂ ರೇಷನ್ ಇಲ್ಲ** ಎಂದು ಇನ್ನೊಂದು ಸರ್ವೆ ಹೇಳುತ್ತದೆ(ದಿ ಸಿಟಿಜನ್, ಎಪ್ರಿಲ್ 6).

ಒಂದು ವೇಳೆ ಲಾಕ್‌ಡೌನ್ 21 ದಿನಗಳ ನಂತರವೂ ಮುಂದುವರೆದರೆ ಒಂದು ವಾರಕ್ಕಿಂತ ಹೆಚ್ಚು ಕಾಲ ತಾಳಿಕೊಳ್ಳುವುದು ತಮಗೆ ಸಾಧ್ಯವಿಲ್ಲ ಎಂದು 66% ಕೂಲಿಕಾರರು ಹೇಳಿದ್ದಾರೆ. ಈಗಾಗಲೇ 92.5% ಕೂಲಿಕಾರರು ಒಂದು ವಾರದಿಂದ ಮೂರು ವಾರದ ವರೆಗೆ ಉದ್ಯೋಗವಿಲ್ಲದೆ ಕೂತಿದ್ದೇವೆ ಎಂದು ಹೇಳಿದರೆ, ಸುಮಾರು 83% ಮಂದಿಗೆ ಲಾಕ್‌ಡೌನ್ ಮುಗಿದ ಮೇಲೆ ಕೆಲಸ ಮತ್ತೆ ಸಿಗುವ ಭರವಸೆ ಇಲ್ಲ.

ಭಾರತದ ಮುಖ್ಯ ಸಂಖ್ಯಾಶಾಸ್ತ್ರಜ್ಞರ ಹುದ್ದೆಯಿಂದ ಇತ್ತೀಚೆಗೆ ನಿವೃತ್ತರಾದ ಪ್ರೊಣಬ್ ಸೇನ್ ಈ ಎರಡು ವಾರಗಳಲ್ಲಿ 5 ಕೋಟಿ ಕಾರ್ಮಿಕರು, ನೌಕರರು ಉದ್ಯೋಗ ಕಳಕೊಂಡಿರಬಹುದು ಎಂದು ಹೇಳಿದ್ದಾರೆ.





ಈ ನಡುವೆ ಕೊವಿಡ್ ಸಾವುಗಳ ಸಂಖ್ಯೆಯೊಂದಿಗೆ ಲಾಕ್‌ಡೌನ್‌ನಿಂದಾಗಿ ಆಗಿರುವ ಸಾವುಗಳ ಸಂಖ್ಯೆಯ ಸ್ಪರ್ಧೆ ಈಗಲೂ ಮುಂದುವರೆದಿದೆ.

ಎಪ್ರಿಲ್ 8ರ ವೇಳೆಗೆ ಕೊವಿಡ್ 163 ಜೀವಗಳನ್ನು ಬಲಿ ತೆಗೆದುಕೊಂಡಿದ್ದರೆ, ಲಾಕ್‌ಡೌನಿನ ವಿವಿಧ ಪರಿಣಾಮಗಳಿಂದಾಗಿ ಕನಿಷ್ಟ 117 ಸಾವುಗಳು ಸಂಭವಿಸಿವೆ ಎಂದು ವರದಿಯಾಗಿದೆ.

ಬಿಕ್ಕಟ್ಟು ದುರುಗುಟ್ಟಿ ನೋಡುತ್ತಿದೆ. ಇದಕ್ಕೆ ಕೇಂದ್ರ ಸರಕಾರದ ಸ್ಪಂದನವೇನು? ಇನ್ನಷ್ಟು ಆಚರಣೆಗಳ ಮೂಲಕ ಗಮನವನ್ನು ಬೇರೆಡೆಗೆ ತಿರುಗಿಸುವುದು ಮತ್ತು ನಿಜಪ್ರಶ್ನೆಗಳ ಬಗ್ಗೆ ದಿವ್ಯ ಮೌನವೇ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ.


40 ಕೋಟಿ ಕಾರ್ಮಿಕರು ದಾರಿದ್ರ್ಯದತ್ತ ತಳ್ಳಲ್ಪಡುತ್ತಿದ್ದಾರೆ ಎಂದು ಎಚ್ಚರಿಸಿರುವ ಐ.ಎಲ್.ಒ. ವರದಿ 4 ಸ್ಥಂಭಗಳ ಪರಿಹಾರವನ್ನೂ ಸೂಚಿಸಿದೆ.

ಎಲ್ಲರಿಗೂ ಸಾಮಾಜಿಕ ರಕ್ಷಣೆ ಒದಗಿಸಿ, ಉದ್ಯೋಗ ಉಳಿಸಿಕೊಳ್ಳುವ ಕ್ರಮಗಳನ್ನು ಜಾರಿಗೊಳಿಸಿ, ಸಂಬಳ ಸಹಿತ ರಜಾಗಳನ್ನು ವಿಸ್ತರಿಸಿ, ಉದ್ದಿಮೆಗಳಿಗೆ (ವಿಶೇಷವಾಗಿ ಸಣ್ಣ–ಮಧ್ಯಮ) ತೆರಿಗೆ ರಜಾ ಸೌಲಭ್ಯ ಕೊಡಿ ಮುಂತಾದ ಕ್ರಮಗಳನ್ನು ಸೂಚಿಸಿದೆ.

ಈ ಮೊದಲೇ ಸೂಪರ್ ಶ್ರೀಮಂತ ಕಾರ್ಪೊರೇಟ್‌ಗಳಿಗೆ 8 ಲಕ್ಷ ಕೋಟಿ ರೂ.ಗಳಷ್ಟು 'ಉತ್ತೇಜನೆ'ಯ ಹೆಸರಲ್ಲಿ ರಿಯಾಯ್ತಿಗಳನ್ನು ಕೊಟ್ಟಿರುವ ನಮ್ಮ ಕೇಂದ್ರ ಸರಕಾರ, ಅವರಿಗೆ ನೀಡಿ 'ಉತ್ತೇಜನೆ'ಯಿಂದ ದೇಶಕ್ಕೇನು ಪ್ರಯೋಜನವಾಯಿತು ಎಂದು ಕೇಳಿಲ್ಲ. ಬದಲಿಗೆ ಅವರು ಇನ್ನಷ್ಟು ಸುಸ್ತಿಸಾಲಗಳನ್ನು ಹೆಚ್ಚಿಸಿಕೊಮಡಿದ್ದಾರೆ, ಸರಕಾರ ಮತ್ತಷ್ಟು ಸುಸ್ತಿ ಸಾಲಗಳನ್ನು 'ರೈಟ್ ಆಫ್' ಮಾಡಿದೆ. ಆದರೆ ಕೋಟ್ಯಂತರ ದುಡಿಯುವ ಜನರ ಈ ಪರಿಸ್ತಿತಿಗಳ ಬಗ್ಗೆ ಏನೂ ಮಾಡಿಲ್ಲ, ಏನೂ ಹೇಳಿಲ್ಲ. ಬೇರೆಲ್ಲ ವಿಷಯಗಳ ಬಗ್ಗೆ ಟ್ವೀಟ್‌ಗಳನ್ನು ಮಾಡುವ ಪ್ರಧಾನಿಗಳಿಂದ ಕೋಟ್ಯಂತರ ಜನಗಳ ಜೀವನ್ಮರಣ ಪ್ರಶ್ನೆಗಳ ಬಗ್ಗೆ ಚಕಾರವಿಲ್ಲ.

ಟ್ರಂಪ್ ಬೆದರಿಕೆ ಮತ್ತು ಮಲೇರಿಯಾ ಔಷಧಿಯ ರಫ್ತಿನ ಮೇಲಿನ ನಿಷೇಧ ರದ್ದು

ವ್ಯಂಗ್ಯಚಿತ್ರಕಾರರು ಕಂಡಂತೆ



ಜನವರಿಯಲ್ಲಿ : 'ನಮಸ್ತೆ ಟ್ರಂಪ್'
ಎಪ್ರಿಲ್‌ನಲ್ಲಿ : 'ನನಗೆ ನಿಮ್ಮ ಹೆಚ್‌ಸಿಕ್ಯು ಬೇಕೇ ಬೇಕು!'

ವ್ಯಂಗ್ಯಚಿತ್ರ: ಆರ್.ಪ್ರಸಾದ್



ಅಮೆರಿಕ ಫಸ್ಟ್ – ಅಮೆರಿಕ ಫಸ್ಟ್


ವ್ಯಂಗ್ಯಚಿತ್ರ: ಮಂಜುಲ್



ವ್ಯಂಗ್ಯಚಿತ್ರ ಕೃಪೆ:
ಇಂಡಿಯನ್ ಕಾರ್ಟೂನ್ ಗ್ಯಾಲರಿ


..ಕೊಡದಿದ್ರೆ.....

ವ್ಯಂಗ್ಯಚಿತ್ರ: ಇ.ಪಿ.ಉನ್ನಿ,
ಇಂಡಿಯನ್ ಎಕ್ಸ್‌ಪ್ರೆಸ್



'ಥ್ಯಾಂಕ್ಸ್ ಇಂಡಿಯ

ಕೊವಿಡ್ ಪರಿಹಾರದಲ್ಲಿ ಜಿಪುಣತನ ಬೇಡ ಅದಕ್ಕೆ ಆರ್ಥಿಕ ಆಧಾರವೂ ಇಲ್ಲ



ಟ್ರಂಪ್ ಸರಕಾರ ಕೂಡ ಕೊರೊನ ಬಿಕ್ಕಟ್ಟನ್ನು ಎದುರಿಸಲು ಮಂಜೂರು ಮಾಡಿದ ಕ್ರಮಗಳ ಒಟ್ಟು ವೆಚ್ಚ ಆ ದೇಶದ ಜಿಡಿಪಿಯ 10ಶೇ.ದಷ್ಟು. ತದ್ವಿರುದ್ಧವಾಗಿ ನಮ್ಮ ಹಣಕಾಸು ಮಂತ್ರಿಗಳ ಪ್ಯಾಕೇಜಿನ ಒಟ್ಟು ವೆಚ್ಚ ನಮ್ಮ ಜಿಡಿಪಿಯ 1ಶೇ.ದಷ್ಟೂ ಇಲ್ಲ. ಮತ್ತು, ಇದರಲ್ಲಿ ಬಹುಪಾಲು ಈಗಾಗಲೇ ಜಾರಿಯಲ್ಲಿರುವ ಸ್ಕೀಮುಗಳ ಹೊಸ ಅವತಾರಗಳಷ್ಟೇ.

ಮೋದಿ ಸರಕಾರದ ಈ ಜಿಪುಣತನ ಆರ್ಥಿಕ ದೃಷ್ಟಿಯಿಂದಲೂ ಸಂಪೂರ್ಣವಾಗಿ ಅನಾವಶ್ಯಕ. ಹಣದುಬ್ಬರದ ಚಿಂತೆ ಬೇಕಾಗಿಲ್ಲ, ಬಂಡವಾಳದ ಪಲಾಯನದ ಭೀತಿಯೂ ಬೇಕಾಗಿಲ್ಲ. ಸಾರ್ವಜನಿಕ ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸಬೇಕು, ಮಹಾಮಾರಿಯಿಂದಾಗಿ ಬೀಳುವ ಹೊರೆಯ ಬಹುಭಾಗವನ್ನು ರಾಜ್ಯ ಸರಕಾರಗಳು ಹೊರಬೇಕಾಗಿರುವುದರಿಂದ, ಅವುಗಳಿಗೆ ಸಂಪನ್ಮೂಲಗಳನ್ನು ಲಭ್ಯಗೊಳಿಸಬೇಕು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ವಿ.

ದೇಶದ ಮೇಲೆ ಹೇರಿರುವ ದಿಗ್ಬಂಧನ ಒಂದು ಅಳತೆ ಮೀರಿದ ಪ್ರತಿಕ್ರಿಯೆ ಎಂದು ತರ್ಕಿಸಬಹುದು. ಸೋಂಕು ತಗಲಿರಬಹುದಾದವರ ಹೆಚ್ಚು ವ್ಯಾಪಕವಾದ ತಪಾಸಣೆ, 'ಸಾಮಾಜಿಕ ದೂರ ಕಾಯ್ದುಕೊಳ್ಳುವುದು', ವಯಸ್ಸಾದವರ ಸ್ವಯಂ-ಕ್ವಾರಂಟೈನ್, ಸೂಕ್ಷ್ಮ ಪ್ರದೇಶಗಳ ಆಯ್ದ ಲಾಕ್‌ಡೌನ್(ಚೀನಾದ ಸರಕಾರ ವುಹಾನ್‌ನಲ್ಲಿ ಮಾಡಿದಂತೆ) ಸಾಕಾಗುತ್ತಿತ್ತೇನೋ. ಈ ಬಗ್ಗೆ ವಾದ-ವಿವಾದ ನಡೆಸಬಹುದು, ಆದರೆ ವಾಸ್ತವಿಕವಾಗಿ ಹಾಕಿದ ಲಾಕ್‌ಡೌನ್ ತೀರಾ ವಿಚಾರಹೀನವಾಗಿತ್ತು ಎಂಬುದರ ಬಗ್ಗೆ ವಿವಾದ ಇರಲು ಸಾಧ್ಯವಿಲ್ಲ.

ಈ ದಿಗ್ಬಂಧನದೊಂದಿಗೇ ಅದರಿಂದಾಗಿ ಅಗತ್ಯವಾಗಿದ್ದ ಶಮನ ಕ್ರಮಗಳನ್ನೂ ಪ್ರಕಟಿಸಬೇಕಾಗಿತ್ತು. ಇದರಿಂದ ನಂತರ ಸಂಭವಿಸಿದ ಸಾಮೂಹಿಕ ನಿರ್ಗಮನವನ್ನು ತಡೆಯಬಹುದಾಗಿತ್ತು. ಏಕೆಂದರೆ ಇದು ಸರಕಾರ ಸುಪ್ರಿಂ ಕೋರ್ಟಿನ ಸಮ್ಮುಖ ಹೇಳಿಕೊಂಡಂತೆ ಸುಳ್ಳು ಸುದ್ದಿ ಹುಟ್ಟಿಸಿದ್ದ ಭೀತಿಯಿಂದ ಸಂಭವಿಸಿದ್ದಲ್ಲ, ಬದಲಿಗೆ ತೀರಾ ಹತಾಶೆಯಿಂದ ನಡೆದದ್ದು. ಲಾಕ್‌ಡೌನ್ ಜಾರಿಗೆ ಬಂದ ಪೂರ್ಣ 36 ಗಂಟೆಗಳ ನಂತರ ಹಣಕಾಸು ಮಂತ್ರಿಗಳು ಕೆಲವು ಕ್ರಮಗಳನ್ನು ಪ್ರಕಟಿಸಿದರು. ಆದರೆ ಅವು ಪುಟ್ಟ ಹೆಜ್ಜೆಗಳಷ್ಟೇ.

ನಿಜಕ್ಕೂ ಭಾರತ ಹೇರಿದ ಕ್ರಮ ಎಷ್ಟೊಂದು ಕರಾಳವಾಗಿತ್ತು ಎಂಬುದರಲ್ಲಷ್ಟೇ ಅಲ್ಲ, ಅದರಿಂದ ಬಾಧಿತರಾದ ದುಡಿಯುವ ಜನಗಳ ಬಗ್ಗೆ ಎಷ್ಟೊಂದು ನಿರ್ಲಕ್ಷ್ಯದ ಪ್ರದರ್ಶನ ನಡೆಯಿತು ಎಂಬುದರಲ್ಲಿಯೂ ಅದು ಎಲ್ಲ ದೇಶಗಳನ್ನೂ ಮೀರಿಸಿದೆ. ಉದಾಹರಣೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಲಾಕ್‌ಡೌನಿನಿಂದ ನಿರುದ್ಯೋಗ ಸೌಲಭ್ಯ ಪಡೆಯಬಹುದಾಗಿದ್ದವರಲ್ಲಿ ಅದನ್ನು ಪಡೆಯಲು ಅರ್ಜಿ ಹಾಕಿದವರ ಸಂಖ್ಯೆ ಕೆಲವೇ ದಿನಗಳಲ್ಲಿ 2.8 ಲಕ್ಷದಿಂದ 66 ಲಕ್ಷಕ್ಕೇರಿತು. ಸರಕಾರ ಈ ಬಿಕ್ಕಟ್ಟನ್ನು ಎದುರಿಸಲು ಮಂಜೂರು ಮಾಡಿದ ಕ್ರಮಗಳ ಒಟ್ಟು ವೆಚ್ಚ ಆ ದೇಶದ ಜಿಡಿಪಿಯ 10 ಶೇ. ದಷ್ಟು. ತದ್ವಿರುದ್ಧವಾಗಿ ನಮ್ಮ ಹಣಕಾಸು ಮಂತ್ರಿಗಳ ಪ್ಯಾಕೇಜಿನ ಒಟ್ಟು ವೆಚ್ಚ ನಮ್ಮ ಜಿಡಿಪಿಯ 1ಶೇ.ದಷ್ಟೂ ಇಲ್ಲ. ಮತ್ತು, ಇದರಲ್ಲಿ ಬಹುಪಾಲು ಈಗಾಗಲೇ ಜಾರಿಯಲ್ಲಿರುವ ಸ್ಕೀಮುಗಳ ಹೊಸ ಅವತಾರಗಳಷ್ಟೇ. ನಿಜವಾದ ಹೊಸ ವೆಚ್ಚ ಈ ಪ್ಯಾಕೇಜಿಗೆ ಇಟ್ಟ 1.7 ಲಕ್ಷ ಕೋಟಿ ರೂ.ಗಳಲ್ಲಿ ಅರ್ಧಕ್ಕಿಂತ ತುಸು ಹೆಚ್ಚಷ್ಟೇ.

ಅಲ್ಲದೆ, ಈ ಕ್ರಮಗಳಲ್ಲಿ ಯಾವುದೂ ವಲಸೆ ಕಾರ್ಮಿಕರಿಗೆ ನೆರವಾಗುವಂತದ್ದಲ್ಲ, ಇವುಗಳಲ್ಲಿ ದೊಡ್ಡದಾದ ಆಹಾರಧಾನ್ಯಗಳ ರೇಶನ್ ಕೂಡ. ಏಕೆಂದರೆ ಅವರಲ್ಲಿ ಹೆಚ್ಚಿನವರ ರೇಶನ್ ಕಾರ್ಡ್‌ಗಳು ಅವರ ಊರುಗಳಲ್ಲಿ ಇರಬಹುದು, ಅವರು ಕೆಲಸ ಮಾಡುವ ಸ್ಥಳಗಳಲ್ಲಿ ಅಲ್ಲ. ಈ ಎಲ್ಲದರ ಬಗ್ಗೆ ಬಹಳಷ್ಟು ಬರೆಯಲಾಗಿದೆ, ಅವನ್ನೆಲ್ಲ ಇಲ್ಲಿ ನಾನು ಮತ್ತೆ ಹೇಳಬೇಕಾಗಿಲ್ಲ.

ಮಾಡಬೇಕಾದ್ದೇನು?

ಈ ಜಿಪುಣತನ ಆರ್ಥಿಕ ದೃಷ್ಟಿಯಿಂದಲೂ ಸಂಪೂರ್ಣವಾಗಿ ಅನಾವಶ್ಯಕವಾಗಿತ್ತು ಎಂದು ನಾನಿಲ್ಲಿ ತರ್ಕಿಸ ಬಯಸುತ್ತೇನೆ. ಬಹಳಷ್ಟು ಆರ್ಥಿಕ ತಜ್ಞರು ಮತ್ತು ನಾಗರಿಕ ಸಮಾಜದ ಕಾರ್ಯಕರ್ತರು, ಕೆಳಗಿನ 80ಶೇ. ಕುಟುಂಬಗಳಿಗೆ ಈ ಬಿಕ್ಕಟ್ಟನ್ನು ಎದುರಿಸಲು ಹೆಚ್ಚುವರಿ ಆಹಾರಧಾನ್ಯಗಳ ರೇಶನ್‌ನೊಂದಿಗೆ ಇನ್ನೂ ಕೆಲವು ಸರಕುಗಳನ್ನು ಸೇರಿಸುವುದಲ್ಲದೆ, ಎರಡು ತಿಂಗಳ ವರೆಗೆ ಮಾಸಿಕ 7000 ರೂ. ನಗದು ವರ್ಗಾವಣೆ ಮಾಡಬೇಕು ಎಂದು ಸೂಚಿಸಿದ್ದರು. ಈ ನಗದು ವರ್ಗಾವಣೆಗೇ ತಗಲುವ ವೆಚ್ಚ 3.66ಲಕ್ಷ ಕೋಟಿ ರೂ. ಆಗುತ್ತಿತ್ತು. ಇದು ಹಣಕಾಸು ಮಂತ್ರಿಗಳ ಕ್ರಮಗಳಲ್ಲಿ ಹೇಳಿದ ನಗದು ವರ್ಗಾವಣೆಯ ವೆಚ್ಚದ ಹತ್ತು ಪಟ್ಟಿಗಿಂತಲೂ ಹೆಚ್ಚು. ನಾಗರಿಕ ಸಮಾಜದ ಸಂಘಟನೆಗಳು ಸೂಚಿಸಿದ ಪ್ರಮಾಣದಲ್ಲಿ ನೆರವು ಅಗತ್ಯವಾಗಿದೆ. ಇವನ್ನು ಒದಗಿಸುವಲ್ಲಿ ಸಾಗಾಣಿಕೆಯ ಸಮಸ್ಯೆಗಳು ಬರುತ್ತವೆ ನಿಜ, ಆದರೆ ಹಣಕಾಸು ಸಮಸ್ಯೆಗಳು ಬರುವುದಿಲ್ಲ.

ಇವಕ್ಕೆಲ್ಲ ಸದ್ಯಕ್ಕೆ ಒಂದು ವಿತ್ತೀಯ ಕೊರತೆ ಕ್ರಮದ ಮೂಲಕ ಹಣ ಒದಗಿಸಿದರೂ ಅದರಿಂದ ಆಗುವ ಹೆಚ್ಚಿನ ವಿತ್ತೀಯ ಕೊರತೆಯಿಂದ ಆಗಬಾರದ ಆರ್ಥಿಕ ದುಷ್ಪರಿಣಾಮಗಳೇನೂ ಆಗುವುದಿಲ್ಲ. ಈ ಪರಿಣಾಮಗಳು ಎರಡು ರೀತಿಗಳಲ್ಲಿ ವ್ಯಕ್ತಗೊಳ್ಳಬಹುದು: ಒಂದು, ಹಣದುಬ್ಬರದ ಮೂಲಕ. ಮತ್ತು ಇನ್ನೊಂದು ಪಾವತಿ ಬಾಕಿ ಕೊರತೆಯ ಸಮಸ್ಯೆಯನ್ನು ಉಂಟು ಮಾಡುವ ಮೂಲಕ. ಇವೆರಡನ್ನೂ ನೋಡೋಣ.

ಹಣದುಬ್ಬರದ ಆತಂಕ ಬೇಕಿಲ್ಲ

ಆವಶ್ಯಕ ಸರಕುಗಳ ಪೂರೈಕೆಗಳು ಸಮೃದ್ಧವಾಗಿರುವ ವರೆಗೆ ಮತ್ತು ಇವನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಬಹುಪಾಲು ಜನಗಳಿಗೆ ಲಭ್ಯಗೊಳಿಸಿ, ಆಮೂಲಕ ಅವರನ್ನು ಹಣದುಬ್ಬರದ ಪರಿಣಾಮಗಳು ತಟ್ಟದಂತೆ ಮಾಡಬಹುದು. ಆಗ ಹಣದುಬ್ಬರ ಎಂಬುದು ಒಂದು ಆತಂಕದ ಸಂಗತಿಯಾಗುವುದಿಲ್ಲ. ಭಾರತದಲ್ಲಿ ಈಗ ಅಂತಹ ಸನ್ನಿವೇಶ ಇದೆ.

ಅತ್ಯಂತ ಆವಶ್ಯಕವಾದ ಆಹಾರಧಾನ್ಯಗಳ ಪೂರೈಕೆ ವಿಪುಲವಾಗಿದೆ. ಸದ್ಯ ಸರಕಾರದ ಬಳಿ 5.8 ಕೋಟಿ ಟನ್ ಆಹಾರಧಾನ್ಯಗಳ ದಾಸ್ತಾನು ಇದೆ. ಇದರಲ್ಲಿ 2.1 ಕೋಟಿ ಟನ್‌ಗಿಂತ ಹೆಚ್ಚೇನೂ ಕಾಪು ದಾಸ್ತಾನು ಮತ್ತು ಸದ್ಯದ ಬಳಕೆಗೆ ಬೇಕಾಗಿಲ್ಲ. ಅಂದರೆ 3.7 ಕೋಟಿ ಟನ್ ಹೆಚ್ಚುವರಿ ಆಹಾರಧಾನ್ಯಗಳು ಲಭ್ಯವಿದ್ದು ಅವನ್ನು ಹೆಚ್ಚಿನ ರೇಶನ್ ಆಗಿ ವಿತರಿಸಲು, ಅಥವ ಹಣದುಬ್ಬರದ ವಿರುದ್ಧ ತಡೆಯಾಗಿ ಬಳಸಿಕೊಳ್ಳಬಹುದು.

ಹಿಂಗಾರು ಬೆಳೆ ಉತ್ತಮವಾಗಿರುತ್ತದೆ, ಅದನ್ನು ಸುರಕ್ಷಿತವಾಗಿ ಕಟಾವು ಮಾಡಬೇಕಷ್ಟೇ ಎಂದು ಹೇಳಲಾಗಿದೆ. ಇದು ಸರಕಾರದ ಆಹಾರಧಾನ್ಯಗಳ ದಾಸ್ತಾನನ್ನು ಮತ್ತಷ್ಟು ಹೆಚ್ಚಿಸುತ್ತದೆ. ಕೂಲಿಕಾರರ ಕೊರತೆ ಕಟಾವಿಗೆ ತಡೆಯಾಗಿದೆ ಎಂಬ ಕೆಲವು ವರದಿಗಳಿವೆ. ಇದೊಂದು ತಾತ್ಕಾಲಿಕ ಸಮಸ್ಯೆ, ಲಾಕ್‌ಡೌನ್ ಸಡಿಲಗೊಂಡಂತೆ ಇಲ್ಲವಾಗುತ್ತದೆ. ; ಆದರೂ ಅಗತ್ಯವಿದ್ದರೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ಕೆಲಸವನ್ನು ಕೂಲಿಕಾರರ ಕೊರತೆಯಿರುವ ಕ್ಷೇತ್ರಗಳಲ್ಲಿ ಕಟಾವು ಕೆಲಸಗಳನ್ನು ಒಳಗೊಳ್ಳುವಂತೆ ವಿಸ್ತರಿಸಬಹುದು.

ಅದೇ ರೀತಿಯಲ್ಲಿ ಇತರ ಆವಶ್ಯಕ ಸರಕುಗಳಲ್ಲಿ ತಯಾರಿಸಲ್ಪಡುವ ಸಾಮಾನುಗಳ ಪೂರೈಕೆಯನ್ನು ಹೆಚ್ಚಿಸಬಹುದು; ಬೇಡಿಕೆಯಿಲ್ಲದ್ದರಿಂದ ಉತ್ಪಾದನೆಗೆ ಇರುವ ತೊಡಕು ಈ ರೀತಿಯ ಹೆಚ್ಚಿನ ಬೇಡಿಕೆಯಿಂದ ನಿವಾರಣೆಯಾಗುತ್ತದೆ, ವಿಶೇಷ ಸಂದರ್ಭಗಳಲ್ಲಿ ಆಮದಿನ ಮೂಲಕವೂ ಇದನ್ನು ಮಾಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ವಿತ್ತೀಯ ಕೊರತೆ ಹೆಚ್ಚುವುದರಿಂದ ಹಣದುಬ್ಬರ ಚಿಂತೆಯ ವಿಷಯವಾಗಬಹುದು ಎಂದು ಯೋಚಿಸುವುದಕ್ಕೆ ಕಾರಣವಿಲ್ಲ.

ಇಲ್ಲಿ ಇನ್ನೊಂದು ಹೆಚ್ಚುವರಿ ಅಂಶ ಇದೆ. ಒಂದು ವಿತ್ತೀಯ ಕೊರತೆಯಿಂದ ಪಡೆದ ಹಣದಿಂದ ಆಗುವ ಬೇಡಿಕೆಯಲ್ಲಿನ ಆರಂಭಿಕ ಹೆಚ್ಚಳದಿಂದ ಹೆಚ್ಚುವ ಒಟ್ಟು ಬೇಡಿಕೆ ಆರಂಭಿಕ ಬೇಡಿಕೆಯ ಹೆಚ್ಚಳದ ಒಂದು ಗುಣಕವಾಗಿರುತ್ತದೆ. ಇದು ಲಾಕ್‌ಡೌನ್ ತೆಗೆದರೂ ಸಾಮಾಜಿಕ ದೂರೀಕರಣ ಮತ್ತು ಸಾಮಾಜಿಕ ಚಟುವಟಿಕೆಗಳ ಮೇಲೆ ನಿರ್ಬಂಧಗಳು ಮುಂದುವರೆಯಬಹುದಾದ್ದರಿಂದ ಸಾಮಾನ್ಯವಾಗಿ ಇರುವುದರ್ಕಿಂತ ಕಡಿಮೆಯಿರುತ್ತದೆ. ಬೇಡಿಕೆಗಳ ಮೇಲೆ ನಿರ್ಬಂಧಗಳು ಮುಂದುವರೆಯುವುದರಿಂದಾಗಿ ಜನಗಳು ಸಾಮಾನ್ಯವಾಗಿ ಇರಬಹುದಾದಕ್ಕಿಂತ ಹೆಚ್ಚಿನ ಮಟ್ಟದ ವರೆಗೆ ಖರೀದಿ ಶಕ್ತಿಯನ್ನು ಉಳಿಸಿಕೊಳ್ಳುತ್ತಾರೆ. ಇದು ತಂತಾನೇ ಒಂದು ಹಣದುಬ್ಬರ-ವಿರೋಧಿ ಅಂಶವಾಗುತ್ತದೆ.

ನಿಜ, ಕೆಲವು ಅಷ್ಟೇನೂ ಆವಶ್ಯಕವಲ್ಲದ ಸರಕುಗಳ ಅಭಾವಗಳು ಉಂಟಾಗ ಬಹುದು. ಇದರಿಂದಾಗಿ ಕಳ್ಳ ದಾಸ್ತಾನುಗಳೂ ಉಂಟಾಗಬಹುದು. ಆದರೆ ಈ ಅಭಾವಗಳು ಮಹಾಮಾರಿಯಿಂದ ಉಂಟಾಗಿರುವುದರಿಂದ ತಾತ್ಕಾಲಿವಾಗಿರಬಹುದು, ಬಹಳ ದಿನ ಉಳಿಯಲಾರವು, ಇದು ಕಳ್ಳ ದಾಸ್ತಾನಿಗೆ ತೊಡಕಾಗುತ್ತದೆ.

ನಿಜ, ಹಣದುಬ್ಬರದ ನಿರೀಕ್ಷೆಗಳು ಬಲವಾಗಿದ್ದರೆ,ಮತ್ತು ಸತತವಾಗಿ ಕಂಡು ಬಂದರೆ, ಆಗ ರೇಷನ್ ಇಲ್ಲದ ಸರಕುಗಳ ಬೆಲೆಗಳು ಸಟ್ಟಾಕೋರತನದ ಕಾರಣದಿಂದಾಗಿ ತೀವ್ರವಾಗಿ ಏರಬಹುದು. ಆದರೆ ಸರಕಾರ ಇಂತಹ ನಿರೀಕ್ಷೆಗಳನ್ನು ತಡೆಯಲು, ಪಟ್ರೋ-ಉತ್ಪನ್ನಗಳ ಬೆಲೆಗಳನ್ನು ವಿಶ್ವ ತೈಲ ಬೆಲೆಗಳ ಕುಸಿತದ ಪ್ರಯೋಜನ ಪಡೆದು ಇಳಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಬಹುದು. ಆದ್ದರಿಂದ ಹೆಚ್ಚಿನ ವಿತ್ತೀಯ ಕೊರತೆ ಹಣದುಬ್ಬರವನ್ನು ಉಂಟು ಮಾಡಬಹುದು ಎಂಬ ಚಿಂತೆ ಬೇಕಿಲ್ಲ.

ಬಂಡವಾಳದ ಪಲಾಯನದ ಭೀತಿಯೋ ಜನಕ್ಕಿಂತ ಹಣಕಾಸು ಮುಖ್ಯ ಎಂಬ ಪ್ರವೃತ್ತಿಯೋ

ಇನ್ನು, ಪಾವತಿ ಬಾಕಿಯ ರಂಗದಲ್ಲಿ ಇರುವ ಚಿಂತೆಯೆಂದರೆ, ವಿತ್ತೀಯ ಕೊರತೆಯನ್ನು ಹೆಚ್ಚಿಸಿದರೆ ಅದರಿಂದ ಹೆದರಿಕೊಂಡು ಹೂಡಿಕೆದಾರರು ಬಂಡವಾಳ ದೇಶದಿಂದ ಹೊರ ಹಾರುವಂತೆ ಮಾಡಬಹುದು ಎಂಬುದು. ಬಂಡವಾಳದ ಹೊರ ಹಾರಾಟ, ರೂಪಾಯಿ ಬೆಲೆ ಬೀಳುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ಆಗಲೇ ನಡೆಯುತ್ತಿದೆ. ಈ ಹೊರ ಹಾರಾಟ ನಮ್ಮ ವಿತ್ತೀಯ ಕೊರತೆಯಿಂದಾಗಿ ಅಲ್ಲ, ಬದಲಾಗಿ ಹಣಕಾಸು ಮಾರುಕಟ್ಟೆಗಳಲ್ಲಿ ಭೀತಿ ಆವರಿಸಿದಾಗಲೆಲ್ಲ ಡಾಲರುಗಳತ್ತ ಧಾವಿಸುವ ಪ್ರವೃತ್ತಿಇದೆ. ಇದು ಈ ಇಂತಹ ಭೀತಿಗೆ ಕಾರಣ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲೇ ಇದ್ದರೂ ಸಂಭವಿಸುತ್ತದೆ.

ಆದರೆ ಭಾರತ ಸುಮಾರು ಅರ್ಧ ಟ್ರಿಲಿಯನ್ ಡಾಲರುಗಳ ವಿದೇಶಿ ವಿನಿಮಯ ಮೀಸಲು ಹೊಂದಿದೆ. ಒಂದು ಹಂತದ ವರೆಗೆ ರೂಪಾಯಿಯಿಂದ ಡಾಲರಿಗೆ ಹಾರಾಟವನ್ನು ತಡೆಯಲು ಇದನ್ನು ಬಳಸಬಹುದು. ಆದರೂ ಬಂಡವಾಳದ ಹಾರಾಟ ಮುಂದುವರೆದರೆ, ಮಹಾಮಾರಿಯ ಸಂದರ್ಭದಲ್ಲಿ ಬಂಡವಾಳ ಹೊರ ಹರಿವಿನ ಮೇಲೆ ಭಾರತ ನ್ಯಾಯಬದ್ಧವಾಗಿಯೇ ನಿರ್ಬಂಧಗಳನ್ನು ಹೇರಲು ಕಾರಣವಿರುತ್ತದೆ.

ನಾವೀಗ ಗಡಿಯಾಚೆ- ಈಚೆಗೆ ಜನಗಳ ಚಲನೆಯನ್ನು ನಿಷೇಧಿಸಿರುವ, ಆದರೆ ಹಣಕಾಸು ಗಡಿಯಾಚೆ-ಈಚೆಗೆ ಮುಕ್ತವಾಗಿ ಚಲಿಸುವ ಒಂದು ವಿಲಕ್ಷಣ ಸನ್ನಿವೇಶದಲ್ಲಿ ಇದ್ದೇವೆ. ಮಹಾಮಾರಿ ಮತ್ತು ಅದು ಉಂಟು ಮಾಡಿದ ಲಾಕ್‌ಡೌನ್‌ನಿಂದ ಜನಗಳಿಗೆ ಆಗಿರುವ ಸಂಕಟಗಳನ್ನು ಸರಕಾರದ ವೆಚ್ಚಗಳನ್ನು ಹೆಚ್ಚಿಸುವ ಮೂಲಕ ಶಮನಗೊಳಿಸಲು ಹೋದರೆ ವಿತ್ತೀಯ ಕೊರತೆ ಹೆಚ್ಚುತ್ತದೆ. ಇದು ಬಂಡವಾಳ ಹೊರಗೆ ಹರಿದು ಹೋಗುವಂತೆ ಮಾಡಬಹುದು ಎಂಬ ಭೀತಿಯಿಂದಾಗಿ ಇದಕ್ಕೆ ಹಿಂದೇಟು ಹೊಡೆದರೆ, ಅದು ಜನಗಳಿಗಿಂತ ಹಣಕಾಸಿಗೆ ಹೆಚ್ಚಿನ ಸ್ಥಾನ ಕೊಡುವ ಪ್ರವೃತ್ತಿಯ ಪರಾಕಾಷ್ಠೆ ಎಂದೇ ಹೇಳಬೇಕಾಗುತ್ತದೆ.

ಇದಕ್ಕೆ ಅವಕಾಶ ಕೊಡಬಾರದು. ಕೇಂದ್ರ ಸರಕಾರ ತನ್ನ ವಿತ್ತೀಯ ಕೊರತೆಯ ಬಗ್ಗೆ ಚಿಂತಿಸಬಾರದು, ಈ ಮಹಾಮಾರಿಯಿಂದಾಗಿ ಆಗುವ ಹೆಚ್ಚಿನ ವೆಚ್ಚದ ಹೊರೆಯ ಬಹುಭಾಗವನ್ನು ರಾಜ್ಯ ಸರಕಾರಗಳು ಹೊರಬೇಕಾಗಿರುವುದರಿಂದ, ಕೇಂದ್ರ ಅವುಗಳಿಗೆ ಸಂಪನ್ಮೂಲಗಳನ್ನು ಲಭ್ಯಗೊಳಿಸಬೇಕು, ಅವುಗಳ ಸಾಲಗಳನ್ನು ಎತ್ತಲು ಇರುವ ಮಿತಿಗಳನ್ನು ಏರಿಸಬೇಕು, ಬಹುಶಃ ಸಾರ್ವತ್ರಿಕವಾಗಿ ಅದನ್ನು ದ್ವಿಗುಣಗೊಳಿಸಬೇಕು, ಜತೆಗೆ ಅವುಗಳಿಗೆ ಮಾಡಬಹುದಾದ ಹಣಕಾಸು ವರ್ಗಾವಣೆಗಳ ಮೊತ್ತಗಳನ್ನು ಕುರಿತಂತೆ ಮಾತುಕತೆಗಳನ್ನು ನಡೆಸಬೇಕು.





ರೇಷನ್ ..ರೇಷನ್ ವ್ಯಂಗ್ಯಚಿತ್ರ: ಶುಭಾನಿ, ಡೆಕ್ಕನ್ ಕ್ರಾನಿಕಲ್

ಪುಟ 11 ರಿಂದ

ಕಯ್ಯೂರು ಹುತಾತ್ಮರು: ......

ಪೋಷಕರು ಅನುಭವಿಸಿದಂತೆ ಭಾರತದ ಬೇರೆ ಯಾವ ತಂದೆ ಅಥವಾ ತಾಯಿಯರೂ ಅನುಭವಿಸದಿರಲಿ ಎಂದು ನೀವು ಕೆಲಸ ಮಾಡಿದಿರಿ. ಭರವಸೆ ಇಡಿ ಸಂಗಾತಿಗಳೇ, ನಾವು ಪಕ್ಷದ 17,000 ಸದಸ್ಯರೂ, ನಿಮ್ಮ ತಂದೆ ತಾಯಿಯನ್ನು ನಮ್ಮ ಅಪ್ಪ ಅಮ್ಮನಂತೆ ನೋಡಿಕೊಳ್ಳುತ್ತೇವೆ. ಪಕ್ಷವೇ ತಮ್ಮ ಕುಟುಂಬ ಮತ್ತು ಪಕ್ಷದ ಪ್ರತಿಯೊಬ್ಬ ಸದಸ್ಯರೂ ತಮ್ಮ ಮಗ/ಮಗಳು ಎಂದು ನಿಮ್ಮ ಪೋಷಕರು ಭಾವಿಸುವಂತೆ ನಮ್ಮ ಕೈಲಾದ ಎಲ್ಲಾ ಪ್ರಯತ್ನಗಳನ್ನೂ ನಾವು ಮಾಡುತ್ತೇವೆ. ನಿಮ್ಮನ್ನು ಭೇಟಿಯಾಗಲು ಸಿಕ್ಕ ಈ ಅವಕಾಶ ನನ್ನ ಬದುಕಿನ ಅತ್ಯಂತ ಮಹತ್ವದ್ದು . ."

ಉತ್ತರವಾಗಿ ಕುಜಂಬು ಹೇಳಿದರು: "ನಾನು ಜನರಿಗಾಗಿ ಏನೆಲ್ಲ ಮಾಡಿದನೋ ಅದನ್ನು ಮಾಡುವ ಸಾಮರ್ಥ್ಯವನ್ನು ಪಕ್ಷ ನನಗೆ ನೀಡಿದೆ. ನಾನು ನನ್ನ ಕರ್ತವ್ಯ ಮಾಡಿದ್ದೇನೆ ಎಂದು ಪಕ್ಷ ಎಣಿಸಿದರೆ ಅದೇ ನಾನು ಸದಾ ಬಯಸಿದ ಸನ್ಮಾನ."

ಚಿರಕುಂಡನ್: "ನಾವು ನಾಲ್ವರು ರೈತರ ಮಕ್ಕಳು. ಆದರೆ ಭಾರತವು ಲಕ್ಷಾಂತರ ರೈತರನ್ನು ಹೊಂದಿದೆ. ನಮ್ಮನ್ನು ನೇಣಿಗೆ ಹಾಕಬಹುದು, ಆದರೆ ಅವರನ್ನು ನಾಶ ಮಾಡಲು ಸಾಧ್ಯವಿಲ್ಲ."

ಅಪ್ಪು: "ಪಕ್ಷ ಶಕ್ತಿಶಾಲಿಯಾಗಿ ಬೆಳೆಯುತ್ತಿದೆ ಎಂಬ ದೊಡ್ಡ ಸುದ್ದಿಯನ್ನು ನೀವು ತಂದಿದ್ದೀರಿ. ಈಗ ನಾವು ಇನ್ನೂ ಹೆಚ್ಚು ಶಕ್ತಿಯಿಂದ ಗಲ್ಲುಗಂಬ ಏರುತ್ತೇವೆ."

ಅಬೂಬಕರ್: "ನಾವು ನಮ್ಮ ಹುತಾತ್ಮರಿಂದ ಸ್ಫೂರ್ತಿಯನ್ನು ಪಡೆದಿದ್ದೇವೆ. ಅವರಲ್ಲಿ ಒಬ್ಬರಾಗಿ ಆ ಗೌರವವನ್ನು ಪಡೆಯುತ್ತೇವೆ ಎಂಬ ಕನಸನ್ನು ಎಂದಿಗೂ ಕಂಡಿರಲಿಲ್ಲ. ನಮ್ಮ ಸಂಗಾತಿಗಳಿಗೆ ಹೇಳಿ ನಾವು ಯಾವುದೇ ಅಳುಕಿಲ್ಲದೇ ಗಲ್ಲುಗಂಬ ಏರುತ್ತೇವೆ ಎಂದು . . .ನನ್ನ ಸೋದರರು ಬಹಳ ಚಿಕ್ಕವರು. ಪಕ್ಷದ ಕೆಲಸಕ್ಕಾಗಿ ಅವರಿಗೆ ವಿದ್ಯೆ ಕಲಿಸಿ."

ಜೋಷಿಯವರು ಕಣ್ಣೀರಿನೊಂದಿಗೆ ಆ ನಾಲ್ಕು ಸಂಗಾತಿಗಳ ಕೈಕುಲುಕಿದರು, ಜೈಲಿನಲ್ಲಿನ ಹೂವುಗಳತ್ತ ಕೈ ತೋರಿಸಿ ಹೇಳಿದರು: "ಈ ಹೂವುಗಳು ಬೇಗನೆ ಬಾಡಿಹೋಗುತ್ತವೆ. ಮಾನವೀಯತೆಯ ಹೂವುಗಳಾದ ನೀವು ಸಂಗಾತಿಗಳು ಎಂದೆಂದಿಗೂ ಬಾಡುವುದಿಲ್ಲ."

ಭಾರತದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ, ಬಡ ರೈತ ಕುಟುಂಬದಲ್ಲಿ ಹುಟ್ಟಿದ ನಾಲ್ವರು ಕಮ್ಯುನಿಸ್ಟರು ಮಾರ್ಚ್ 29, 1943ರಂದು ಗಲ್ಲಿಗೇರಿದರು. ವಯಸ್ಸಿನಲ್ಲಿ ಸಣ್ಣವರಾದ ಅವರು, ಸ್ವಾತಂತ್ರ್ಯಕ್ಕಾಗಿ ಹೋರಾಡುವ ಅಜೇಯ ಸೇನೆಯನ್ನು, ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ನಿಜವಾದ ದೇಶಪ್ರೇಮಿಗಳಾಗಿ ಬದುಕಿದರು, ತಮ್ಮ ತುಟಿಯ ಮೇಲೆ 'ಕಮ್ಯುನಿಸ್ಟ್ ಪಕ್ಷ ಚಿರಾಯುವಾಗಲಿ' ಎಂಬ ಘೋಷಣೆಯೊಂದಿಗೆ ಉದಾತ್ತ ಹುತಾತ್ಮರಾಗಿ ಮಡಿದರು.

ಜನರ ಆಕ್ರೋಶಕ್ಕೆ ಹೆದರಿ, ಕಣ್ಣೂರು ಸೆಂಟ್ರಲ್ ಜೈಲಿನಲ್ಲಿ ಸೇರಿದ್ದ ಜನರಿಗೆ ಹುತಾತ್ಮ ಸಂಗಾತಿಗಳ ದೇಹವನ್ನು ಹಸ್ತಾಂತರಿಸಲೂ ಬ್ರಿಟಿಷ್ ಸರ್ಕಾರ ನಿರಾಕರಿಸಿತು.

ಆ ಪ್ರದೇಶದಲ್ಲಿ ಬೆಳೆಯುತ್ತಿದ್ದ ಕಮ್ಯುನಿಸ್ಟ್ ಚಳುವಳಿಯನ್ನು ಬಗ್ಗುಬಡಿಯಬೇಕೆಂಬ ಬ್ರಿಟಿಷರ ಎಲ್ಲಾ ಪ್ರಯತ್ನಗಳು ವಿಫಲವಾದವು. ವ್ಯತಿರಿಕ್ತವಾಗಿ, ಆ ಅವಧಿಯಲ್ಲಿ ಮೊರಾಜ, ಕರಿವೆಲ್ಲೂರು ಮತ್ತು ಕಯ್ಯೂರಿನಲ್ಲಿ ನಡೆದ ಉಗ್ರಸ್ವರೂಪದ ಹೋರಾಟಗಳಲ್ಲಿ ಕಂಡಂತೆ ಸಾಮ್ರಾಜ್ಯಶಾಹಿ ಮತ್ತು ಪಾಳೇಗಾರಿ ಪದ್ಧತಿಯ ವಿರುದ್ಧ ಒಂದು ಪರಿಣಾಮಕಾರಿ ಹೋರಾಟದ ಶಕ್ತಿಯಾಗಿ ಕಮ್ಯುನಿಸ್ಟ್ ಪಕ್ಷ ಹೊರಹೊಮ್ಮಿತು.

ರಾಷ್ಟ್ರಪತಿಗಳಿಗೆ ಸೀತಾರಾಂ ಯೆಚುರಿ ಪತ್ರ

ಪುಟ 9 ರಿಂದ

ಮತ್ತು ವೇತನ ಮುರಿಕೆಗಳಿಂದ ಸಾವಿರಾರು ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ.

ಇಂತಹುದೇ, "ಭಾರತ್ ಕೇ ವೀರ್" ಎಂಬ ಫುಲ್ವಾಮ ಭಯೋತ್ಪಾದಕ ದಾಳಿಯ ನಂತರ ಈ ದುರಂತಕ್ಕೆ ಬಲಿಯಾದವರು ಮತ್ತು ಅವರ ಕುಟುಂಬಗಳಿಗೆ ನೆರವಾಗಲೆಂದು ರಚಿಸಿದ ನಿಧಿಯ ಅನುಭವ ದೇಶಕ್ಕೆ ಈಗಾಗಲೇ ಆಗಿದೆ. ಇದುವರೆಗೂ ಈ ಕುರಿತ ವಿವರಗಳು ಸಾರ್ವಜನಿಕವಾಗಿ ಲಭ್ಯವಿಲ್ಲ. ಇಂತಹ ನಿಧಿ ಅಪಾರದರ್ಶಕವಾಗಿದೆ, ಮತ್ತು ಉತ್ತರದಾಯಿಯಾಗಿಲ್ಲ ಎಂಬುದನ್ನು ನೀವು ಕೂಡ ಒಪ್ಪುತ್ತೀರಿ ಎಂಬ ಖಾತ್ರಿ ನನಗಿದೆ. ನೀವು "ನಿಮ್ಮ ಸರಕಾರ"ಕ್ಕೆ ಹೀಗೆ ಮಾಡಲು ಅನುಮತಿ ನೀಡುವುದು ಹೇಗೆ ಸಾಧ್ಯ?

ಈ ನಿಧಿಯನ್ನು, ಮೊದಲನೆಯದಾಗಿ "ಇಂಡಿಯಾ ಕೇರ್ಸ್" ಎಂದಿರಬೇಕಾಗಿದ್ದ ಈ ನಿಧಿಯನ್ನು, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯೊಂದಿಗೆ ವಿಲೀನಗೊಳಿಸಲು ತಮ್ಮ ಮಧ್ಯಪ್ರವೇಶವನ್ನು ನಾನು ಕೋರುತ್ತೇನೆ.

ಅಲ್ಲದೆ, ಆರೋಗ್ಯ ಪಾಲನೆ ಪ್ರಥಮತಃ ರಾಜ್ಯ ಸರಕಾರಗಳ ಹೊಣೆಯಾಗಿರುವುದರಿಂದ ಈ ನಿಧಿಯ ಬಹುಪಾಲು ಮೊತ್ತವನ್ನು ಆಯಾಯ ರಾಜ್ಯ ಸರಕಾರಗಳಿಗೆ ವರ್ಗಾಯಿಸಬೇಕು, ಈ ಮೂಲಕ ಕೊವಿಡ್–19 ರ ವಿರುದ್ಧ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದನ್ನು ಖಾತ್ರಿಪಡಿಸಬೇಕು.

6. ಕೋಮುವಾದ

ಅಂತಿಮವಾಗಿ, ಈ ವೈರಸ್‌ನ ಹರಡಿಕೆಗೆ ಒಂದು ನಿರ್ದಿಷ್ಟ ಸಮುದಾಯವನ್ನು ದೂಷಿಸುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂಬದು ಗಂಭೀರ ಆತಂಕದ ಒಂದು ವಿಷಯ ಎಂಬುದನ್ನು ನೀವು ಕಾಣಬಲ್ಲಿರಿ. ತಬ್ಲಿಘಿ ಸಂಘಟಕರು ಅತ್ಯಂತ ಬೇಜವಾಬ್ದಾರಿತನ ತೋರಿದ್ದಾರೆ. ಆದರೆ ಇದು ಇಡಿಯಾಗಿ ಮುಸ್ಲಿಂ ಸಮುದಾಯವನ್ನು ಗುರಿ ಮಾಡಲು ನೆಪವಾಗಬಾರದು. ಇದನ್ನು ನಿಲ್ಲಿಸದಿದ್ದರೆ ಇದು ಕೊವಿಡ್ ಮಹಾಮಾರಿಯ ವಿರುದ್ಧ ಜನಗಳ ಐಕ್ಯ ಹೋರಾಟವನ್ನು ಛಿದ್ರಗೊಳಿಸುತ್ತದೆ.

ಸರಕಾರ ಬಹಳ ಜನ ಸೇರುವ ಸಮಾರಂಭಗಳನ್ನು ನಿಷೇಧಿಸುವ ಆದೇಶವನ್ನು ಹೊರಡಿಸಿದ ನಂತರವೂ ಹಲವು ಧಾರ್ಮಿಕ ಮತ್ತು ಇತರ ಗೋಷ್ಠಿಗಳು ನಡೆದಿವೆ ಎಂಬುದು ತಮ್ಮ ಅರಿವಿಗೂ ಬಂದಿರಬಹುದು. ಸಂಸತ್ತು ಕೂಡ ದೇಶವ್ಯಾಪಿ ಲಾಕ್‌ಡೌನ್ ಘೋಷಿಸುವ ಹಿಂದಿನ ದಿನದ ವರೆಗೂ ಕಾರ್ಯ ನಿರ್ವಹಿಸುತ್ತಿತ್ತು. ಮಧ್ಯಪ್ರದೇಶದಲ್ಲಿ ಒಂದು ಸದನ ಪರೀಕ್ಷೆ ನಡೆಯಿತು, ಪಕ್ಷಾಂತರಗಳನ್ನು ಪ್ರೋತ್ಸಾಹಿಸುವಲ್ಲಿ ಒಂದು ಹೊಸ ಸರಕಾರದ ಪ್ರತಿಜ್ಞಾ ಸ್ವೀಕಾರ ನಡೆಯಿತು. ಇಂತಹ ಸಮಾರಂಭಗಳಲ್ಲಿ ಭಾಗವಹಿಸಿದ ಎಲ್ಲರನ್ನೂ ತಕ್ಷಣವೇ ತಪಾಸಣೆ ಮಾಡಬೇಕು ಮತ್ತು ಈ ಮಹಮಾರಿ ಇನ್ನಷ್ಟು ಹರಡದಂತೆ ತಡೆಯಲು ಅವರನ್ನು ಏಕಾಂತವಾಸದಲ್ಲಿಡಬೇಕು.

ಸಂವಿಧಾನದ ರಕ್ಷಕರಾಗಿ, ನೀವು, ಧರ್ಮ, ಜಾತಿ, ವರ್ಗದ ಆಧಾರದಲ್ಲಿ ಭೇದವೆಣಿಸದ ಒಂದು ವೈರಿಯ ವಿರುದ್ಧ ಹೋರಾಟದಲ್ಲಿ ದೇಶ ಐಕ್ಯತೆಯಿಂದಿರಬೇಕಾದ ಈಗಿನ ಯಾತನಾಮಯ ಸಮಯದಲ್ಲಿ ಕೋಮುವಾದಿ ಧ್ರುವೀಕರಣವನ್ನು ಬೆಳೆಯಲು ಬಿಡುವುದಿಲ್ಲ ಎಂಬ ನಿರೀಕ್ಷೆ ನನ್ನದು. ನಮಗೆ ಬೇಕಾಗಿರುವುದು ಮಾನವೀಯ ಅನುತಾಪವೇ ಹೊರತು ಅಪರಾಧೀಕರಣ ಅಲ್ಲ ಎಂಬುದನ್ನು ದಯವಿಟ್ಟು "ನಿಮ್ಮ ಸರಕಾರ"ಕ್ಕೆ ಮನದಟ್ಟು ಮಾಡಿ.

ಈ ಪ್ರಶ್ನೆಗಳನ್ನು ಅದಕ್ಕೆ ಅರ್ಹವಾದ ಎಲ್ಲ ಗಂಭೀರತೆ ಮತ್ತು ತುರ್ತಿನಿಂದ ಗಮನಕ್ಕೆ ತಗೊಳ್ಳಬೇಕು ಎಂದು ನಾನು ನಿಮ್ಮನ್ನು ಪ್ರಾರ್ಥಿಸುತ್ತೇನೆ. ಈ ವಿಷಯಗಳ ಮೇಲೆ ತಕ್ಷಣವೇ ಕ್ರಿಯೆಗಿಳಿಯಬೇಕು, ಮತ್ತೆ ಹೇಳುತ್ತೇನೆ, ಸಮರೋಪಾದಿಯಾಗಿ ಕ್ರಿಯೆಗಿಳಿಯಬೇಕು ಎಂದು "ನಿಮ್ಮ ಸರಕಾರ"ಕ್ಕೆ ದಯವಿಟ್ಟು ನಿರ್ದೇಶನ ನೀಡಿ.

ನಿಮ್ಮ ವಿಶ್ವಾಸಿ
ಸೀತಾರಾಂ ಯೆಚುರಿ
ಪ್ರಧಾನ ಕಾರ್ಯದರ್ಶಿ

ಜನಗಳ ಆತಂಕಗಳಿಗೆ ಸಮರೋಪಾದಿಯಲ್ಲಿ ಗಮನಕೊಡಿ–ಎಡಪಕ್ಷಗಳ ಆಗ್ರಹ

ಪುಟ 2 ರಿಂದ

ಬೆಂಬಲ ಬೆಲೆಗಳಲ್ಲಿ ಖರೀದಿಸಬೇಕೆಂದು ನಿರ್ದೇಶನ ನೀಡಬೇಕು.

2. ಇವುಗಳಲ್ಲಿ ಹೆಚ್ಚಿನ ಕ್ರಮಗಳನ್ನು ರಾಜ್ಯಸರಕಾರಗಳು ಕೈಗೊಳ್ಳ ಬೇಕಾಗುತ್ತದೆ. ರಾಜ್ಯ ಸರಕಾರಗಳು ಈಗಾಗಲೇ ತೀವ್ರ ಹಣಕಾಸು ಕೊರತೆಯನ್ನು ಎದುರಿಸುತ್ತಿವೆ, ಅವು ಈ ಕಾರ್ಯಭಾರಗಳನ್ನು ಕೈಗೆತ್ತಿಕೊಳ್ಳುವ ಸ್ಥಿತಿಯಲ್ಲಿ ಇರುವುದಿಲ್ಲ. ಕೇಂದ್ರ ಸರಕಾರ ಅವುಗಳಿಗೆ ಉದಾರ ಹಣಕಾಸು ಸಹಾಯ ನೀಡಬೇಕಾಗುತ್ತದೆ. ರಾಜ್ಯಗಳು ಸಾಲ ತರಲು ಇರುವ ಮಿತಿಯನ್ನು ಹೆಚ್ಚಿಸಬೇಕು. ಕೋಟ್ಯಂತರ ಭಾರತೀಯ ಜನಗಳ ಬದುಕು ಮತ್ತು ಜೀವನೋಪಾಯ ಇದರ ಮೇಲೆ ನಿಂತಿದೆ.

3. ಲಾಕ್‌ಡೌನ್‌ನ ಅವಧಿಯಲ್ಲಿ ಆವಶ್ಯಕ ಸರಕುಗಳು ಮತ್ತು ಔಷಧಿಗಳ ಕೊರತೆಗಳು ಹೆಚ್ಚೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಆವಶ್ಯಕ ಸಾಮಗ್ರಿಗಳನ್ನು ಒಯ್ಯುವ ಟ್ರಕ್‌ಗಳ ಅಂತರ್–ರಾಜ್ಯ ಸಾಗಾಟದ ಬಗ್ಗೆ ಸ್ಪಷ್ಟತೆಗಳಿಲ್ಲ. ಇದನ್ನು ಕೂಡಲೇ ಸರಿಪಡಿಸಬೇಕು., ಮತ್ತು ಜನಗಳ ಎಲ್ಲ ಆವಶ್ಯಕತೆಗಳನ್ನು ಪೂರೈಸಬೇಕು.

4. ಧೈರ್ಯದಿಂದ ತಮ್ಮ ಕರ್ತವ್ಯಗಳನ್ನು ನಿಭಾಯಿಸುತ್ತಿರುವ ಆರೋಗ್ಯ ಕಾರ್ಯಕರ್ತರಿಂದ ಸುರಕ್ಷಾತ್ಮಕ ವೈಯಕ್ತಿಕ ಪರಿಕರಗಳು ಮತ್ತು ಔಷಧಿಗಳ ಕೊರತೆಯ ಬಗ್ಗೆ ನೈಜ ದೂರುಗಳು ಹೆಚ್ಚುತ್ತಿವೆ. ಅವನ್ನು ತಕ್ಷಣವೇ ಪೂರೈಸಬೇಕು. ವೆಂಟಿಲೇಟರುಗಳು ಮುಂತಾದ ಸಾಧನಗಳನ್ನು ತುರ್ತಾಗಿ ಆದ್ಯತೆಯ ಮೇಲೆ ಖರೀದಿಸಬೇಕು. ಕೇಂದ್ರ ಸರಕಾರ ತಕ್ಷಣವೇ ಇವುಗಳ ಪೂರೈಕೆಯನ್ನು ಹೆಚ್ಚಿಸಬೇಕು.

ಇತರ ಜೀವ ಬೆದರಿಕೆ ಇರುವ ಪರಿಸ್ಥಿತಿಗಳಿಂದ ನರಳುತ್ತಿರುವ ಜನಗಳ ಶುಶ್ರೂಷೆಯ ಆರೋಗ್ಯ ಸೌಕರ್ಯಗಳನ್ನು ನಿರ್ಲಕ್ಷಿಸುವಂತಿಲ್ಲ. ಇದುವರೆಗೆ ಕನಿಷ್ಟ 43 ರೋಗಿಗಳು ಮರಣ ಹೊಂದಿದ್ದಾರೆ ಎಂದು ಕೆಲವು ವರದಿಗಳು ಅಂದಾಜು ಮಾಡಿವೆ.

5. ಈ ಲಾಕ್‌ಡೌನ್ ಅವಧಿಯಲ್ಲಿ ಈ ಮಹಾಮಾರಿ ಹರಡುತ್ತಿರುವ ಗುಂಪುಗಳನ್ನು ಗುರುತಿಸಬೇಕು, ಅವನ್ನು ಪ್ರತ್ಯೇಕಗೊಳಿಸಬೇಕು ಮತ್ತು ಜನಗಳಿಗೆ ಸರಿಯಾಗಿ ಚಿಕಿತ್ಸೆ ಒದಗಿಸಬೇಕು. ಐಸಿಎಂಆರ್ ಈಗ ಒಂದು ತ್ವರಿತ ತಪಾಸಣೆ ಕಿಟ್‌ಗೆ ಮಂಜೂರಾತಿ ನೀಡಿದೆ. ಇದನ್ನು ದೇಶದಾದ್ಯಂತ ದೊಡ್ಡ ಪ್ರಮಾಣದಲ್ಲಿ ಬಳಸುವಂತಾಗಬೇಕು. ಈಗ, ಭಾರತದ ತಪಾಸಣಾ ದರ ಜಗತ್ತಿನಲ್ಲೇ ಅತೀ ಕಡಿಮೆಯಾಗಿದೆ. ದಕ್ಷಿಣ ಕೊರಿಯಾಕ್ಕಿಂತ 241 ಪಟ್ಟು ಕಡಿಮೆ ಇದೆ.

6. ತಬ್ಲಿಘಿ ಜಮಾತ್‌ನ ಗೋಷ್ಠಿಯ ನಂತರ ಉನ್ಮತ್ತ ಕೋಮುವಾದಿ ಪ್ರಚಾರಗಳು ಹೆಚ್ಚುತ್ತಿರುವ ಬಗ್ಗೆ ಕಳವಳ ಹೆಚ್ಚುತ್ತಿದೆ. ಈ ಗೋಷ್ಠಿ ಅದರ ಸಂಘಟಕರ ಶುದ್ಧ ಬೇಜವಾಬ್ದಾರಿ ಕೃತ್ಯ. ಆದರೆ ಅದನ್ನು ಒಂದು ಕೋಮುವಾದಿ ಧ್ರುವೀಕರಣದ ಸಾಧನವಾಗಿ ಪರಿವರ್ತಿಸುವುದು ಈ ಮಹಾಮಾರಿಯನ್ನು ಎದುರಿಸಿ ಸೋಲಿಸಬೇಕಾದ ಸಮರದಲ್ಲಿ ಎಲ್ಲ ಭಾರತೀಯರ ಐಕ್ಯ ಪ್ರಯತ್ನಗಳನ್ನು ಒಡೆಯುತ್ತದಷ್ಟೇ. ಕಳಂಕದ ಭಾವನೆಯನ್ನು ಹೋಗಲಾಡಿಸಲು, ರೋಗಿಗಳನ್ನು ಕ್ರಿಮಿನಲ್‌ಗಳೆಂದು ಕಾಣುವ ಬದಲು ಅನುತಾಪದಿಂದ ಕಾಣುವಂತಾಗಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ಈ ಮಹಾಮಾರಿಯ ಬಗ್ಗೆ ಹುಸಿ ಸುದ್ದಿಗಳನ್ನು ದಮನ ಮಾಡಬೇಕು, ವೈಜ್ಞಾನಿಕ ಸಂಗತಿಗಳನ್ನು ತಿಳಿಸಬೇಕು. ಕೊವಿಡ್–19ರ ವಿರುದ್ಧ ಹೋರಾಟ ನಾವೆಲ್ಲರೂ ಒಗ್ಗಟ್ಟಿನಿಂದ, ಅದನ್ನು ಸೋಲಿಸುವ ದೃಢನಿರ್ಧಾರದಿಂದ ನಡೆಸುವ ಹೋರಾಟ ಎಂದು ಮನಗಾಣಿಸಲು ಕೇಂದ್ರ ಸರಕಾರ ತುರ್ತಾಗಿ ಮಧ್ಯಪ್ರವೇಶಿಸಬೇಕು.

ಸೀತಾರಾಂ ಯೆಚುರಿ, ಪ್ರಧಾನ ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಡಿ.ರಾಜ, ಪ್ರಧಾನ ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ, ದೀಪಂಕರ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ–ಲೆನಿನ್‌ವಾದಿ)–ಲಿಬರೇಷನ್, ದೇಬಬ್ರತ ಬಿಸ್ವಾಸ್, ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಮತ್ತು ಮನೋಜ್ ಭಟ್ಟಾಚಾರ್ಯ, ರಿವೊಲ್ಯುಷನರಿ ಸೋಶಲಿಸ್ಟ್ ಪಾರ್ಟಿ ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

ವಲಸೆ ಕಾರ್ಮಿಕರ ಪರಿಹಾರ ಶಿಬಿರಗಳಲ್ಲಿ 68.8% ಕೇರಳದಲ್ಲೇ, ಕೇಂದ್ರ ಸರಕಾರದಿಂದ ಸಿಕ್ಕಿದ ಪರಿಹಾರ ಮೊತ್ತ ಕೇವಲ 1.4%

ಮೋದಿ ಸರಕಾರ ಕೇವಲ ನಾಲ್ಕು ಗಂಟೆಗಳ ಸಮಯಾವಕಾಶ ಕೊಟ್ಟು, ಯಾವುದೇ ಪರಿಹಾರ ಪ್ರಕಟಿಸದೆ ಲಾಕ್‌ಡೌನ್ ಘೋಷಿಸಿದಾಗ ಲಕ್ಷ–ಲಕ್ಷ ವಲಸೆ ಕಾರ್ಮಿಕರು ಅಕ್ಷರಶಃ ಬೀದಿಪಾಲಾದರು, ಬೇರೆ ದಾರಿಯಿಲ್ಲದೆ ತಂತಮ್ಮ ಊರುಗಳಿಗೆ ಕಾಲ್ನಡಿಗೆಯಲ್ಲಿ ಹೊರಟರು. ಇದರಿಂದ ಉಂಟಾದ ಪರಿಸ್ಥಿತಿಯಿಂದ ಗಲಿಬಿಲಿಗೊಂಡ ಕೇಂದ್ರ ಸರಕಾರದ ಗೃಹ ಮಂತ್ರಾಲಯ ಎಲ್ಲ ರಾಜ್ಯಗಳ ಗಡಿಗಳನ್ನು ಮುಚ್ಚಲು ಆದೇಶ ನೀಡಿತು, ನಂತರವಷ್ಟೇ, ಈ ವಲಸೆ ಕಾರ್ಮಿಕರಿಗೆ ಆಶ್ರಯ, ಆಹಾರ ಒದಗಿಸುವ ಪರಿಹಾರ ಕೇಂದ್ರಗಳನ್ನು ರಚಿಸುವಂತೆ ರಾಜ್ಯಗಳಿಗೆ ಸೂಚನೆ ನೀಡಿತು.

ವಲಸೆ ಕಾರ್ಮಿಕರು, ಅವರ ಮಕ್ಕಳು ರಸ್ತೆಗಳಲ್ಲಿ ನಡೆದು ಹೋಗುವ ದೃಶ್ಯ ಸಹಜವಾಗಿಯೇ ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳ ಮನ ಕಲಕಿತು. ಕೇಂದ್ರ ಸರಕಾರದ ಇಂತಹ ವಿಫಲತೆಯ ಹಿನ್ನೆಲೆಯಲ್ಲಿ ಹಿರಿಯ ಸಾಮಾಜಿಕ ಕಾರ್ಯಕರ್ತರಾದ ಹರ್ಷ್ ಮಂದರ್ ಮತ್ತು ಅಂಜಲಿ ಭಾರಧ್ವಾಜ್ ಸುಪ್ರಿಂ ಕೋರ್ಟಿನಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದರು.

ಇದಕ್ಕೆ ಸಂಬಂಧಪಟ್ಟಂತೆ ಮೋದಿ ಸರಕಾರದ ಗೃಹ ಮಂತ್ರಾಲಯ ನ್ಯಾಯಾಲಯದಲ್ಲಿ ಒಂದು ವರದಿಯನ್ನು ಸಲ್ಲಿಸಬೇಕಾಗಿ ಬಂತು. ಇದರ ಪ್ರಕಾರ ದೇಶಾದ್ಯಂತ 22,567 ಪರಿಹಾರ ಶಿಬಿರಗಳು ಮತ್ತು ಆಶ್ರಯಗಳಿದ್ದು ಇದರಲ್ಲಿ 15,541 ನ್ನು, ಅಂದರೆ 68.8ಶೇ.ವನ್ನು ಕೇರಳ ಸರಕಾರವೊಂದೇ ನಡೆಸುತ್ತಿದೆ. ಎರಡನೇ ಸ್ಥಾನದಲ್ಲಿರುವ ಮಹಾರಾಷ್ಟ್ರದಲ್ಲೂ ಸರಕಾರ ನಡೆಸುತ್ತಿರುವ ಪರಿಹಾರ ಶಿಬಿರಗಳ ಸಂಖ್ಯೆ ಕೇವಲ 1135. ಇತರ ರಾಜ್ಯಗಳಲ್ಲಂತೂ ಈ ಸಂಖ್ಯೆ ಎರಡು ಮತ್ತು ಮೂರಂಕಿಗಳಿಗೇ ಸೀಮಿತವಾಗಿದೆ.

ದೇಶಾದ್ಯಂತ 6,31,119 ಜನಗಳು ಸರಕಾರೀ ಪರಿಹಾರ ಕೇಂದ್ರಗಳಲ್ಲಿದ್ದಾರೆ. ಇದರಲ್ಲಿ ಕೇರಳದ ಪರಿಹಾರ ಕೇಂದ್ರಗಳಲ್ಲಿ ಇರುವವರ ಸಂಖ್ಯೆ 3,02,016 ಅಥವ 47.9ಶೇ.

ಕೇರಳ ಸರಕಾರ ಲಾಕ್‌ಡೌನಿನ ಮೊದಲೇ ಅದು ಅತಿಥಿ ಕಾರ್ಮಿಕರೆಂದು ಹೆಸರಿಸಿದ ವಲಸೆ ಕಾರ್ಮಿಕರಿಗೂ ಸೇರಿದಂತೆ ಪರಿಹಾರ ಕ್ರಮಗಳನ್ನು ಪ್ರಕಟಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ದೇಶದಲ್ಲೇ ಮೊದಲಿಗೆ ಮಹಾಮಾರಿಯನ್ನು ತಡೆಗಟ್ಟುವ ಕಾರ್ಯಾಚರಣೆಯನ್ನು ಆರಂಭಿಸಿದ ಕೇರಳ, ಇದರಿಂದಾಗಿಯೇ ಕಳೆದ ವಾರದ ವರೆಗೂ ಸೋಂಕು ಪತ್ತೆಯಾದವರ ಸಂಖ್ಯೆಯ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿತ್ತು, ಈಗ ಐದನೇ ಸ್ಥಾನಕ್ಕಿಳಿದಿದೆ, ದೇಶದಲ್ಲಿ ಇದುವರೆಗೆ ದಾಖಲಾಗಿರುವ 173 ಸಾವುಗಳಲ್ಲಿ ಕೇರಳದ ಸಂಖ್ಯೆ ಎರಡು ಮಾತ್ರ.

ಆದರೂ ಕೇಂದ್ರ ಸರಕಾರ ಕೊವಿಡ್ ಪರಿಹಾರ ಕಾರ್ಯಗಳಿಗೆ ಕೊಟ್ಟಿರುವ 11,092 ಕೋಟಿ ರೂ.ಗಳಲ್ಲಿ ಕೇರಳಕ್ಕೆ ಸಿಕ್ಕಿದ್ದು ಕೇವಲ 157 ಕೋಟಿ ರೂ, ಅಂದರೆ 1.4%!

ಅಭಿವೃದ್ಧ ಪಾಶ್ಚಿಮಾತ್ಯ ದೇಶಗಳಲ್ಲಿ ಕೊವಿದ್–19 ಮಹಾಮಾರಿಗೆ ಬಲಿಯಾದ ಸಾವಿರಾರು ಜನರ ರಕ್ತದ ಕಲೆ ಈ ದೇಶದ ನವ–ಉದಾರವಾದಿ ಪೀಳಿಗೆಯ ನಾಯಕರ ಕೈಗಳಿಗೆ ಅಂಟಿದೆ. ಈ ನಾಯಕರು ಪ್ರತಿನಿಧಿಸುವ ಅನಿಬರ್ಂಧಿತ ಬಂಡವಾಳಶಾಹಿ ವ್ಯವಸ್ಥೆಯ "ನವ ಉದಾರವಾದಿ ಕ್ರೌರ್ಯ"ದ ಅಪರಾಧಗಳನ್ನು ಕೊವಿದ್–19 ಮಹಾಮಾರಿ ಬಯಲಿಗೆಳೆದಿದೆ. ಇನ್ನೊಂದೆಡೆ ಸಮಾಜವಾದಿ ಕ್ಯೂಬಾ ತನ್ನನ್ನು ಆರ್ಥಿಕ ದಿಗ್ಬಂಧನಕ್ಕೆ ಗುರಿ ಮಾಡಿದ ಇಟಲಿಗೆ ವೈದ್ಯರ ತಂಡ ಕಳಿಸಿ ಮತ್ತು ಬ್ರಿಟಿಶ್ ವಿಹಾರಿ ಹಡಗಿನ ಪ್ರಯಾಣಿಕರಿಗೇ ಆಸರೆ ನೀಡಿ ಸಮಾಜವಾದಿ ಮಾನವೀಯತೆ ಮೆರೆದಿದೆ. ಈ ಎರಡರ ನಡುವಿನ ಅಗಾಧ ವ್ಯತ್ಯಾಸವನ್ನು ತೋರಿದ ಕೊವಿದ್–19 ಜಗತ್ತಿಗೆ ಕಲಿಸಿರುವ ಪಾಠವೆಂದರೆ 'ನಾವೆಲ್ಲರೂ ಕ್ಯೂಬಾ ಆಗಬೇಕು" ಎಂಬುದು. ಅಂದರೆ ಮಹಾನಾಯಕ ಫಿಡೆಲ್ ಕ್ಯಾಸ್ಟ್ರೋ ಪ್ರತಿಪಾದಿಸಿದ 'ವೈದ್ಯಕೀಯ ಅಂತರ್ರಾಷ್ಟ್ರೀಯ ಸೌಹಾರ್ದತೆ" ಮತ್ತು 'ಆರೋಗ್ಯ ಮೂಲಭೂತ ಹಕ್ಕು' ಎಂದು ಮಾನ್ಯ ಮಾಡುವ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಯ ನೀತಿಯನ್ನು ಪ್ರತಿಯೊಂದು ದೇಶ ಅಂಗೀಕರಿಸಿ ಪಾಲಿಸುವುದು.

ಕೋವಿಡ್–19ರ ಪಾಠ ನಾವೆಲ್ಲರೂ ಕ್ಯೂಬಾ ಆಗಬೇಕು!



ಆರ್ಥಿಕವಾಗಿ ಮಿಲಿಟರಿ ಶಕ್ತಿಯಲ್ಲಿ ಪ್ರಬಲರು ನಾವು ಎಂದು ಕೊಚ್ಚಿಕೊಳ್ಳುತ್ತಿದ್ದ ಯುಎಸ್ ಮತ್ತು ಯುರೋಪಿನ ಇಟಲಿ, ಸ್ಪೇನ್, ಪ್ರಾನ್ಸ್, ಜರ್ಮನಿ ಮತ್ತು ಬ್ರಿಟನ್ ದೇಶಗಳು ಈ ಕೊವಿದ್–19 ಸೋಂಕಿನಿಂದಾಗಿ ತತ್ತರಿಸಿ ಹೋಗಿವೆ. ಒಟ್ಟಾರೆಯಾಗಿ, ಸೋಂಕಿತರಲ್ಲಿ ಶೇ.70 ಕ್ಕಿಂತ ಹೆಚ್ಚು ಜನರು, ಅತಿ ಬಲಿಷ್ಟ ರಾಷ್ಟಗಳಾದ ಈ ಐದಾರು ದೇಶಗಳಲ್ಲಿಯೇ ಹೆಚ್ಚಾಗಿ ಸಾವನ್ನಪ್ಪಿದ್ದಾರೆ. ಅತ್ಯಂತ ಆಧುನಿಕ ವೈದ್ಯಕೀಯ ಹಾಗೂ ತಂತ್ರಜ್ಞಾನ ಸವಲತ್ತುಗಳನ್ನು ಹೊಂದ್ದಿದ್ದರೂ ಸಹಾ, ಈ ದೇಶಗಳಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ವೈಫಲ್ಯವನ್ನು ಮತ್ತು ಆ ಕುರಿತು ನಿರ್ಲಕ್ಷ್ಯವನ್ನು ಈ ಕೋವಿಡ್–19 ಮಹಾಮಾರಿ ಬಯಲಿಗೆಳೆದಿದೆ.

ಅಧ್ಯಕ್ಷ ಟ್ರಂಪ್ ಕೋವಿಡ್–19 ಸಾವಿನ ಸಂಖ್ಯೆ ಶೀಘ್ರವಾಗಿ ಅಮೆರಿಕಾದಲ್ಲಿಯೇ, ಸುಮಾರು 2.5 ಲಕ್ಷ ದಾಟಬಹುದು ಎಂದು ಒಪ್ಪಿಕೊಳ್ಳುವಂತಾಗಿದೆ. ಮುಂದಿನ "ಎರಡು ವಾರಗಳು ಅತ್ಯಂತ ನೋವಿನ ದಿನಗಳಾಗಿ" ಪರಿವರ್ತನೆ ಗೊಳ್ಳುವುದೆಂದು ಎಚ್ಚರಿಸಿದ್ದಾರೆ. ಯು.ಎಸ್ ಆಸ್ಪತ್ರೆಗಳು ರೋಗಿಗಳಿಂದ ತುಂಬಿ ತುಳುಕುತ್ತಿವೆ. ಪಿಪಿಇ ಗಳು, ವೆಂಟಿಲೇಟರ್ ಗಳು ಮತ್ತು ಮುಖವಾಡಗಳಂತಹ ಅಗತ್ಯ ಸಾಧನಗಳ ಕೊರತೆಯನ್ನು ಒಪ್ಪಿಕೊಂಡು, ಸಮುದಾಯವನ್ನು ರಕ್ಷಿಸಲು ಅಸಾಧ್ಯವೆಂಬ ತಮ್ಮ ಅಸಹಾಯಕತನವನ್ನು ಟ್ರಂಪ್ ವ್ಯಕ್ತ ಪಡಿಸಿದ್ದಾರೆ.

ಇಟಲಿಯ "ಹಾಟ್ ಸ್ಪಾಟ್" ಗೆ ಕ್ಯೂಬಾದ ಡಾಕ್ಟರುಗಳು

ಇಟಲಿ ಸರ್ಕಾರದ, ಪ್ರಾದೇಶಿಕ ಆರೋಗ್ಯ ಮತ್ತು ಕಲ್ಯಾಣ ಸಚಿವ ಗಿಯುಲಿಯೊ ಗಲೆರಾ, ಅಧಿಕೃತ ಆಹ್ವಾನದ ಮೇರೆಗೆ, ಕ್ಯೂಬಾ ದೇಶದ 52 ಪರಿಣಿತ ಡಾಕ್ಟರುಗಳು ಮತ್ತು ನರ್ಸ್‌ಗಳು ಇಟಲಿಯ ಮಿಲಾನ್ ನಗರದ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಈ ನಗರವು ವಿಶ್ವದ ಪ್ರಸಿದ್ಧ ನಾಲ್ಕು ಫ್ಯಾಷನ್ ರಾಜಧಾನಿಗಳಲ್ಲಿ ಒಂದಾಗಿದೆ. ಇದು ಉತ್ತರ ಇಟಲಿಯ ಲೊಂಬಾರ್ಡಿ ಪ್ರದೇಶದ ರಾಜಧಾನಿಯಾಗಿ ಗುರುತಿಸಲ್ಪಟ್ಟಿದೆ. ಈ ನಗರವು ಜಗತ್ತಿನ ಕೋವಿಡ್–19 ಸೋಂಕು ತಗುಲಿರುವ "ಹಾಟ್ ಸ್ಪಾಟ್" ಎಂದೂ ಕರೆಯಲ್ಪಟ್ಟಿದೆ. ಅಂದರೆ, ಇಲ್ಲಿಯೇ, ಸೋಂಕು ಪೀಡಿತರು ಇಲ್ಲಿಯವರೆಗೆ ಹೆಚ್ಚು ಸಾವನ್ನಪ್ಪಿರುವುದು. ಕ್ಯೂಬಾದ ಡಾಕ್ಟರ್ ಗಳ ತಂಡವು ಈ ನಗರದಲ್ಲಿನ ಕೋವಿಡ್–19 ಸೋಂಕಿತ ರೋಗಿಗಳನ್ನು ಗುಣಪಡಿಸುತ್ತಿದ್ದಾರೆ. ಇಟಲಿ ಕ್ಯೂಬಾದ 'ಬಿಳಿ ಕೋಟಿನ ಸೈನ್ಯ'ದ ವೈದ್ಯರನ್ನು ಸ್ವಾಗತಿಸಿದ 6 ನೇ ದೇಶ. ಕ್ಯೂಬನ್ ವೈದ್ಯರು ವೆನೆಜುವೇಲಾ, ನಿಕರಾಗುವ, ಜಮೈಕಾ, ಸುರಿನಾಮ್ ಮತ್ತು ಗ್ರೆನಾಡಗಳಲ್ಲಿ ಕೊವಿದ್–19 ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ವಿಪರ್ಯಾಸವೆಂದರೆ, ಸುಮಾರು 1 ಕೋಟಿ ಜನಸಂಖ್ಯೆ ಯನ್ನು ಹೊಂದಿರುವ ಈ ಪುಟ್ಟ ಸಮಾಜವಾದಿ ದೇಶದ ಮೇಲೆ ಅಮೆರಿಕಾ ವಿಧಿಸಿರುವ ಆರ್ಥಿಕ ನಿಬರ್ಂಧಗಳಿಗೆ, ಇಟಲಿ ಬಹಳ ಸಮಯದಿಂದ ಬೆಂಬಲಿಸಿಕೊಂಡು ಬಂದಿದೆ. ಈ ನಿಬರ್ಂಧಗಳನ್ನು ವಿಶ್ವಸಂಸ್ಥೆಯು ಮತ್ತೆ ಮತ್ತೆ ಕಾನೂನು ಬಾಹಿರ ಎಂದು ಘೋಷಿಸಿಕೊಂಡು ಬರುತ್ತಲೇ ಇದ್ದರೂ ಸಹಾ, ಇಟಲಿಯ ಆಳುವವರು ಯುಎಸ್ ನ ಪರವಾಗಿಯೇ ನಿಲುವು ಹೊಂದಿದ್ದರು. ಇಷ್ಟೆಲ್ಲಾ ಇದ್ದಾಗ್ಯೂ, ಕೋವಿಡ್–19 ಅನ್ನು ಎದುರಿಸಲು ಕ್ಯೂಬಾ ತನ್ನ ವೈದ್ಯಕೀಯ ತಂಡವನ್ನು ಕಳುಹಿಸಿ ಕೊಡಬೇಕೆಂದು



ಇಟಲಿಯಿಂದ ಸಹಾಯಕ್ಕಾಗಿ ಆಹ್ವಾನ ಬಂದಾಗ, ಇಲ್ಲವೆನ್ನಲಿಲ್ಲ. ಕ್ಯೂಬಾಕ್ಕೆ ತನ್ನ ಮಾನವೀಯತೆ ಮತ್ತು ಅಂತರಾಷ್ಟ್ರೀಯ ಸೌಹಾರ್ದತೆಯ ಗುಣಲಕ್ಷಗಳನ್ನು ಕಾಯ್ದುಕೊಳ್ಳುವುದೇ ಪ್ರಮುಖವಾಗಿತ್ತು. ಇದು ಸಮಾಜವಾದಿ ರಾಷ್ಟಗಳಿಂದ ಮಾತ್ರ ಸಾಧ್ಯವೆಂಬುದನ್ನು ಗಮನಿಸಬೇಕು.

ಇಂತಹ ಸಹಾಯ ಹಸ್ತ ಮೊದಲ ಬಾರಿಯೇನು ಅಲ್ಲ, ಈ ಹಿಂದೆಯೂ ಸಹಾ, ಯಾವುದೇ ರಾಷ್ಟಗಳಿಂದ ಆಹ್ವಾನ ಬಂದಾಗಲೆಲ್ಲಾ ಅದ್ಭುತ ಬೆಂಬಲ ನೀಡುತ್ತಲೇ ಬಂದಿದೆ. ಇದಕ್ಕಾಗಿ ಅಂತರಾಷ್ಟ್ರೀಯ ಪ್ರಶಂಸೆಯನ್ನು ಕೂಡ ಗಳಿಸಿದೆ. ಕ್ಯೂಬನ್ ವೈದ್ಯರ ಇಂತಹ ಕಾರ್ಯವು, ಫಿಡೆಲ್ ಕ್ಯಾಸ್ಟ್ರೋ ಹೇಳುತ್ತಿದ್ದ "ವೈದ್ಯಕೀಯ ಅಂತರಾಷ್ಟ್ರೀಯ ಸೌಹಾರ್ದತೆ"ಗೆ ಉತ್ತಮ ಮಾದರಿಯಾಗಿದೆ ಮತ್ತು ಈ ಮೂಲಕ ಕ್ಯೂಬಾವು ತನ್ನ ಸಮಾಜವಾದಿ ಗುಣಲಕ್ಷಣಗಳನ್ನು ಮತ್ತೊಮ್ಮೆ ಮೆರೆದಿದೆ ಎನ್ನಬಹುದು.

"ಧನ್ಯವಾದಗಳು : ಐ ಲವ್ ಕ್ಯೂಬಾ"

ಕೆರಿಬಿಯನ್ ಸಮುದ್ರದಲ್ಲಿ ಒಂದು ವಾರಕ್ಕೂ ಹೆಚ್ಚು ಕಾಲ ಬ್ರಿಟಿಷ್ ಹಡಗಿನಲ್ಲಿ ವಿಹಾರಕ್ಕೆಂದು ಹೋಗಿದ್ದ ಬ್ರಿಟಿಷ್ ಪ್ರಯಾಣಿಕರು ಸಿಕ್ಕಿ ಬಿದ್ದಿದ್ದರು. ಕೋರಾನಾ ವೈರಸ್ ಹೆಚ್ಚಾಗಿ ಆವರಿಸಿದ್ದ ಪ್ರದೇಶಗಳಿಂದ ಆಗಮಿಸಿದ್ದ ಪ್ರಯಾಣಿಕರಾದ್ದರಿಂದ ಹಾಗೂ ಇವರಲ್ಲೂ ಕೆಲವರು ಸೋಂಕಿತರು ಇದ್ದರು ಎಂಬ ಕಾರಣದಿಂದ, ಯಾವುದೇ ದೇಶಗಳು ಇವರನ್ನು ಕೆಳಗೆ ಇಳಿಯಲು ಬಿಡಲಿಲ್ಲ. ಬ್ರಿಟಿಷ್ ಕಾಮನ್‌ವೆಲ್ತ್ ಗೆ ಸೇರಿದ ಬಾರ್ಬಡೋಸ್ ಮತ್ತು ಬಹಾಮಾಸ್ ಸೇರಿದಂತೆ ಹಲವಾರು ಕೆರಿಬಿಯನ್ ದ್ವೀಪ ರಾಷ್ಟ ಗಳು ಕೂಡ, ಈ ಪ್ರಯಾಣಿಕರನ್ನು ಹೊತ್ತು ತಂದಿದ್ದ ಹಡಗನ್ನು ನಿಲ್ಲಿಸಲು ಬಿಡಲಿಲ್ಲ. ಆ ಸಂದರ್ಭದಲ್ಲಿ, ಕ್ಯೂಬಾ ದೇಶವು ಅವರನ್ನು ಹವಾನದಲ್ಲಿ ಕೆಳಗಿಳಿಸಿಕೊಂಡು, ಆ ಎಲ್ಲಾ ಪ್ರಯಾಣಿಕರಿಗೂ ಚಿಕಿತ್ಸೆ ನೀಡಿತು ಎಂಬುದು ಸಮಾಜವಾದಿ ದೇಶಗಳ ನೈಜ ಮಾನವೀಯತೆಗೆ ಇನ್ನೊಂದು ಮಾದರಿಯಾಗಿದೆ.

"ಧನ್ಯವಾದಗಳು ಕ್ಯೂಬಾ....ಯಾರೂ ಇಲ್ಲದಿದ್ದಾಗ ನೀವು ನಮ್ಮ ನೆರವಿಗೆ ಬಂದು ತಂಗಲು ತಾಣವನ್ನೂ ನೀಡಿದ್ದೀರಿ, ನಿಮ್ಮನ್ನು ನಾವೆಂದು ಮರೆಯುವುದಿಲ್ಲ" ಎಂದು ಮತ್ತು "ಐ ಲವ್ ಕ್ಯೂಬಾ" ಎಂಬ ಬ್ಯಾನರ್ ಮೂಲಕ ಪ್ರಯಾಣಿಕರೆಲ್ಲರೂ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಎಲ್ಲರಿಗೂ ಆರೋಗ್ಯ ಸಂರಕ್ಷಣೆ ಮೂಲಭೂತ ಮಾನವ ಹಕ್ಕಾಗಿಸಿರುವುದು, ರೋಗಿಗಳ ಆರೈಕೆಗಾಗಿ ಅಂತರಾಷ್ಟ್ರೀಯ ಆಹ್ವಾನಗಳು ಬಂದಾಗ ಸ್ಪಂದಿಸುವುದು, ಆರೋಗ್ಯಕರ ಸಮುದಾಯಕ್ಕೆ, ಆರೋಗ್ಯ ಸಾಕ್ಷರತೆಗೆ ಮತ್ತು ಆರೋಗ್ಯಕರ ಜೀವನ ಶೈಲಿಗೆ ಹೂಡಿಕೆ ಮತ್ತು ಉತ್ತೇಜನ – ಇವೆಲ್ಲಾ ಕ್ಯೂಬಾದ ಅಸಾಧಾರಣ ಪವಾಡಗಳೆಂದೇ ಕರೆಯಬಹುದು. ಕ್ಯೂಬಾದ ಈ ಪವಾಡಗಳ ಮೂಲ ಇರುವುದು 1959 ರಲ್ಲಿ ಕ್ಯೂಬನ್ ಕ್ರಾಂತಿಯನ್ನು ಮುನ್ನಡೆಸಿದ ಫಿಡೆಲ್ ಕ್ಯಾಸ್ಟ್ರೋ ಮತ್ತು ಅವರ ಒಡನಾಡಿಗಳು, ಆರೋಗ್ಯ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ನಿರೂಪಿಸಿದ್ದರಲ್ಲಿ. ಜನರನ್ನು ಆರೋಗ್ಯ ವ್ಯವಸ್ಥೆಯ ಕೇಂದ್ರವಾಗಿಡುವುದು ಅದರ ಪರಮ ಗುರಿಯಾಗಿತ್ತು. ಈ ಹೊಸ ವ್ಯವಸ್ಥೆಯು "ಕುಟುಂಬದ ವೈದ್ಯರು ಮತ್ತು ದಾದಿಯರ" ಕಾರ್ಯಕ್ರಮದ ಮೂಲಕ, ಪ್ರತಿ ನೆರೆಹೊರೆಗೆ ಪ್ರಾಥಮಿಕ ಆರೋಗ್ಯ ಸೇವೆಯನ್ನು ಖಾತ್ರಿಗೊಳಿಸುತು.

ಈ ವ್ಯವಸ್ಥೆಯ ಯಶಸ್ಸನ್ನು ಕ್ಯೂಬಾದಲ್ಲಿ ಇದೀಗ ಕಾಣಬಹುದಾಗಿದೆ. ಇಲ್ಲಿನ ಶಿಶು ಮರಣ ಪ್ರಮಾಣ 1000 ಕ್ಕೆ 4.2 ಇದೆ. ಇದು ಲ್ಯಾಟಿನ್ ಅಮೆರಿಕಾದಲ್ಲಿ ಅತ್ಯಂತ ಕಡಿಮೆ, ಮಾತ್ರವಲ್ಲದೆ, ಯುಎಸ್ ಗಿಂತಲೂ ಕಡಿಮೆ ಇದೆ. ಆದರೂ ಅದರ ತಲಾ ಆರೋಗ್ಯ ವೆಚ್ಚಗಳು ಯುಎಸ್ ಮಾಡುವ ಮೊತ್ತದ ಒಂದು ಸಣ್ಣ ಭಾಗವಷ್ಟೇ. ಮೆನಿಂಜೈಟಿಸ್ ನಿಂದ ಹಿಡಿದು ಕ್ಯಾನ್ಸರ್ ವರೆಗಿನ ರೋಗಗಳನ್ನು ಎದುರಿಸಲು ಅತ್ಯಾಧುನಿಕ ಕ್ರಮಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕ್ಯೂಬನ್ ವೈದ್ಯ ವಿಜ್ಞಾನಿಗಳ ಯಶಸ್ಸು ಇದರ ಮತ್ತೊಂದು ಯಶೋಗಾಥೆಯಾಗಿದೆ.

"ಸೋವಿಯತ್ ನಂತರದ ಜಗತ್ತಿನಲ್ಲಿ, ಒಂದು ಕ್ರಾಂತಿಕಾರಿ ಜನರು ಹೇಗೆ ಬದುಕುಳಿದರು" ಎಂಬ ಪುಸ್ತಕದಲ್ಲಿಗ್ಲಾಸ್ಗೋ ವಿ.ವಿ ಯ ಲೇಖಕಿ ಡಾ. ಹೆಲೆನ್ ಯಾಫೆ, 1959ರಿಂದ ಇಲ್ಲಿಯವರೆಗೆ ಕ್ಯೂಬಾದ 'ಬಿಳಿ ಕೋಟಿನ ಸೈನ್ಯ' ಜಗತ್ತಿನ ಯಾವುದೇ ಮೂಲೆಯಲ್ಲಿ (ಹೆಚ್ಚಾಗಿ ಬಡ ದೇಶಗಳಲ್ಲಿ) ಅನಾಹುತ ನಡೆದಾಗ ಅಲ್ಲಿ ತೆರಳಿ ಹೇಗೆ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದೆ ಎಂದು ವಿವರಿಸಿದ್ದಾರೆ. ಕ್ಯೂಬಾದ ವೈದ್ಯರು ಹೈತಿಯ ಕಾಲೆರಾದಿಂದ ಹಿಡಿದು ಪಶ್ಚಿಮ ಆಫ್ರಿಕಾದ ಎಬೊಲಾ ಸಾಂಕ್ರಾಮಿಕದ ವರೆಗೆ ಹೇಗೆ ಕೆಲಸ ಮಾಡಿದ್ದಾರೆ ಮತ್ತು ವಿವಿಧ ಸಾಂಕ್ರಾಮಿಕ ರೋಗಗಳ ಚಿಕಿತ್ಸೆಗೆ ಔಷಧಿ ಮತ್ತು ಲಸಿಕೆಗಳ ಅಭಿವೃದ್ಧಿಗೆ ಹೇಗೆ ಕ್ಯೂಬಾ ಕೆಲಸ ಮಾಡುತ್ತಿದೆ ಎಂದೂ ವಿವರಿಸಿದ್ದಾರೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕ್ಯೂಬಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮಾಹಿತಿಯಂತೆ, 1960 ರ ದಶಕದಿಂದ, 6 ಲಕ್ಷಕ್ಕೂ ಹೆಚ್ಚು ಕ್ಯೂಬನ್ ವೈದ್ಯಕೀಯ ಸಿಬ್ಬಂದಿಯನ್ನು ಜಗತ್ತಿನ 160 ದೇಶಗಳಿಗೆ ಕಳುಹಿಸಿದೆ. 2018 ರಲ್ಲಿ 67 ದೇಶಗಳಲ್ಲಿ ಸುಮಾರು 55,000 ಕ್ಯೂಬನ್ ವೈದ್ಯಕೀಯ ತಜ್ಞರು ಕೆಲಸ ಮಾಡುತ್ತಿದ್ದರು. ಇದು ಅಂಚಿನಲ್ಲಿರುವ ಪ್ರದೇಶಗಳ ಹತ್ತಾರು ಸಾವಿರ ಸ್ಥಳೀಯ ಸಿಬ್ಬಂದಿಗೆ ವೈದ್ಯಕೀಯ ತರಬೇತಿಯನ್ನು ಸಹಾ ನೀಡಿದೆ.

'ಕೊವಿದ್ ಗೆ ಬಲಿಯಾದವರ ರಕ್ತದ ಕಲೆ ಇವರ ಕೈಗಂಟಿದೆ'

ಒಂದು ಕಡೆ ಪುಟ್ಟ ದೇಶ ಕ್ಯೂಬಾದ ಮಹತ್ತಾದ ಆರೋಗ್ಯ ಕ್ಷೇತ್ರದ ಸಾಧನೆಗಳನ್ನು ಬೆಳಕಿಗೆ ತಂದರೆ, ಜಗತ್ತಿನ ಅತ್ಯಂತ ಮುಂದುವರಿದ ಪಾಶ್ಚಿಮಾತ್ಯ ರಾಷ್ಟಗಳಲ್ಲಿ ಸಾರ್ವಜನಿಕ ಆರೋಗ್ಯ ರಕ್ಷಣೆಗೆ ತೋರಿದ ದಿವ್ಯ ನಿರ್ಲಕ್ಷ್ಯವನ್ನು ಸಹ ಕೋವಿಡ್–19 ಮಹಾಮಾರಿ ಬಯಲಿಗೆಳೆದಿದೆ. ಅಮೆರಿಕಾ, ಬ್ರಿಟನ್, ಸೇರಿದಂತೆ ಈ ಅಭಿವೃದ್ಧ ದೇಶಗಳು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಒದಗಿಸದೆ, ಅದರಲ್ಲೂ 2008ರ ಬಿಕ್ಕಟ್ಟಿನ ನಂತರ ತೀವ್ರವಾಗಿ ಕಡಿತಗೊಳಿಸಿದ ಪರಿಣಾಮ ಹಾಗೂ ನವ ಉದಾರವಾದ ನೀತಿಗಳ ಭಾಗವಾಗಿ ಕಳೆದ ನಾಲ್ಕು ದಶಕಗಳಲ್ಲಿ, ಖಾಸಗಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಟ್ಟ ಮೂಲ ಕಾರಣಗಳಿಂದಾಗಿ, ಕೊವಿಡ್–19 ಮಹಾಮಾರಿಗೆ ಸಾವಿರಾರು ಜನ ಬಲಿಯಾಗುವಂತೆ ಮಾಡಿದೆ. 2003ರಿಂದ ಆಗಾಗ ಬರುತ್ತಿದ್ದ ಸಾಂಕ್ರಾಮಿಕಕ್ಕೆ ಅಲ್ಲಿನ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ ಸೂಕ್ತ ಪ್ರತಿಸ್ಪಂದನೆ ಕೊಡಲು ಸಾಧ್ಯವಾಗಿಲ್ಲ ಎಂದು ಗೊತ್ತಿದ್ದೂ ಏನೂ ಮಾಡಲಿಲ್ಲ. ಜನವರಿ ಕೊನೆಯ ಹೊತ್ತಿಗೆ ಕೊವಿದ್ ಮಹಾಮಾರಿಯ ಭೀಕರತೆ ಗೊತ್ತಾದಾಗಲೂ ಅದಕ್ಕೆ ತುರ್ತಾಗಿ ಸ್ಪಂದಿಸದೆ ಇದ್ದು, ಕೊವಿದ್–19ಕ್ಕೆ ಬಲಿಯಾದವರ ರಕ್ತದ ಕಲೆ ಈ ದೇಶದ ನಾಯಕರ ಕೈಗಳಿಗೆ ಅಂಟಿದೆ.

ಪ್ರಸಿದ್ಧ ಚಿಂತಕರಾದ, ನೋಮ್ ಚೋಮ್ಸ್ಕಿ ಇತ್ತೀಚಿಗೆ ನೀಡಿದ ಒಂದು ಸಂದರ್ಶನದಲ್ಲಿ ಈ ರೀತಿ ವಿವರಿಸಿದ್ದಾರೆ. "ವಿಜ್ಞಾನಿಗಳು ಹಲವಾರು ವರ್ಷಗಳಿಂದ ಸಾಂಕ್ರಾಮಿಕ ರೋಗದ ಬಗ್ಗೆ ಎಚ್ಚರಿಕೆ ನೀಡುತ್ತಾ ಬಂದಿದ್ದಾರೆ. 2003 ರಲ್ಲಿ ಬಂದ 'ಸಾರ್ಸ್' ಸಾಂಕ್ರಾಮಿಕ ರೋಗಗಳು ಕೋರೊನಾ ವೈರಸ್ ನಿಂದ ಉಂಟಾಗಿದೆ. ಇದರ ಪರಿಹಾರಕ್ಕಾಗಿ ಲಸಿಕೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ಆದರೆ, ಇದರ ಪ್ರಕ್ರಿಯಗಳು 'ಕ್ಲಿನಿಕಲ್–ಪೂರ್ವ' ಹಂತವನ್ನು ಮೀರಿ ಮುಂದುವರಿಯಲಿಲ್ಲ. ಹಾಗೆಯೇ, ಅವರ ಪ್ರಕಾರ ಏಕಾಏಕಿಯಾಗಿ ಯಾವುದೇ ಔಷಧಿ ತಯಾರಿಕೆಗಾಗಿ, ಮತ್ತು ಸಾಂಕ್ರಾಮಿಕಕ್ಕೆ ಕ್ಷಿಪ್ರ ಪ್ರತಿಕ್ರಿಯೆ ವ್ಯವಸ್ಥೆ ಯನ್ನು ಜಾರಿಗೆ ತರಲಾಗಲಿಲ್ಲ ಅಥವಾ ರಕ್ಷಣಾ ಪರಿಹಾರ ಕಾರ್ಯಗಳನ್ನು ಅಭಿವೃದ್ಧಿ ಪಡಿಸಲು ಉಪಕ್ರಮಗಳನ್ನು ಕೈಗೊಳ್ಳಲಿಲ್ಲ. ಏಕೆಂದರೆ, "ರೋಗಿಷ್ಟ ಸಾಮಾಜಿಕ–ಆರ್ಥಿಕ ವ್ಯವಸ್ಥೆ"ಯಾದ ಬಂಡವಾಳಶಾಹಿ ಇದನ್ನು ನಿಬರ್ಂಧಿಸಿದೆ. "ಮಾರುಕಟ್ಟೆಯ ಸಂಕೇತಗಳು ಸ್ಪಷ್ಟವಾಗಿ ಭವಿಷ್ಯದ ದುರಂತವನ್ನು ತಡೆಯುವಲ್ಲಿ ಯಾವುದೇ ಲಾಭವಿಲ್ಲ" ಎಂದು ಹೇಳಿದ್ದೇ ಇದಕ್ಕೆ ಕಾರಣವೆಂದಿದ್ದಾರೆ.

ಇದೀಗ ಈ ಕೋವಿಡ್–19 ಮಹಾಮಾರಿ, ಅನಿಬರ್ಂಧಿತ ಬಂಡವಾಳಶಾಹಿ ವ್ಯವಸ್ಥೆಯ "ನವ ಉದಾರವಾದಿ ಕ್ರೌರ್ಯ" ಮತ್ತು ಅದು "ಕಟ್ಟುವ ತಿರುಚಿದ ಮಾರುಕಟ್ಟೆಯ ರೂಪಗಳ"ನ್ನು ಪೂರ್ಣವಾಗಿ ಬಯಲಿಗೆಳೆದಿದೆ, ಎನ್ನುತ್ತಾರೆ ಚೋಮ್ಸ್ಕಿ.

ಪ್ರಸ್ತುತ ಯುಎಸ್ ಸಹಾ, ಇನ್ನೂ ಅನೇಕ ಯುದ್ಧಗಳಲ್ಲಿ ತೊಡಗಿಸಿಕೊಳ್ಳಲು ಸುಧಾರಿತ ಶಸ್ತ್ರಾಸ್ತ್ರ ಆಡಳಿತ ವ್ಯವಸ್ಥೆಗಳನ್ನು ಖರೀದಿಸಲು ನೂರಾರು ಶತಕೋಟಿ ಡಾಲರ್ ಗಳನ್ನು ಖರ್ಚು ಮಾಡುತ್ತದೆ. ಆದರೆ, ತನ್ನ ಆಸ್ಪತ್ರೆಗಳಿಗೆ ಹಾಸಿಗೆಗಳು, ಪಿಪಿಇ ಗಳು, ಮತ್ತು ವೆಂಟಿಲೇಟರ್ ಅಥವಾ ವೈರಸ್‌ಗೆ ಒಡ್ಡಿಕೊಂಡ ರಕ್ಷಣಾತ್ಮಕ ಸಾಧನಗಳನ್ನು ಒದಗಿಸಲು ಹಣವನ್ನು ಹೊಂದಿಲ್ಲ. ಈ ನೀತಿಗಳ ಪುನರ್ವಿಮರ್ಶೆ ನಡೆಸಬೇಕು. ಇವತ್ತಿನ ಪರಿಸ್ಥಿತಿಗೆ, ಸಾರ್ವಜನಿಕ ಆರೋಗ್ಯ ರಕ್ಷಣೆಯ ಸಾಮಾಜಿಕ ಜನರ ಹಕ್ಕಿನ ಮೇಲೆ ತಾವು ನಡೆಸಿದ ನಿರಂತರ ಕ್ರೂರ ಆಕ್ರಮಣವೆಂದು ಅರಿಯಬೇಕು. ಇದರಿಂದಾಗಿ ಲಕ್ಷಾಂತರ ಜನರ ಜೀವಹಾನಿಯಾಗಿದೆ ಮತ್ತು ಸಾವು ನೋವುಗಳನ್ನು ತಂದಿದೆ ಎಂದು ಒಪ್ಪಿಕೊಳ್ಳುವಂತಾಗಬೇಕು.

ನಾವೆಲ್ಲ ಕ್ಯೂಬಾ ಆಗಬೇಕು!

ಹೀಗಾಗಿ, ಅಭಿವೃದ್ಧ ಪಾಶ್ಚಿಮಾತ್ಯ ದೇಶಗಳಲ್ಲಿ ಕೊವಿದ್–19 ಮಹಾಮಾರಿಗೆ ಬಲಿಯಾದ ಸಾವಿರಾರು ಜನರ ರಕ್ತದ ಕಲೆ ಈ ದೇಶದ ನವ–ಉದಾರವಾದಿ ಪೀಳಿಗೆಯ ನಾಯಕರ ಕೈಗಳಿಗೆ ಅಂಟಿದೆ. ಈ ನಾಯಕರು ಪ್ರತಿನಿಧಿಸುವ ಅನಿಬರ್ಂಧಿತ ಬಂಡವಾಳಶಾಹಿ ವ್ಯವಸ್ಥೆಯ "ನವ ಉದಾರವಾದಿ ಕ್ರೌರ್ಯ"ದ ಅಪರಾಧಗಳನ್ನು ಕೊವಿದ್–19 ಮಹಾಮಾರಿ ಬಯಲಿಗೆಳೆದಿದೆ. ಇನ್ನೊಂದೆಡೆ ಸಮಾಜವಾದಿ ಕ್ಯೂಬಾ ತನ್ನನ್ನು ಆರ್ಥಿಕ ದಿಗ್ಬಂಧನಕ್ಕೆ ಗುರಿ ಮಾಡಿದ ಇಟಲಿಗೆ ವೈದ್ಯರ ತಂಡ ಕಳಿಸಿ ಮತ್ತು ಬ್ರಿಟಿಶ್ ವಿಹಾರಿ ಹಡಗಿನ ಪ್ರಯಾಣಿಕರಿಗೇ ಆಸರೆ ನೀಡಿ ಸಮಾಜವಾದಿ ಮಾನವೀಯತೆ ಮೆರೆದಿದೆ. ಈ ಎರಡರ ನಡುವಿನ ಅಗಾಧ ವ್ಯತ್ಯಾಸವನ್ನು ತೋರಿದ ಕೊವಿದ್–19 ಜಗತ್ತಿಗೆ ಕಲಿಸಿರುವ ಪಾಠವೆಂದರೆ 'ನಾವೆಲ್ಲರೂ ಕ್ಯೂಬಾ ಆಗಬೇಕು" ಎಂಬುದು. ಅಂದರೆ ಮಹಾನಾಯಕ ಫಿಡೆಲ್ ಕ್ಯಾಸ್ಟ್ರೋ ಪ್ರತಿಪಾದಿಸಿದ 'ವೈದ್ಯಕೀಯ ಅಂತರ್ರಾಷ್ಟ್ರೀಯ ಸೌಹಾರ್ದತೆ" ಮತ್ತು 'ಆರೋಗ್ಯ ಮೂಲಭೂತ ಹಕ್ಕು' ಎಂದು ಮಾನ್ಯ ಮಾಡುವ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಯ ನೀತಿಯನ್ನು ಪ್ರತಿಯೊಂದು ದೇಶ ಅಂಗೀಕರಿಸಿ ಪಾಲಿಸುವುದು.ಬಂಡವಾಳಶಾಹಿ ವ್ಯವಸ್ಥೆಯನ್ನು ಹಾಗೆ ಇರಲು ಬಿಟ್ಟು, ಆರೋಗ್ಯ ನೀತಿಯನ್ನು ಮಾತ್ರ ಬದಲಾಯಿಸಲು ಬರುವುದಿಲ್ಲ. ಆದ್ದರಿಂದ 'ನಾವೆಲ್ಲರೂ ಕ್ಯೂಬಾ ಆಗಬೇಕು" ಎಂಬುದು ಜನತೆಯನ್ನು ಬಲಿಕೊಟ್ಟು ಬಂಡವಾಳವನ್ನು ಪೂಜಿಸುವ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾಯಿಸಿ ಸಮಾಜವಾದಿ ಬದಲಿಯನ್ನು ಕಟ್ಟುವುದು ಸಹ.

JANASHAKTHI KANNADA VARA PATRIKE April 13-19, 2020 Price: Rs. 10/- Date of Publication: 10 April 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಡಿವೈಎಫ್ಐ ಉರ್ವಸ್ಟೋರ್ ಘಟಕದಿಂದ ತರಕಾರಿ ವಿತರಣೆ



ಡಿವೈಎಫ್ಐ ಉರ್ವ ಸ್ಟೋರ್ ಘಟಕದ ವತಿಯಿಂದ ತಾ. 10–04–2020ರಂದು ಉರ್ವ ಸ್ಟೋರ್ ಮತ್ತು ಸುಂಕದಕಟ್ಟೆ ಪ್ರದೇಶದಲ್ಲಿ ಸುಮಾರು 300 ಮನೆಗಳಿಗೆ ತರಕಾರಿ ವಸ್ತುಗಳನ್ನು ವಿತರಿಸಲಾಯಿತು. ಡಿವೈಎಫ್ಐ ಉರ್ವ ಸ್ಟೋರ್ ಘಟಕದ ಅಧ್ಯಕ್ಷರಾದ ಪ್ರಶಾಂತ್ ಎಂ. .ಬಿ, ಕಾರ್ಯದರ್ಶಿಯಾದ ಸುಕೇಶ್ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಸಲಾಯಿತು. ಕಾರ್ಮಿಕ ಮುಖಂಡರಾದ ಶಿವಪ್ಪ ಕೋಟ್ಯಾನ್ ಮತ್ತು ಡಿವೈಎಫ್ಐ ಮುಖಂಡರಾದ ಸುನಂದಾ ಕೆ, ಮನೋಜ್ ಕುಲಾಲ್, ನಾಗೇಂದ್ರ, ಇಕ್ಬಾಲ್, ಧನರಾಜ್ ಮುಂತಾದವರು ಉಪಸ್ಥಿತರಿದ್ದರು.

ವಿಮಾ ನೌಕರರ ಯೂನಿಯನ್ ಮೈಸೂರು ವಿಭಾಗ, ಬಿ.ಎಸ್.ಎನ್.ಎಲ್. ಎಂಪ್ಲಾಯಿಸ್ ಯೂನಿಯನ್ ಮತ್ತು ಸಿಐಟಿಯು ಜಿಲ್ಲಾ ಸಮಿತಿ ವತಿಯಿಂದ ಮಂಡ್ಯ ನಗರ, ಬೂದನೂರು ಮತ್ತು ಕೆ.ಎಂ. ದೊಡ್ಡಿಯಲ್ಲಿ ಇರುವ ಬೀದಿ ಬದಿ ವ್ಯಾಪಾರಿಗಳು, ಅಸಂಘಟಿತ ಕಾರ್ಮಿಕರು ಮತ್ತು ಬಿಹಾರ ಹಾಗೂ ಪಶ್ಚಿಮ ಬಂಗಾಳದ ವಲಸೆ ಕಾರ್ಮಿಕರಿಗೆ ಆಹಾರ ಪದಾರ್ಥಗಳ ಕಿಟ್ ವಿತರಣೆ ಮಾಡಲಾಯಿತು, lic ಮೈಸೂರು ವಿಭಾಗದ ಅಧ್ಯಕ್ಷರಾದ ಎಸ್. ಕೆ. ರಾಮು, ಮುಖಂಡರಾದ, ಫಿಲಿಪ್ಸ್ ಜೇಮ್ಸ್, ಸಿದ್ದರಾಜು, ಬಿ.ಎಸ್.ಎನ್. ಎಲ್. ಯೂನಿಯನ್ ಮುಖಂಡರಾದ ಎಂ.ಸಿ.ಬಾಲಕೃಷ್ಣರವರು, ಎಂ. ಪುಟ್ಟಮಾದು ಜಿಲ್ಲಾ ಅಧ್ಯಕ್ಷರು Aiawu, ಮಂಡ್ಯ, ಶಿವಕುಮಾರ್. ಎಂ.ಎಂ. CITU ಜಿಲ್ಲಾ ಅಧ್ಯಕ್ಷರು, ಸಿ.ಕುಮಾರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಚಂದ್ರಶೇಖರ ಜಿಲ್ಲಾ ಕಾರ್ಯದರ್ಶಿ CITU ಹಾಜರಿದ್ದರು.





ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 28 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಕಾರ್ಮಿಕ ಇಲಾಖೆಯ ಹೆಸರಲ್ಲಿ ಬಿಟ್ಟಿ ಪ್ರಚಾರ? (ಎ.10)
* ವಂಚನೆಗಿಳಿದ ನ್ಯಾಯ ಬೆಲೆಯ ಅಂಗಡಿಗಳು (ಎ.9)
* ರಾಷ್ಟ್ರಪತಿಗಳಿಗೆ ಯೆಚುರಿ ಪತ್ರ (ಎ.9)
* ಕಾರ್ಮಿಕರಿಗೆ ಎಪ್ರಿಲ್ ಸಂಬಳ ಬಂತಾ? (ಎ.8)
* ನಡೆದೂ ನಡೆದೂ ಜೀವಬಿಟ್ಟ ಗಂಗಮ್ಮ (ಎ.7)
* ಸಂಕಷ್ಟದಲ್ಲಿರುವವರಿಗೆ ಅನ್ನ ನೀಡಿದ ಕಾರ್ಮಿಕ ಸಂಘಟನೆ (ಎ.6)
* ಕೊರೊನಾಗಿಂತ ವೇಗವಾಗಿ ಹರಡುವ ಸುಳ್ಳುಸುದ್ದಿಗಳು (ಎ.6)
* ಎಚ್ಚರ! ವಿದ್ಯುತ್ ದೀಪಗಳನ್ನು ಆರಿಸಬೇಡಿ (ಎ.5)
* ಕೋಮುವಾದಿ ವೈರಸ್ಸಿಗೆ ವರವಾದ ತಬ್ಲಿಗಿ (ಎ.4)

ಯೂಟ್ಯೂಬ್ ನಲ್ಲಿ 'Janashakthi Media' ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ 'Subscribe'ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ 'ಬೆಲ್ ಐ ಕಾನ್ ಬಟನ್' ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

ಕವನ

ದೂರ ನಿಲ್ಲು ದೂರ ನಿಲ್ಲು



ದೂರ ನಿಲ್ಲು ದೂರ ನಿಲ್ಲು
ಮೂರು ಮಾರು ದೂರನಿಲ್ಲು
ಮುಟ್ಟಿಸದಿರು ಕೈಯ್ಯ ತಂದು
ಮುಟ್ಟಿಸದಿರು ಮೈಯ್ಯ ನಿಂದು
ದೂರ ನಿಯಮ ಜಾರಿ ಮಾಡು
ಇಂದಿನಿಂದಲೇ ಈಗಿನಿಂದಲೇ

ಮುಟ್ಟಬಾರದೆಂಬ ನಿಯಮ
ಹೊಚ್ಚ ಹೊಸದೆ ನಮ್ಮೂರಿಗೆ
ಕಾಲಾನುಕಾಲದಿಂದ ದೂರನಿಲ್ಲಿಸಿ
ದಾರಿ ಸವೆಸಿ ರೂಢಿ ನಮಗಿದಲ್ಲವೆ

ಮುಟ್ಟಲೆಂದೆ ಹೋರಾಟ ನಡೆಸಿ
ಮುಟ್ಟಲೆಂದೆ ಮೆರವಣಿಗೆ ನಡೆಸಿ
ತಲೆ ಬುರುಡೆಗಳೆ ಹೋಳುಗಳಾಗಿ
ಮೈಯ್ಯ ಮೂಳೆ ಪುಡಿಗಳಾಗಿ
ಇನ್ನೂ ದೂರ ಕಾಯುತಿರುವೆ
ಇದೆಂಥಾ ದೂರ ಮಾರು ದೂರ !

ಮೈಲಿಗೆಯ ಮುಟ್ಟಿದಲ್ಲ
ಕೈದಿಗಳ ಮುಟ್ಟಿದಲ್ಲ
ಮುಟ್ಟಬೇಡ ದೂರನಿಲ್ಲು
ಮನುಕುಲದ ಉಳಿವಿಗೆ

ಕರುಳಕುಡಿಯ ದೂರವಿಡು
ಅಪ್ಪ ಮಗ ಅಣ್ಣ ತಮ್ಮ
ಅಕ್ಕ ತಂಗಿ ಅತ್ತಿಗೆ ಅಮ್ಮ
ಯಾರೆ ಇರಲಿ ದೂರ ಇರು
ತಿಳಿಯದವರ ಮುಂದೆ ನೀನು
ಸುಳಿಯದಿರು ಗುಂಪಿನಲ್ಲಿ

ಕಾಡಿನಲ್ಲಿ ಬದುಕಬಹುದು
ಮೋಡದಲ್ಲಿ ಬದುಕಬಹುದು
ಒಂಟಿ ತನವೆ ತಂಟೆರಹಿತ
ಸಮುದ್ರ ದಾಟಿ ಬಂದವರನು
ಪರದೇಶದಿಂದ ಬಂದವರನು
ಪರ ಊರಿನಿಂದ ಬಂದವರನು
ನಂಬಲಾಗದು ಮುಟ್ಟಕೂಡದು

ನೆಂಟರೆಂದು ಬಂದರೂನು
ಸ್ನೇಹದಿಂದ ಆಗಮಿಸಿದರೆ
ಸುರಸುಂದರಿ ಸಹವಾಸ ಕೂಡ
ರಾಜಕುವರ ಕುವರಿ ಆದರೂನು
ಮುಟ್ಟಕೂಡದು ನಂಬಲಾಗದು

ನಿನ್ನ ಉಳಿವು ನಿನ್ನ ಬಳಿಯೆ
ಜೀವತೆಗೆವ ಅಸ್ತ್ರಗಳು
ಬರಿಗಣ್ಣಿಗೆ ಮಹಾಮಾಯೆ
ಮುಟ್ಟದರೆ ಗಾಳಿಘಮಲು
ಹಿಡಿದು ಶಿಕ್ಷೆ ಕೊಡಲೆಂದರೆ
ಕತ್ತಿಯಿಲ್ಲ ಖಡ್ಗವಿಲ್ಲ
ಕುದುರೆಯಿಲ್ಲ ರಥಗಳಿಲ್ಲ

ಜೀವವುಳಿಸಿ ಬದುಕಲೆಂದ್ರೆ
ದೂರವುಳಿ ಒಳಗೆ ಇರು
ಒಂಟಿಯಾಗಿ ಲೋಕ ನೋಡು
ಸ್ವಾರ್ಥವಾದ್ರು ಮರುಗದಿರು
ಸಹಜೀವನ ಸಹಿಸುತಿರು
ಮನವ ತಬ್ಬು ತನುವ ಅಪ್ಪು
ಕೋಟಿ ಕೋಟಿ ಜನರ ನಡುವೆ
ಒಂಟಿಯಾಗಿ ನಿಂತುಕೋ
ಆಗ ನಿನಗೆ ಲೋಕವಿಹುದು
ಆಗ ನಿನಗೆ ಬದುಕು ಇಹುದು.

–ಡಾ.ಎಲ್. ಹನುಮಂತಯ್ಯ

ಪ್ರಭು ಬಂಧಿತ ಕೈದಿ

ಪ್ರಭು ಹೇಳಿದ
ಚಪ್ಪಾಳೆ ತಟ್ಟೆಂದು
ಬದುಕು ರಜೆಪಡೆದರೆ ಹಡೆವುದು ಹಸಿವನ್ನೆ
ಹೊಟ್ಟೆತಾಳದ ಸದ್ದನ್ನು
ನುಂಗಿಯೇ ಬಿಟ್ಟಿತು
ಚಪ್ಪಾಳೆ ಗುಂಗು

ಪ್ರಭು ಹೇಳಿದ
ದೀಪ ಹಚ್ಚೆಂದು
ಆತ್ಮದ ಕಣ್ಣಿಗೆ ಕುರುಡು ಚಸ್ಮಾ ತೊಡಿಸಿ.
ಹಣತೆ ಕೆಳಗೆ ಹಸಿದ
ಕೌಳ ಕಣ್ಣಿನ ಬೆಂಕಿ
ತುಬಕ್ಕನೆ ಉಗಿಯಿತು
ತಣ್ಣನೆಯ ಒಲೆ ಬೂದಿ ಹಾರುವಂತೆ.

ಪ್ರಭು ಹೇಳಿದ
ಹೊರಗೆ ಬರಲೇ ಬೇಡಿ.
ಬಯಲಲ್ಲಿ ಕೊಳೆತಿತ್ತು ಸತ್ಯ
ಅನಾಥ ಶವದಂತೆ.
ಪ್ರಭು ಹೇಳಿದ
ಬಾಯಿ ಮೂಗಿಗೆ ಕವಚ ಹಾಕಿ ಎಂದು
ಸಾವಿನ ಘಮಟು ಮನೆಗೆ
ಅರಮನೆಗೆ
ಅಂಟದಿರಲೆಂದು.

ಪ್ರಭು ಬಾಯ್ತುಂಬ
ಹೊಗಳಿದ
ಜನರ ಬಾಯ್ತುಂಬಿದ ಉಗುಳು
ಸುನಾಮಿ
ಯಾಗದಿರಲೆಂದು.

ಹಸಿದ ಹೊಟ್ಟೆಯ ಮುಂದೆ
ಸಾವ ಬಯಲಿನ ನಡುವೆ
ವಿರಾಟ್ ರೂಪದ ಪ್ರಭು
ಭಗವದ್ಗೀತೆ ಹಾಡಿದ
ಕೊರೊನಾ ರಣಕೇಕೆ
ನಾಚುವಂತೆ.

ನನಗೆ ಗೊತ್ತಿದೆ
ಸುಡುವ ಸಂಕಟ
ಸತ್ತ ಪ್ರೀತಿ ವದ್ದೆ ಕನಸು
ಸುಟ್ಟ ಬದುಕು
ಸರಳಾಗಿ ಸೆಟೆದು
ಪ್ರಭುವನ್ನು ಬಂಧಿಸುತ್ತವೆ.

ಪ್ರಭು
ನವರಂಧ್ರ ಕಳೆದುಕೊಂಡ
ಕೈದಿ.

–ಪಿ.ಆರ್. ವೆಂಕಟೇಶ್, ಬಳ್ಳಾರಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**